ಪ್ರಚೋದನೆ


# ಲಂಕೇಶ್

ಅಕ್ಟೋಬರ್ 10, 2012 ಪುಟ 20 ರೂ. 14/-



ಕುವೆಂಪು ಹೆಸರಲ್ಲಿ SCZ

## ದರ್ಶನ್ ಕೈವಾಡ ಎಷ್ಟು ನಿಜ?



# ಯಶ್! ಬುಸ್!! ಟುಸ್!!!

## ಮಳೆ ಬೀಳುವವರೆಗೂ ಪರಿಹಾರವಾಗದ ಕಾವೇರಿ ಸಮಸ್ಯೆ



## ಡೊನಾಲ್ಡ್ ಆ್ಯಂಡರ್ಸನ್ ಎಂಬ ಇನ್ನೊಂದು ಹುಲಿಯ ಜಾಡಿನಲ್ಲಿ

ಹೊಸದುರ್ಗ:


## ಗೂಳಿಹಟ್ಟಿ ಧೈರ್ಯ ಚಿದಂಬರ ರಹಸ್ಯ



## ಪಶುವೈದ್ಯರ ರಾಜೀನಾಮೆ: ಗೋರಕ್ಷಕರನ್ನು ಸರ್ಕಾರ ರಕ್ಷಿಸಲಿ

# ಡೊನಾಲ್ಡ್ ಆ್ಯಂಡರ್ಸನ್ ಎಂಬ ಇನ್ನೊಬ್ಬ ಸಾಹಸಿಯ ಜಾಡು ಹುಡುಕುತ್ತಾ...!

● ಪಾರ್ವತೀಶ







ಆಗಿನ್ನೂ ಸಮಯ ಬೆಳಗಿನ 10-20.

ನಾವು ತಿಂಗಳಾನುಗಟ್ಟಲೆ ಹುಡುಕಿದ್ದ, ನೋಡಲೇಬೇಕೆಂದು ಕಾತರಿಸಿದ್ದ ವಿಶಿಷ್ಟ ವ್ಯಕ್ತಿಯೊಬ್ಬನ ಭೇಟಿಗಾಗಿ ನಾವು ತಯಾರಾಗಿ ನಿಂತಿದ್ದೆವು.

ಆತ ಡೊನಾಲ್ಡ್ ಆ್ಯಂಡರ್ಸನ್!

ದಕ್ಷಿಣ ಭಾರತದ ನರಭಕ್ಷಕ ಹುಲಿಗಳ ಪ್ರಖ್ಯಾತ ಬೇಟೆಗಾರರಾಗಿದ್ದ ಕೆನೆತ್ ಆ್ಯಂಡರ್ಸನ್ ಮಗನೀತ.

ಕನ್ನಡದ ಸಾಹಿತ್ಯಾಭಿರುಚಿ ಇರುವ ಬಹುತೇಕ ಓದುಗರಿಗೆ ಕೆನೆತ್ ಆ್ಯಂಡರ್ಸನ್ ಒಂದು ಪರಿಚಿತ ಹೆಸರು. ಈತನ ಶಿಕಾರಿ ಅನುಭವಗಳನ್ನು 1990 ರಲ್ಲಿ ಆಗಿನ 'ಲಂಕೇಶ್ ಪತ್ರಿಕೆ'ಯಲ್ಲಿ ಪೂರ್ಣಚಂದ್ರ ತೇಜಸ್ವಿ ಅನುವಾದಿಸಿ ಪ್ರಕಟಿಸಿದ್ದರು. ನಂತರದ ವರ್ಷಗಳಲ್ಲಿ ತೇಜಸ್ವಿಯವರ ಪುಸ್ತಕ ಪ್ರಕಾಶನವು ಇದನ್ನೆಲ್ಲಾ ನಾಲ್ಕು ಕಿರು ಸಂಪುಟಗಳಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಸಾವಿರಾರು ಜನ ಇವನ್ನೆಲ್ಲಾ ಓದಿ ಆನಂದಿಸಿದ್ದಾರೆ, ಬೆರಗಾಗಿದ್ದಾರೆ.

ಆದರೆ ಇಂತಹ ರೋಮಾಂಚನಕಾರಿ ಸಾಹಸಮಯ ಜೀವನ ನಡೆಸಿದ ಬೆಂಗಳೂರಿನಲ್ಲೇ ವಾಸವಿದ್ದ ಕೆನೆತ್ ಆ್ಯಂಡರ್ಸನ್ ಆನಂತರ ಎಲ್ಲಿಗೆ ಹೋದ? ಏನಾದ? ಆತನ ಅಂತ್ಯ ಹೇಗಾಯಿತೆಂಬ ವಿವರಗಳು ಯಾರಿಗೂ ಸಿಗಲಿಲ್ಲ, ಈ ವಿವರಗಳಿರಲಿ, ಇತ್ತೀಚಿನವರೆಗೂ ಕೆನೆತ್ ಆ್ಯಂಡರ್ಸನ್‌ನ ಒಂದು ಫೋಟೋ ಸಹ ಕನ್ನಡ ಓದುಗರಿಗೆ ನೋಡಲು ಸಿಕ್ಕಿರಲಿಲ್ಲ.

ಈಗ್ಗೆ ಒಂದೆರಡು ವರ್ಷಗಳಿಂದ ನಾವೊಂದಿಷ್ಟು ಮಂದಿ ಕೆನೆತ್ ಆ್ಯಂಡರ್ಸನ್‌ನ ಇತ್ಯೋಪರಿಗಳನ್ನು ಹುಡುಕಲು ಶುರು ಮಾಡಿದ್ದೆವು. ಈ ತಲಾಶ್‌ನಲ್ಲೇ ನಮಗೆ ಕೆನೆತ್‌ನ ಸಮಾಧಿಯೂ ಬೆಂಗಳೂರಿನಲ್ಲೇ ಸಿಕ್ಕಿತು. ಹಾಗೆ ಮುಂದುವರೆದ ಹುಡುಕಾಟವೂ ಅವತ್ತು ಕೆನೆತ್‌ನ ಏಕೈಕ ಮಗ ಡೊನಾಲ್ಡ್‌ನೊಂದಿಗೆ ಮುಖಾಮುಖಿಯಾಗುವ ಅವಕಾಶ ಸೃಷ್ಟಿಸಿತ್ತು.

ಕಳೆದ ಸೆಪ್ಟಂಬರ್ 22ರ ಶನಿವಾರ ಬೆಳಗ್ಗೆ ಹತ್ತೂವರೆ ಗಂಟೆಗೆ ಸರಿಯಾಗಿ ನಮ್ಮ ಭೇಟಿಗೆ ಸಿಗುವುದಾಗಿ ಡೊನಾಲ್ಡ್ ಸಂದೇಶ ಕಳುಹಿಸಿದ್ದರು.

ನಾನು, ಕ್ಯಾಪ್ಟನ್ ಗೌರಿ ಜೊತೆಗೆ ಮಿತ್ರರಾದ ಬಾಲಾಜಿ ಹಾಗೂ ಚಂದನ್ ಈ ನಾಲ್ಕು ಜನ ಬೆಳಗ್ಗೆ ಬೇಗನೆ ನಮ್ಮ ಮನೆಗಳಿಂದ ಹೊರಟು ಒಂದೆಡೆ ಕಲೆತು ಕಾರ್‌ನಲ್ಲಿ ಕೆಲತಾಸುಗಳ ಪ್ರಯಾಣ ಮಾಡಿ ಸರಿಯಾಗಿ ಹತ್ತೂ ಇಪ್ಪತ್ತಕ್ಕೆ ನಿಗದಿತ ಸ್ಥಳ ತಲುಪಿದ್ದೆವು. ಡೊನಾಲ್ಡ್ ಟೈಂ ವಿಚಾರದಲ್ಲಿ ಬಹಳ ಶಿಸ್ತಿನ ಮನುಷ್ಯ, ಆತ ಲೇಟ್ ಲತೀಫ್‌ಗಳನ್ನು ಸಹಿಸುವುದಿಲ್ಲ ಎಂದು ಆ ಭೇಟಿ ವ್ಯವಸ್ಥೆ ಮಾಡಿಕೊಟ್ಟಿದ್ದ ಮಿತ್ರ ವಾರ್ನಿಂಗ್ ನೀಡಿದ್ದರಿಂದ ನಾವು ಹತ್ತು ನಿಮಿಷ ಮೊದಲೇ ಸ್ಥಳ ತಲುಪಿದ್ದೆವು. ಕೆಲವು ಮಾವಿನ ಮರಗಳು, ಪಪ್ಪಾಯಿ ಹಾಗೂ ಪುಟ್ಟ ಹೂಗಿಡಗಳ ಪ್ರಶಾಂತ ವಾತಾವರಣದಲ್ಲಿ, ಪಕ್ಷಿಗಳ ಗದ್ದಲದ ನಡುವೆ ಡೊನಾಲ್ಡರ ಪುಟ್ಟ ಮನೆ ಇತ್ತು.



ಜಿಂಕೆಯನ್ನು ನುಂಗುತ್ತಿರುವ ಹೆಬ್ಬಾವಿನ ಚಿತ್ರ

'ಪ್ಲೀಸ್ ಕಮ್ ಇನ್' ಎನ್ನುತ್ತಾ ನಮ್ಮನ್ನು ಸ್ವಾಗತಿಸಿದ ಆರಡಿ ಎತ್ತರದ ಡೊನಾಲ್ಡ್‌ಗೆ ಈಗಿನ್ನೂ ಕೇವಲ ಎಪ್ಪತ್ತೆಂಟು ವರ್ಷಗಳಾಗಿದೆ. ವೃದ್ಧಾಪ್ಯ, ಕೊಂಚ ಅನಾರೋಗ್ಯಗಳು ಇವೆಯಾದರೂ ಡೊನಾಲ್ಡರ ಕಣ್ಣುಗಳಲ್ಲಿ ಈಗಲೂ ಮಿಂಚಿತ್ತು. ಪರಸ್ಪರ ಕೈಕುಲುಕಿ ನಾವು ಮಾತಿಗೆ ಕುಳಿತ ಕೆಲವೇ ನಿಮಿಷಗಳಲ್ಲಿ ನಾವೆಲ್ಲಾ ಇಲ್ಲಿನ ಪ್ರಪಂಚದಿಂದ ಬೇರ್ಪಟ್ಟೆವು. ಈಗ್ಗೆ ಐವತ್ತು ಅರವತ್ತು ವರ್ಷಗಳ ಹಿಂದಿನ ಕರ್ನಾಟಕದ ಕಾಡುಗಳು ಅಲ್ಲಿನ ಹುಲಿ, ಚಿರತೆ, ಆನೆ, ಹೆಬ್ಬಾವು, ಕಿರುಬ, ಜಿಂಕೆ, ಕಾಡೆಮ್ಮೆ, ಮಹೀರ್ ಮೀನುಗಳ ಕತೆಗಳನ್ನು ಡೊನಾಲ್ಡ್ ಹೇಳುತ್ತಾ ಹೋದಂತೆ ನಾವು ನಾಲ್ವರೂ ಮಂತ್ರ ಮುಗ್ಧರಾಗಿ ಕೇಳುತ್ತಾ ಕೂತೆವು.

ಕೆನೆತ್ ಆ್ಯಂಡರ್ಸನ್ ತನ್ನ ನರಭಕ್ಷಕ ಹುಲಿಗಳ ಬೇಟೆಯ ಘಟನೆಗಳನ್ನು ನಿರೂಪಿಸುವಾಗ ಅನೇಕ ಕಡೆ ಮಗ ಡೊನಾಲ್ಡ್‌ನ ಬಗ್ಗೆಯೂ ಪ್ರಸ್ತಾಪಿಸುತ್ತಾನೆ. ತಂದೆಯಂತೆಯೇ ಡೊನಾಲ್ಡ್ ಸಹ ಆ ಕಾಲದ ಮಹಾನ್ ಸಾಹಸಿ ಶಿಕಾರಿಯಾಗಿದ್ದಾತ.

'If you are not a strict conservationist, I will show you some photographs' ಎಂದರು ಡೊನಾಲ್ಡ್, ನಸುನಗುತ್ತಾ.

ಅದೊಂದು ಬೇರೆಯದೇ ಆದ ವಿಸ್ಮಯ ಜಗತ್ತಿನಂತಿತ್ತು, ಮುಂದಿನ ಸಂಚಿಕೆಗಳಲ್ಲಿ ಅವುಗಳ ಪೈಕಿ ಕೆಲವು ಫೋಟೋಗಳನ್ನಾದರೂ ಲಂಕೇಶ್‌ನಲ್ಲಿ ಪ್ರಕಟಿಸಲು ಸಾಧ್ಯವಾದೀತೇನೊ ಎಂಬ ಪ್ರಯತ್ನದಲ್ಲಿದ್ದೇವೆ.

ಅದೊಂದೆಡೆ ಇರಲಿ.

ಈ ಡೊನಾಲ್ಡ್‌ರ ಕುಟುಂಬದ ಕತೆ ಸ್ವಾರಸ್ಯಕರವಾಗಿದೆ. ಬಹುಶಃ 18ನೇ ಶತಮಾನದ ಆರಂಭಕಾಲದಲ್ಲಿ ಡೊನಾಲ್ಡರ ಪೂರ್ವಿಕರು ಸ್ಕಾಟ್‌ಲೆಂಡ್‌ನಿಂದ ಭಾರತಕ್ಕೆ ಬಂದಿದ್ದಾರೆ.

"ನನಗೆ ತಿಳಿದಿರುವಮಟ್ಟಿಗೆ ನಾನು ಇಲ್ಲಿಯೇ ಹುಟ್ಟಿ ಬೆಳೆದ ಐದನೇ ತಲೆಮಾರಿನವನು" ಎಂದರು ಡೊನಾಲ್ಡ್. "ನಾನು ಇಂಡಿಯನ್" ಎಂತಲೂ ಸೇರಿಸಿದರು. ಇ… ತಂದೆಯ ತಂದೆ ಅಂದರೆ ಕೆನೆತ್‌ರ ತಂದೆ ಬ್ರಿಟಿ… ಸೇನೆಯಲ್ಲಿ ಕೆಲಸ ಮಾಡುತ್ತಾ ಇಂಡಿಯಾದ ಅನೇಕ … ಸುತ್ತುತ್ತಿದ್ದರಂತೆ. ಆಗೊಮ್ಮೆ ಇವರ ಕುಟು… ಹೈದರಾಬಾದ್‌ನಲ್ಲಿದ್ದಾಗ 1916 ರಲ್ಲಿ ಕೆನೆತ್ ಆ್ಯಂಡರ್ಸ… ಹುಟ್ಟಿದರು. ತನ್ನ ಅಜ್ಜನ ಮಿಲಿಟರಿ ಸಾಹಸಗಳ … ಡೊನಾಲ್ಡ್‌ಗೆ ಈಗಲೂ ನೆನಪಿದೆ.

1899 ರಿಂದ 1901 ರವರೆಗೆ ಚೀನಾ ದೇಶ… ಬಾಕ್ಸರ್ ಬಂಡಾಯ ನಡೆಯಿತು. ವಿದೇಶಿ ಆಕ್ರಮ… ಹಾಗೂ ಕ್ರಿಶ್ಚಿಯಾನಿಟಿ ವಿರುದ್ಧ ಚೀನ ದೇಶ ಪ್ರೇಮಿ… ತೀವ್ರ ಹಿಂಸಾತ್ಮಕ ದಂಗೆ ನಡೆದಾಗ ಡೊನಾಲ್ಡ್‌ನ ಅಜ್ಜ… ಪ್ರತ್ಯಕ್ಷದರ್ಶಿಯಾಗಿದ್ದನಂತೆ. ಆಗೊಮ್ಮೆ ದಂಗೆಕೋರರು ವಿ… ಹಾಗೂ ವಿದೇಶಿಯರ ಪರವಾಗಿದ್ದ ಚೀನಿ ಚಕ್ರವರ್ತಿ… ಸೇನಾಧಿಕಾರಿಯೊಬ್ಬ ಆರು ದಂಗೆಕೋರರನ್ನು ಸೆರೆ ಹಿಡಿ… ತಂದಾಗ ಅವರ ಕೈಗಳನ್ನು ಬೆನ್ನ ಹಿಂದೆ ಕಟ್ಟಿ ಹಾ… ಆದೇಶಿಸಿದನಂತೆ. ನಂತರ ಕೈಲಿ ಖಡ್ಗ ಹಿಡಿ… ಸೆರೆಯಾಳುಗಳೆಲ್ಲಾ ತಲೆಬಗ್ಗಿಸಿ ಸಾಲಾಗಿ ಮೊಣಕಾಲ ಮೆ… ಕೂರಲು ಹೇಳಿ, ಆಮೇಲೆ ಒಬ್ಬೊಬ್ಬರ ರುಂಡ ಕಡಿ… ಚೆಲ್ಲಿದ್ದನ್ನು ನೋಡಿದ ಮಿಲಿಟರಿ ಅಜ್ಜ ಇಂಡಿಯ… ಹಿಂತಿರುಗಿದಾಗ ತಾನು ಕಂಡದ್ದನ್ನು ಮನೆಯವರಿಗೆ ಹೇ… ಇವೆಲ್ಲಾ ಕತೆಗಳಾಗಿ ಹರಿದು ಬಂದು ಡೊನಾಲ್ಡ್ ನೆನಪಿನ… ಇವೆ.

ಕೆನೆತ್ ಆ್ಯಂಡರ್ಸನ್ ಬೆಂಗಳೂರಿನ ಹೆಚ್‌ಎಎಲ್… ಕೆಲವರ್ಷ ಹಾಗೂ ಅಂಚೆ ಇಲಾಖೆಯಲ್ಲಿ ಕೆ… ಮಾಡುತ್ತಿದ್ದರು. ಡೊನಾಲ್ಡ್‌ನ ತಾಯಿ ಬ್ಲಾಸಂ ಮಿ… ಅಯಾಸನ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದು ಕೆ… ಜೊತೆ ಮದುವೆಯಾದ ನಂತರ ಪೂರ್ಣಾ… ಗೃಹಿಣಿಯಾದರು. ಕೆನೆತ್ ಹಾಗೂ ಡೊನಾಲ್ಡ್ ಜೆ… ಬ್ಲಾಸಂ ಮಿನೆಟ್ ಸಹ ಬೇಕಾದಷ್ಟು ಕಾಡು ಸುತ್ತಿ ಶಿ… ಸಾಹಸಗಳಲ್ಲೂ ಜೊತೆ ಇರುತ್ತಿದ್ದರು.




ಸಾಕು ಕರಡಿ ಬ್ರೂನೊ ಜೊತೆ ಡೊನಾಲ್ಡ್

ಕಾಡುಪ್ರಾಣಿಗಳನ್ನು ಬೇಟೆಯಾಡಿ ಗುಂಡಿಕ್ಕಿ ಕೊ… ಬಗ್ಗೆ ಈಗಂತೂ ಕಠಿಣವಾದ ಕಾನೂನುಗಳೇ ಇವೆ. … 19ನೇ ಶತಮಾನದ ಆರಂಭದಿಂದ 6ನೇ ದಶಕದವ… ಜನರಿಗೆ ಉಪದ್ರವ ನೀಡುತ್ತಿದ್ದ ಕಾಡುಪ್ರಾಣಿಗಳನ್ನು ಕೊ… ರೆವಿನ್ಯೂ ಇಲಾಖೆ ನಗದು ಬಹುಮಾನ ನೀ… ಪರಿಪಾಠವಿತ್ತು, ಅಲ್ಲದೆ ಕೃಷಿ ವಿಸ್ತರಣೆಯಾಗುತ್ತಾ … ಪ್ರದೇಶದ ಒತ್ತುವರಿಯೂ ಈ ಅವಧಿಯಲ್ಲೇ ವ್ಯಾಪ…


## ತೇಜಸ್ವಿಯವರ ಪುಸ್ತಕಗಳನ್ನು ನೋಡಿ ಬೆರಗಾದ ಡೊನಾಲ್ಡ್!

ಡೊನಾಲ್ಡ್ ಆ್ಯಂಡರ್ಸನ್ ಕರ್ನಾಟಕದಲ್ಲೇ ಹುಟ್ಟಿ ಬೆಳೆದಿದ್ದರೂ ಇಲ್ಲಿನ ಮುಖ್ಯವಾಹಿನಿಯೊಂದಿಗೆ ಅವರಿಗೆ ಸಂಪರ್ಕ ಇಲ್ಲವೇ ಇಲ್ಲ ಎನ್ನಬಹುದು. ಅವರಿಗಿರುವುದು ಕೆಲವೇ ಕೆಲವು ಬೆರಳೆಣಿಕೆಯಷ್ಟು ಗೆಳೆಯರು. ಸಮಯ ಸಿಕ್ಕಾಗ ಈಗಲೂ ಕಾಡು ಸುತ್ತುವುದು, ಉಳಿದಂತೆ ತನ್ನ ಪಾಡಿಗೆ ತನ್ನ ಪುಟ್ಟ ಮನೆಯೊಳಗೆ ಗುಹೆಯೊಳಗಿರುವ ಹುಲಿಯಂತೆ ಏಕಾಂಗಿಯಾಗಿದ್ದು ಬಿಡುವುದು ಡೊನಾಲ್ಡ್ ಪ್ರವೃತ್ತಿ, ಅವರಿಗೆ ಕನ್ನಡ ಸ್ವಲ್ಪ ಮಾತ್ರ ಗೊತ್ತು, ಇಂಗ್ಲಿಷ್ ಹಾಗೂ ತಮಿಳು ಚೆನ್ನಾಗಿ ಗೊತ್ತು, ಇನ್ನು ಕನ್ನಡ ಪತ್ರಿಕೆ, ಪುಸ್ತಕ, ಬರಹಗಾರರು, ಟಿವಿ - ಇವೆಲ್ಲಾ ಅವರ ಜಗತ್ತಿನಿಂದ ದೂರವೇ ಇವೆ.





ಡೊನಾಲ್ಡ್ ವಿನಾಕಾರಣ ಯಾರನ್ನೂ ಭೇಟಿ ಮಾಡಲು ಬಯಸುವುದಿಲ್ಲ, ನಮಗೂ ಸಹ ಮೂರು ತಿಂಗಳ ಸತತ ಪ್ರಯತ್ನದ ನಂತರವೇ ಭೇಟಿಯ ಅವಕಾಶ ಸಿಕ್ಕಿದ್ದು. ತಾನಿರುವ ಸ್ಥಳದ ಬಗ್ಗೆ ಯಾರಿಗೂ ಹೇಳಬಾರದೆಂಬ ಆತನ ಕಂಡೀಷನ್‌ಗೆ ನಾವು ಒಪ್ಪಿದ ಮೇಲಷ್ಟೇ ಆತ ನಮಗೆ ಸಿಕ್ಕಿದ್ದು, ತನ್ನೊಳಗೆ ಅಸಂಖ್ಯ ಕಾಡಿನ ಕತೆಗಳನ್ನು ಇಟ್ಟುಕೊಂಡಿರುವ ಡೊನಾಲ್ಡ್‌ಗೆ ನಾವಲ್ಲಿಗೆ ಹೋದ ಹಿಂದಿನ ದಿನವಷ್ಟೇ ಪೂರ್ಣಚಂದ್ರ ತೇಜಸ್ವಿಯವರು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿರುವ ಕೆನೆತ್ ಆ್ಯಂಡರ್ಸನ್‌ನ ನಾಲ್ಕು ಪುಸ್ತಕಗಳು ನೋಡಲು ಸಿಕ್ಕಿದ್ದವು. ಇಷ್ಟು ವರ್ಷ ಕಾಲ ಕರ್ನಾಟಕ ಹಾಗೂ ತಮಿಳುನಾಡಿನ ಕಾಡುಗಳಲ್ಲಿ ಓಡಾಡಿಕೊಂಡಿದ್ದರೂ ಇನ್ನೊಂದು ಗ್ರಹದಲ್ಲಿ ಬದುಕಿದ್ದರೇನೊ ಎಂಬಂತಿರುವ ಡೊನಾಲ್ಡ್‌ರಿಗೆ ಅವರ ಗೆಳೆಯನೊಬ್ಬ ಈ ಪುಸ್ತಕಗಳನ್ನು ತರಿಸಿಕೊಟ್ಟಿದ್ದನಂತೆ.



"ನನ್ನ ತಂದೆಯ ಶಿಕಾರಿ ಅನುಭವಗಳ ಇಂಗ್ಲಿಷ್ ಪುಸ್ತಕಗಳನ್ನು ಸಾವಿರಾರು ಜನ ಓದಿ ಇಷ್ಟಪಟ್ಟಿದ್ದಾರೆ. ಆದರೆ ಕನ್ನಡದಲ್ಲೂ ಇವು ಅನುವಾದಗೊಂಡು ಇಷ್ಟೊಂದು ಪಾಪ್ಯುಲರ್ ಆಗಿವೆ ಅಂತಾ ಖಂಡಿತಾ ಗೊತ್ತಿರಲಿಲ್ಲ" ಅಂದರು ಡೊನಾಲ್ಡ್.

ನಂತರ ತೇಜಸ್ವಿ ಬಗ್ಗೆ, ಅವರ ಬರಹ, ಪುಸ್ತಕಗಳು, ಪ್ರಕಾಶನ ಸಂಸ್ಥೆಯ ಬಗ್ಗೆ ಒಂದಷ್ಟು ವಿವರಗಳನ್ನು ಕೇಳಿದರು. ಅವೆಲ್ಲಾ ಅದೇ ಪುಸ್ತಕದಲ್ಲಿವೆ ಎಂದೆವು. ನಮ್ಮ ಇತ್ಯೋಪರಿ, ಹಿನ್ನೆಲೆ, ಆಸಕ್ತಿಗಳು, ಬರಹಗಳ ಬಗ್ಗೆಯೂ ವಿಚಾರಿಸಿ ತಿಳಿದರು.

ಕರ್ನಾಟಕದಲ್ಲಿ ಕೆನೆತ್ ಆ್ಯಂಡರ್ಸನ್ ಬಗ್ಗೆ ಓದಿ ತಿಳಿದಿರುವ ಸಾವಿರಾರು ಜನ ಇದ್ದಾರೆಂದಾಗ ನಿಜಕ್ಕೂ ಬೆರಗಾದರು, ಖುಷಿಪಟ್ಟರು.

ಎಲ್ಲವೂ ನಾವು ಅಂದುಕೊಂಡಂತೆ ನಡೆದರೆ ಮುಂದಿನ ಅಕ್ಟೋಬರ್ ತಿಂಗಳಿನಲ್ಲಿ ನಾವು ಡೊನಾಲ್ಡ್‌ರನ್ನು ಬೆಂಗಳೂರಿನಲ್ಲಿ ಕರೆತಂದು ಒಂದು **Talk** ಅರೇಂಜ್ ಮಾಡಲು ಯೋಚಿಸುತ್ತಿದ್ದೇವೆ.

ಯಾರನ್ನೂ ಭೇಟಿಯಾಗಲು ಇಷ್ಟಪಡದಿದ್ದ ಮೊದಮೊದಲು ನಮ್ಮನ್ನು ಬಹಳ ಕಾಯಿಸಿ ನಂತರ ಭೇಟಿಗೆ ಒಪ್ಪಿದ ಡೊನಾಲ್ಡ್ ಈಗ ನಮ್ಮ ನೆಚ್ಚಿನ ಪ್ರೀತಿಯ ಹಿರಿಯ ಗೆಳೆಯರಾಗಿದ್ದಾರೆ.


"ನನ್ನ ಆರೋಗ್ಯ ಸ್ವಲ್ಪ ಸರಿಯಾಗಲಿ. ನಿಮ್ಮನ್ನು ನೀವು ಊಹಿಸಲೂ ಸಾಧ್ಯವಿರದ ಕಾಡಿನ ತಾಣವೊಂದಕ್ಕೆ ಕರೆದುಕೊಂಡು ಹೋಗುತ್ತೇನೆ" ಅಂದಿದ್ದಾರೆ ಡೊನಾಲ್ಡ್.

"ನೀವು ಕೆಲಕಾಲವಾದರೂ ನಿತ್ಯದ ಈ ಪ್ರಪಂಚದಿಂದ ಹೊರಬರಬೇಕು" ಇದು ಅವರ ಬಯಕೆ.

"ಆಗಲಿ" ಎನ್ನಲು ನಾವು ಚೂರೂ ತಡಮಾಡಲಿಲ್ಲ.

ಅಕ್ಟೋಬರ್ ಕೊನೆಯ ವೇಳೆಗೆ ನಾವು ಡೊನಾಲ್ಡ್‌ರೊಂದಿಗೆ ದಕ್ಷಿಣ ಭಾರತದ ಅತ್ಯಂತ ಭಯಾನಕ, ದುರ್ಗಮ ಕಾಡುಗಳ ಪೈಕಿ ಒಂದು ಸ್ಥಳದಲ್ಲಿ ಅಲೆದಾಡಬೇಕಾಗುತ್ತದೆಂಬುದಷ್ಟೇ ನಮಗೀಗ ಸಿಕ್ಕಿರುವ ಸಂದೇಶ.







# ಜನರ ಬದುಕನ್ನು ಬಿಂಬಿಸುವ ರಾಕ್ ಗಾರ್ಡನ್

## ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಇತ್ತೀಚೆಗೆ 'ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್' ಎಂಬ ...ಗ್ಲಿಷ್ ಸಿನಿಮಾ ಸುದ್ದಿಯಲ್ಲಿರುವುದರಿಂದ ಅದರ ...ಲರ್‌ಅನ್ನು ಯೂ ಟ್ಯೂಬ್‌ನಲ್ಲಿ ನೋಡಿದೆ. ಆ ಟ್ರೈಲರ್ ...ಷ್ಟು ಕೆಟ್ಟದಾಗಿದೆ ಎಂದರೆ ಅದನ್ನು ನೋಡಿದ ...ರಿಗಾದರೂ ವಾಕರಿಕೆಯ ಜೊತೆಗೆ ಕೋಪವೂ ...ತ್ತದೆ. ನಾನು ನೋಡಿದ ತುಣುಕಿನಲ್ಲಿ ಪ್ರವಾದಿ ಪೈಗಂಬರರ ... ಇಸ್ಲಾಮ್ ಧರ್ಮದ ಬಗ್ಗೆ ಏನು ಇತ್ತೆಂದು ...ಸುವುದಿಲ್ಲ, ಯಾಕೆಂದರೆ ನಾನು ಇಲ್ಲಿ ಅದನ್ನು ಬರೆದರೆ ...ಗರ - ಅವರು ಯಾವುದೇ ಧರ್ಮದವರಾಗಿದ್ದರೂ ...ಮನಸ್ಸಿಗೆ ನೋವಾಗುವುದು ಖಂಡಿತ.

...ಹದಿನಾಲ್ಕು ನಿಮಿಷದಷ್ಟು ಉದ್ದವಿರುವ ಆ ತುಣುಕು ...ಡಿದವರಿಗೆ 'ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್' ಸಿನಿಮಾ ...ಡಿರುವವನ ವಿಕೃತ ಮನಸ್ಸು ಮತ್ತು ಮನೋಧರ್ಮ ...ತಹದ್ದು ಎಂದು ಸ್ಪಷ್ಟವಾಗಿ ಅರ್ಥವಾಗುತ್ತದೆ. ನಕೌಲ ...ಲಿ ಎಂಬಾತ ಈ ಕಂತ್ರಿ ಸಿನಿಮಾದ ಕರ್ತೃ. ಈತ ...ಲತಃ ಈಜಿಪ್ಟ್ ದೇಶದ ಕ್ರಿಶ್ಚಿಯನ್ ಆಗಿದ್ದು ಈಗ ...ಮೆರಿಕದಲ್ಲಿ ನೆಲೆಸಿದ್ದಾನೆ. ಈ ಹಿಂದೆ ಈತ ತಾನೋರ್ವ ...ಲಿ ರಿಯಲ್ ಎಸ್ಟೇಟ್ ಡೀಲರ್ ಎಂದು ಪೋಸು ...ಟ್ಟು ನೂರಾರು ಜನರನ್ನು ವಂಚಿಸಿದ್ದ. ಆನಂತರ ...ಮ್ಯಾಂಫೆಟಮೀನ್ ಎಂಬ ಮಾದಕ ವಸ್ತುವನ್ನು ತಯಾರಿಸಿ ...ಮುಕಂಬಿ ಎಣಿಸಿ ಬಂದಿದ್ದ. ಅದೂ ಸಾಲದೆಂಬಂತೆ ...ಂತರ ಬ್ಯಾಂಕ್ ಒಂದನ್ನು ವಂಚಿಸಿ ಮತ್ತೆ ಜೈಲು ...ಪಾಗಿದ್ದ. ಅಂದರೆ ಈ ನಕೌಲ ಬಸ್ಸೆಲಿ ಓರ್ವ ಅಪ್ಪಟ ...ಚಕ, ಮೋಸಗಾರ, ಕ್ರಿಮಿನಲ್.

... ಇಂತಹ ವ್ಯಕ್ತಿ ತನ್ನ ತಲೆ ತುಂಬ ಇಸ್ಲಾಮ್ ವಿರುದ್ಧ ... ತುಂಬಿಸಿಕೊಂಡಿದ್ದಾನೆ. ಈತ ಕಳೆದ ಬಾರಿ ...ಲಿನಲ್ಲಿದ್ದಾಗ ಈ ಸಿನಿಮಾದ 'ಕತೆ'ಯನ್ನು ಬರೆದನಂತೆ. ...ಲಿನಿಂದ ಹೊರಬಂದನಂತರ ತಾನು ಇಸ್ಲಾಮ್ ವಿರುದ್ಧದ ...ದು ಬೃಹತ್ ಸಿನಿಮಾ ಮಾಡುತ್ತೇನೆಂದು ಹಲವು ...ಹೂಡಿಕೆದಾರರನ್ನು ನಂಬಿಸಿ ಅವರಿಂದ ಸುಮಾರು ಐದು ...ಲಿಯನ್ ಡಾಲರ್‌ಗಳನ್ನು (ಅಂದಾಜು 22 ಕೋಟಿ ...ರೂಪಾಯಿಗಳು) ಎತ್ತಿದ.


... ಹೀಗೆ ಹಣ ಸಂಗ್ರಹಿಸಿದ ಬಸ್ಸೆಲಿ ನೆಟ್ಟಗೊಂದು ...ಸಿನಿಮಾವನ್ನು ಮಾಡಲಿಲ್ಲ, ಬದಲಾಗಿ ಹದಿನಾಲ್ಕು ...ನಿಮಿಷಗಳ ತುಣುಕೊಂದನ್ನು ಮಾತ್ರ ಮಾಡಿ ಉಳಿದ ...ಹಣವನ್ನು ತನ್ನ ಜೇಬಿಗೆ ಇಳಿಸಿಕೊಂಡ. ಆತನ ಮೂಲ ...ಉದ್ದೇಶ ಮುಸಲ್ಮಾನರನ್ನು ಕೆರಳಿಸುವುದು, ...ಪ್ರಚೋದಿಸುವುದು ಆಗಿದ್ದರಿಂದ ಆ ತುಣುಕನ್ನೇ ಆತ ...ಯೂಟ್ಯೂಬ್‌ನಲ್ಲಿ ತೇಲಿಬಿಟ್ಟು. ಒಂದೆಡೆ, ಅಮೆರಿಕ ಎಲ್ಲೆಡೆ ...ಹಬ್ಬಿಸುತ್ತಿರುವ ಇಸ್ಲಾಮೋಫೋಬಿಯ, ಇನ್ನೊಂದೆಡೆ ಇಂತಹ ...ಮಿಲಿಟರಿಕ ದಾಳಿಯಿಂದ ತತ್ತರಿಸುತ್ತಿರುವ ಮುಸಲ್ಮಾನರು. ...ವೆರಡೂ ಈಗ ಜೊತೆಗೂಡಿ ಈಗ ಈ ಸಿನಿಮಾದ ...ತ್ತ ಇತ್ತೀಚೆಗೆ ಜಗತ್ತಿನ ವಿವಿಧ ಕಡೆ ಪ್ರತಿಭಟನೆಗಳು ...ಡೆದಿವೆ.

... ಈ ಸಿನಿಮಾದ 'ಕಥಾವಸ್ತು' ಅದೆಷ್ಟು ಕಳಪೆಯೋ ...ಷ್ಟೇ ಕಳಪೆಯಾಗಿ ಅದು ನಿರ್ಮಾಣವಾಗಿದೆ. ಈ ಹಿಂದೆ ...ಲಚಿತ್ರಗಳನ್ನು ನಿರ್ದೇಶಿಸಿ ಕುಖ್ಯಾತಿ ಪಡೆದಿದ್ದ ಆಲಾನ್ ...ರ್ಟ್ಸ್ ಎಂಬಾತ ಇದನ್ನು ನಿರ್ದೇಶಿಸಿದ್ದು ಕಡಿಮೆ ...ಕಳಪೆ ಸಟಿಟ, ಕಳಪೆ ನಿರ್ಮಾಣ ಮತ್ತು ಕಳಪೆ ...ತಂತ್ರಜ್ಞಾನವೇ ಈ ಸಿನಿಮಾದ ವಾಸ್ತವ ಬಂಡವಾಳ.

ವಂಚಕ, ಮೋಸಗಾರ, ಕ್ರಿಮಿನಲ್, ಬುದ್ಧಿಯ ಮನುಷ್ಯನೊಬ್ಬ ತನ್ನೊಳಗಿರುವ ವಿಷವನ್ನು ಕಾರಿಕೊಳ್ಳಲು 'ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್' ಎಂಬ ಸಿನಿಮಾದ ತುಣುಕನ್ನು ತಯಾರಿಸಿದರೆ ಅದನ್ನು ಎಲ್ಲಾ ಮುಸಲ್ಮಾನರು ನಿರ್ಲಕ್ಷಿಸುವುದೇ ಸೂಕ್ತವಲ್ಲವೇ?

********

ಹಲವಾರು ವರ್ಷಗಳ ಹಿಂದೆ ಅಪ್ಪ ತಮ್ಮ 'ಟೀಕೆ-ಟಿಪ್ಪಣಿ' ಅಂಕಣದಲ್ಲಿ ವಿಜಯನಾಥ್ ಶೆಣೈ ಅವರು ಕಟ್ಟಿಸಿದ್ದ 'ಹಸ್ತ ಶಿಲ್ಪ' ಮನೆಯನ್ನು ಕುರಿತು ಬರೆದದ್ದು ಬಹಳಷ್ಟು ಓದುಗರ ನೆನಪಿನಲ್ಲಿದೆ. ಸುಮಾರು ಒಂದು ವರ್ಷದ ಹಿಂದೆ ಅದೇ ವಿಜಯನಾಥ್ ಶೆಣೈ ಈಗ ಮಣಿಪಾಲದಲ್ಲಿ ಕಟ್ಟಿಸುತ್ತಿರುವ ಅದ್ಭುತವಾದ 'ಹೆರಿಟೇಜ್ ವಿಲೇಜ್' ಬಗ್ಗೆ ನಾನು ಬರೆದಿದ್ದೆ. ಈಗ ಅಂತಹದ್ದೇ ಇನ್ನೊಂದು ಜಾಗೆಯ ಬಗ್ಗೆ ಬರೆಯುವ ಅವಕಾಶ ಸಿಕ್ಕಿದೆ.



ಪ್ರೊ. ಸೊಲಬಕ್ಕನವರ

ಇತ್ತೀಚೆಗೆ ಧಾರವಾಡಕ್ಕೆ ಹೋಗಿದ್ದಾಗ ಶಿಗ್ಗಾಂವಿಯ ಹತ್ತಿರದ ಗೋಟಗೋಡಿ ಎಂಬಲ್ಲಿರುವ 'ಉತ್ಸವ್ ರಾಕ್ ಗಾರ್ಡನ್' ನೋಡಲು ನನ್ನನ್ನು ವಕೀಲರಾದ ಎಮ್.ಎಚ್. ಬೆಂಡಿಗೇರಿ ಮತ್ತು ನಮ್ಮ ವರದಿಗಾರ ವಿನಯ್ ಹುರಳಿಕುಪ್ಪಿ ಕರೆದುಕೊಂಡು ಹೋಗಿದ್ದರು. ಹುಬ್ಬಳ್ಳಿ ನ್ಯಾಷನಲ್ ಹೈವೇ ನಾಲ್ಕರಲ್ಲಿ ಬೆಂಡಿಗೇರಿ ಅವರ ಕಾರ್‌ನಲ್ಲಿ ಹೋಗುತ್ತಿದ್ದಾಗ ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು. ಇಂತಹ ಮಳೆಯಲ್ಲಿ ಆ ಗಾರ್ಡನ್ ಅನ್ನು ನೋಡುವುದಾದರೂ ಹೇಗೆ ಎಂದು ಚಿಂತಿಸುತ್ತಿದ್ದೆ. ಆದರೆ ನಮಗೆ ಅಚ್ಚರಿಯೊಂದು ಕಾದಿತ್ತು. ಗಾರ್ಡನ್ನಿನ ಹೊರಗಡೆಯೇ ಬರುವವರಿಗೆಲ್ಲ ಕೊಡೆಗಳನ್ನು ನೀಡುವ ವ್ಯವಸ್ಥೆ ಮಾಡಲಾಗಿತ್ತು. ಹೀಗೆ ಕೊಡೆ ಹಿಡಿದೇ ಗಾರ್ಡನ್‌ಅನ್ನು ನೋಡಲು ನೂರಾರು ಜನ ಒಳಗೆ ಹೋಗುತ್ತಿದ್ದರು.

ಅಂದಹಾಗೆ, ಈ ರಾಕ್ ಗಾರ್ಡನ್‌ಗೆ ಸ್ಫೂರ್ತಿ ಆಗಿರುವವರು ಖ್ಯಾತ ಕಲಾವಿದ ಪ್ರೊ. ಸೊಲಬಕ್ಕನವರ. ಈ ಹಿಂದೆ ಇತರೆಡೆ ಹಲವಾರು ಕಲಾತ್ಮಕ ಉದ್ಯಾನಗಳನ್ನು ಸ್ಥಾಪಿಸಿರುವ ಸೊಲಬಕ್ಕನವರ ಅವರು ಹಲವಾರು ಪ್ರಶಸ್ತಿಗಳಿಗೂ ಪಾತ್ರರಾಗಿದ್ದಾರೆ. ಇವತ್ತು ಅವರ ಪುತ್ರರಾದ ಹರ್ಷ ಕೂಡ ಅವರೊಂದಿಗೆ ಕೈಜೋಡಿಸಿ ಈ ರಾಕ್ ಗಾರ್ಡನ್ ಅನ್ನು ನಡೆಸುತ್ತಿದ್ದಾರೆ.

ಇದರ ಹೆಸರೇ ಸೂಚಿಸುವಂತೆ ಇದಕ್ಕೆ ಮೂಲ ಸ್ಫೂರ್ತಿ ಆದದ್ದು ಚಂಡಿಘರ್‌ನಲ್ಲಿರುವ ರಾಕ್ ಗಾರ್ಡನ್. ಆದರೆ ಚಂಡಿಘರ್‌ನಲ್ಲಿರುವ ರಾಕ್ ಗಾರ್ಡನ್‌ಅನ್ನು ಬಾಟಲ್, ಟೈರ್, ಪೈಪ್, ಟೈಲ್ ಇತ್ಯಾದಿ ನಿರುಪಯೋಗಿ ಗೃಹವಸ್ತುಗಳಿಂದ ನಿರ್ಮಿಸಲಾಗಿದ್ದರೆ ಗೋಟಗೋಡಿಯ ರಾಕ್ ಗಾರ್ಡನ್‌ಅನ್ನು ಸಿಮೆಂಟ್‌ನಿಂದ ನಿರ್ಮಿಸಲಾಗಿದೆ.

ಸೊಲಬಕ್ಕನವರ ಅವರು ನನಗೆ ಅವತ್ತು ಹೇಳಿದಂತೆ "ಚಂಡಿಘರ್‌ನಲ್ಲಿರುವ ರಾಕ್ ಗಾರ್ಡನ್ ನನಗೆ ಸ್ಫೂರ್ತಿ ನೀಡಿದ್ದು ನಿಜ. ಆದರೆ ಇಲ್ಲಿ ನಾವು ಉತ್ತರ ಕರ್ನಾಟಕದ ಗ್ರಾಮ ಸಂಸ್ಕೃತಿಯನ್ನು ಬಿಂಬಿಸಿದ್ದೇವೆ."

ಉತ್ಸವ ರಾಕ್ ಗಾರ್ಡನ್ ಅನ್ನು ಪ್ರವೇಶಿಸುತ್ತಿದ್ದಂತೆ ಎದುರಾಗುವುದು ರಾಜ್‌ಕುಮಾರ್ ಸರ್ಕಲ್. ನೀರು ತುಂಬಿರುವ ಪುಟ್ಟ ಹೊಂಡದ ಮಧ್ಯೆ, ರಾಜ್‌ಕುಮಾರ್ ಅವರು ಪ್ರಥಮ ಬಾರಿಗೆ ನಟಿಸಿದ್ದ 'ಬೇಡರ ಕಣ್ಣಪ್ಪ' ಸಿನಿಮಾದ ಪಾತ್ರವನ್ನು ಹೋಲುವ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಅದರ ಸುತ್ತ ಇರುವ ದಿಬ್ಬದ ಮೇಲೆ ರಾಜ್‌ಕುಮಾರ್ ಅವರು ನಟಿಸಿದ್ದ ಇತರೆ ಹಲವು ಪ್ರಮುಖ ಸಿನಿಮಾಗಳ ಪಾತ್ರಗಳನ್ನು ನೆನಪಿಸುವ ಪ್ರತಿಮೆಗಳನ್ನು ನಿರ್ಮಿಸಲಾಗಿದೆ. ಸತ್ಯ ಹೇಳಬೇಕೆಂದರೆ ಇದು ನನಗೆ ಅಷ್ಟೇನು ಇಷ್ಟವಾಗಲಿಲ್ಲ.

ರಾಜ್‌ಕುಮಾರ್ ಸರ್ಕಲ್ ದಾಟಿದ ನಂತರ ಸಿಗುವುದೇ ಉತ್ತರ ಕರ್ನಾಟಕದ ಸಾಮಾನ್ಯ ಹಳ್ಳಿಯನ್ನು ಹೋಲುವ ಮನೆಮುಂಗಟ್ಟುಗಳನ್ನು ಹೊಂದಿರುವ 'ರಸ್ತೆ'. ಆ ಮನೆಯ ಜಗುಲಿಗಳಲ್ಲಿ ಆ ಪ್ರದೇಶದ ಜನರ ಬದುಕು, ವೃತ್ತಿಗಳನ್ನು ತೋರುವ ಪ್ರತಿಮೆಗಳನ್ನು ಇಡಲಾಗಿದೆ. ಆ 'ರಸ್ತೆ'ಯಲ್ಲಿ ದಿನಸಿ ಅಂಗಡಿಯಲ್ಲದೆ, ಅಕ್ಕಸಾಲಿಗ, ಕುಂಬಾರ, ಬಡಿಗ, ಚಮ್ಮಾರ, ನೇಕಾರ, ಊರಿನ ಗೌಡನ ಮನೆ ಇತ್ಯಾದಿಗಳೂ ಇವೆ. ಹಾಗೆಯೇ ಅಡುಗೆಮನೆಯಲ್ಲಿ ರೊಟ್ಟಿ ಸುಡುತ್ತಿರುವ ಮಹಿಳೆ, ಶ್ಯಾವಿಗೆ ತಯಾರಿಸುತ್ತಿರುವ ತಾಯಿ ಮತ್ತು ಮಗಳು, ಉಯ್ಯಾಲೆಯಲ್ಲಿ ಆಟವಾಡುತ್ತಿರುವ ಮಕ್ಕಳು, ಜೋತಿಷ್ಯ ಹೇಳುತ್ತಿರುವ ಮನುಷ್ಯರೂ ಇದ್ದಾರೆ.

ಇವೆಲ್ಲ ಪ್ರತಿಮೆಗಳನ್ನು ಸಿಮೆಂಟಿನಲ್ಲಿ ಮಾಡಲಾಗಿದ್ದರೂ ಅವೆಲ್ಲ ಲೈಫ್ ಸೈಜ್‌ನಲ್ಲಿ ಇರುವುದರಿಂದ ಮತ್ತು ಉತ್ತರ ಕರ್ನಾಟಕದ ಜನರ ವೇಷಭೂಷಣವನ್ನು ಹೊಂದಿರುವುದರಿಂದ ನಾವು ನಿಜವಾದ ಜನರನ್ನೇ ನೋಡುತ್ತಿದ್ದೇವೆ ಎಂದೆನಿಸುತ್ತದೆ. ಅದರಲ್ಲೂ ಗೌಡನ ಮನೆಯಂತೂ ಥೇಟ್ ಓರ್ವ ಗೌಡನ ಮನೆಯಂತೆಯೇ ಇದೆ. ಮನೆಯ ಮುಂದೆ ಮೇವು ತಿನ್ನುತ್ತಿರುವ ಕರು, ಜಗುಲಿಯ ಮೇಲೆ ಚಕ್ಕಂಬಕ್ಕಳ ಹಾಕಿ ಕೂತಿರುವ ಗೌಡ, ಆತನ ಮುಂದೆ ಒಂದು ಸುಂದರವಾದ ನಾಯಿ, ಗೌಡನ ಎಡಕ್ಕೆ ನಿಂತಿರುವ ರೈತ... .ಇದೆಲ್ಲವೂ ನನಗೆ ನಮ್ಮ ಕೊಕ್ಕನೂರಿನಲ್ಲಿದ್ದ ಧರ್ಮುರ್ ಚಿಕ್ಕಪ್ಪನನ್ನು ನೆನಪಿಸಿದವು.

ಆ ಸಿಮೆಂಟ್ ಗೌಡನ ಮನೆಯನ್ನು ಪ್ರವೇಶಿಸಿದರೆ ಎಡಕ್ಕೆ ಅಡುಗೆಮನೆ ಇದೆ. ಆ ಅಡುಗೆಮನೆಯ ಮುಂದೆ ಮಕ್ಕಳಿಗೆ ಊಟ ಬಡಿಸುತ್ತಿರುವ ತಾಯಿ, ತೊಟ್ಟಿಲನ್ನು ತೂಗುತ್ತಿರುವ ಮತ್ತೊಬ್ಬ ಮಹಿಳೆ, ಅಡುಗೆ ಮಾಡುತ್ತಿರುವ ಇನ್ನೊಬ್ಬಾಕೆ ಎಲ್ಲರೂ ಇದ್ದಾರೆ. ಅದರ ಪಕ್ಕದಲ್ಲೇ ದೊಡ್ಡ ಮಡಿಕೆಯಲ್ಲಿ ಬೆಣ್ಣೆ ಕಡಿಯುತ್ತಿರುವ ಮುದುಕಿ ಕೂಡ ನನ್ನ ಮುತ್ತಜ್ಜಿ ಚೆನ್ನವಜ್ಜಿಯನ್ನು ನೆನಪಿಸಿದಳು.

ಆ ಅಡುಗೆ ಮನೆಯ ಎದುರಿಗೆ ದನದ ಕೊಟ್ಟಿಗೆ ಇದೆ. ಅಲ್ಲಿರುವ ಎತ್ತುಗಳನ್ನು ನಿಜವಾಗಲೂ ಅದ್ಭುತವಾಗಿ ನಿರ್ಮಿಸಲಾಗಿದೆ. ಹಾಗೆಯೇ ಅದರ ಪಕ್ಕದಲ್ಲಿರುವ ಮತ್ತೊಂದು ಕೊಟ್ಟಿಗೆಯಲ್ಲಿರುವ ಹಸು ಮತ್ತು ಎಮ್ಮೆಗಳಂತೂ ಜೀವಂತ ಇರುವಂತೆ ಕಾಣಿಸುತ್ತವೆ.

ಅಂದಹಾಗೆ ಇವುಗಳನ್ನು ಉತ್ತರ ಕರ್ನಾಟಕದಲ್ಲಿ ಇರುವ ವಿವಿಧ ತಳಿಯ ಹಸು, ಎತ್ತು ಮತ್ತು ಎಮ್ಮೆಗಳ ಆಕಾರದಲ್ಲಿ ನಿರ್ಮಿಸಲಾಗಿದೆ. ಆದರೆ ಅಲ್ಲಿ ನಮ್ಮ ಮಲೆನಾಡಿನ ಗಿಡ್ಡ ತಳಿಯ ಪ್ರತಿಮೆ ಕಾಣಿಸಲಿಲ್ಲ.

ಇದೇ ರಾಕ್ ಗಾರ್ಡನ್ ಹಳ್ಳಿಯಲ್ಲಿ ಸಾಗುತ್ತಾ ಹೋದರೆ, ಯಾವುದೇ ಹಳ್ಳಿಯಲ್ಲಿ ಕಂಡುಬರುವಂತಹ ಒಂದು ಪುಟ್ಟಗುಡಿ, ಮರದಡಿ ಚೌಕಾಬಾರ ಆಡುತ್ತಿರುವ ಪುರುಷರು, ತನ್ನ ಕತ್ತೆಯ ಮೇಲೆ ಬಟ್ಟೆಗಳನ್ನು ಹೊತ್ತು ಹೊರಟಿರುವ ಅಗಸ ಮಹಿಳೆ, ಕುರಿ ಮತ್ತು ಮೇಕೆಗಳನ್ನು ಕಾಯುತ್ತಿರುವ ಹುಡುಗರು.... ಹೀಗೆ ಹಳ್ಳಿಯೊಂದರ ದೈನಂದಿನ ಬದುಕು ಅನಾವರಣಗೊಳ್ಳುತ್ತದೆ.


ಹಳ್ಳಿಯನ್ನು ದಾಟಿ ಬಂದನಂತರ ಸಿಗುವುದೇ 'ಮೃಗಾಲಯ'. ಈ ಮೃಗಾಲಯದಲ್ಲಿರುವ ಹುಲಿ, ಹಿಪ್ಪೊಪಟಮಸ್, ಜಿರಾಫೆ ಇತ್ಯಾದಿ ಪ್ರಾಣಿಗಳನ್ನೂ ಸಿಮೆಂಟಿನಲ್ಲೇ ನಿರ್ಮಿಸಲಾಗಿದೆ. ಇಂತಹ ಮೃಗಾಲಯದ ಅವಶ್ಯಕತೆ ಇಲ್ಲಿ ಇತ್ತೇ ಎಂದು ಒಂದುಕ್ಷಣ ನನಗನ್ನಿಸಿದರೂ ನನ್ನ ಪಕ್ಕದಲ್ಲೇ ಹಾದುಹೋದ ಹಳ್ಳಿಯ ಇಬ್ಬರು ಮಕ್ಕಳು ಅವುಗಳನ್ನು ನಿಬ್ಬೆರಗಾಗಿ ನೋಡುತ್ತಿರುವುದನ್ನು ಗಮನಿಸಿದೆ. ಆಗ, ಅಂತಹ ಮಕ್ಕಳಿಗೆ ದೂರದ ಮೈಸೂರಿನ ಮೃಗಾಲಯದಲ್ಲಿರುವ ನಿಜವಾದ ಪ್ರಾಣಿಗಳನ್ನು ನೋಡುವುದು ಅಸಾಧ್ಯವಾದ್ದರಿಂದ ಅಂತಹ ಮಕ್ಕಳಿಗೆ ಇದು ಬೇಕೆನಿಸಿತು.

ರಾಕ್ ಗಾರ್ಡನ್‌ನ ಒಂದು ಭಾಗದಲ್ಲಿ ಉತ್ತರ ಕರ್ನಾಟಕದ ಸಾಂಪ್ರದಾಯಿಕ ಬೇಸಾಯ ಪದ್ಧತಿಯನ್ನು ತೋರುವ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ಅಷ್ಟೇ ಅಲ್ಲ ಈ ಕಲಾಕೃತಿಗಳಲ್ಲಿ ವಿಭಿನ್ನ ತಳಿಯ ಎತ್ತುಗಳನ್ನು ಬಿಂಬಿಸಲಾಗಿದೆ.

ಇದೆಲ್ಲ ಅಲ್ಲದೆ, ಇಲ್ಲಿಗೆ ಬರುವ ಜನರ ಮನರಂಜನೆಗೆ ಒಂದು ಪುಟ್ಟ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ. ತಮಾಷೆಯ ಸಂಗತಿ ಯಾವುದೆಂದರೆ ಈ ಕೆರೆಯ ಪಕ್ಕದಲ್ಲೇ ರಾಕ್ ಗಾರ್ಡನ್ ಅನ್ನು ನೋಡಲು ಬರುವ ಪ್ರವಾಸಿಗರನ್ನು ಹೋಲುವ ಪ್ರತಿಮೆಗಳನ್ನೂ ಸ್ಥಾಪಿಸಲಾಗಿದೆ.

ಇಡೀ ರಾಕ್ ಗಾರ್ಡನ್‌ಅನ್ನು ಸುಮಾರು 20 ಎಕರೆಯಷ್ಟು ವಿಶಾಲ ಪ್ರದೇಶದಲ್ಲಿ ಕಟ್ಟಲಾಗಿದೆ. ಇದನ್ನು ಸದ್ಯದಲ್ಲೇ ವಿಸ್ತರಿಸಿ ಇನ್ನೂ ಹೆಚ್ಚಿನ ಶಿಲ್ಪಕಲಾಕೃತಿಗಳನ್ನು ನಿರ್ಮಿಸುವ ಯೋಜನೆ ಕಲಾವಿದ ಸೊಲಬಕ್ಕನವರದ್ದು.

ಹುಬ್ಬಳ್ಳಿ ಕಡೆಗೆ ಹೋದರೆ ನೀವೂ ಈ ಸುಂದರವಾದ ರಾಕ್ ಗಾರ್ಡನ್‌ಗೆ ಒಂದು ಸಲ ಭೇಟಿ ನೀಡಿ ಬನ್ನಿ...







ಫೋ. ಸೊಲಬಕ್ಕನವರ ಮಗಳೊಂದಿಗೆ.....

# ತಾರೆಯರ ರೇಸ್‌ನಲ್ಲಿ ಗೆದ್ದ ತಾರಾ!



ತಾರಾ ವೇಣು ಯಾನೆ ತಾರಾ ಅನುರಾಧ ಮೊನ್ನೆ ವಿಧಾನ ಪರಿಷತ್‌ನ ಸದಸ್ಯೆಯಾಗಿ ಆಯ್ಕೆಯಾಗಿದ್ದೇ ತಡ, ಗಾಂಧಿನಗರದಲ್ಲಿ ಒಂದಷ್ಟು ಜನರಿಗೆ ಅಚ್ಚರಿಯಾದರೆ, ಇನ್ನೊಂದಿಷ್ಟು ಜನ ಹೌಹಾರಿದರು. ಏನೇ ಆಗಲಿ, ಕಳೆದ ಮೂರು ದಶಕಗಳಿಂದ ಆರಕ್ಕೇರದ, ಮೂರಕ್ಕಿಳಿಯದ ಗುಂಪಿನಲ್ಲಿ ಕಾಣಿಸಿಕೊಂಡಿದ್ದ ತಾರಾ ಅನುರಾಧ ತನ್ನ ಸ್ವಂತ ಪರಿಶ್ರಮದಿಂದ ಯಶಸ್ಸಿನ ಒಂದೊಂದೇ ಮೆಟ್ಟಿಲೇರುತ್ತ ಈಗ 'ತಾರಾ, ಎಂ.ಎಲ್.ಸಿ' ಎಂದೆನಿಸಿಕೊಂಡಿದ್ದೇ ದೊಡ್ಡ ಸಾಧನೆ ಎಂದರೆ ತಪ್ಪಾಗಲಾರದು.

ಹಾಗೆ ನೋಡಿದರೆ ತಾರಾ ಪಾಲಿಗೆ ಎಂ.ಎಲ್.ಸಿ ಪದವಿ ಅಷ್ಟು ಸುಲಭವಾಗಿ ಗಿಟ್ಟಲಿಲ್ಲ, ಈ ಹಿಂದೆ ಎರಡು-ಮೂರು ಬಾರಿ ಆಕೆ ಪ್ರಯತ್ನಿಸಿ ವಿಫಲರಾಗಿ ಖಿನ್ನರಾಗಿದ್ದೂ ಉಂಟು. ಈ ಬಾರಿಯೂ ಈ ರೇಸ್‌ನಲ್ಲಿ ಮುಖ್ಯಮಂತ್ರಿ ಚಂದ್ರು, ಶೃತಿ, ಜಯಮಾಲ, ಭಾರತಿ ವಿಷ್ಣುವರ್ಧನ್, ಕೆ.ಸಿ.ಎನ್.ಚಂದ್ರು, ಚಿನ್ನೇಗೌಡ ಮೊದಲಾದವರ ಹೆಸರು ಕೇಳಿಬಂದಿತ್ತು, ಕೊನೆಗೆ ಉಪಮುಖ್ಯಮಂತ್ರಿ ಅಶೋಕ್ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಕೃಪೆಯಿಂದ ಈ ತಾರೆಯರ ರೇಸ್‌ನಲ್ಲಿ ಕೊನೆಗೂ ತಾರಾ ಗೆದ್ದು ಎಂ.ಎಲ್.ಸಿ. ಆದರು.

ತಾರಾ ಎಂ.ಎಲ್.ಸಿ ಆಗಿದ್ದೇ ತಡ ಸಿನಿಮಾ ರಂಗದಲ್ಲಿ ಅಧಿಕಾರಕ್ಕಾಗಿ ಹೊಸ ರೀತಿಯ ಹೋರಾಟ ಮತ್ತು ಹಾರಾಟ ಆರಂಭವಾಗಿದೆ. ಮೊದಲನೆಯದಾಗಿ ಈಗ ತಾರಾ ಎಂ.ಎಲ್.ಸಿ ಆಗಿರುವುದರಿಂದ ಆಕೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ಆಕೆ ಬಿಟ್ಟುಕೊಡಲಿ ಎಂಬುದು ಕೆಲವರ ವಾದ. ಆದರೆ ಕೆಲವರು ತಾರಾ ಎಂ.ಎಲ್.ಸಿ ಆದ ಮಾತ್ರಕ್ಕೆ ಆಕೆ ಯಾಕೆ ಅಧ್ಯಕ್ಷ ಪದವಿಗೆ ವಿದಾಯ ಹೇಳಬೇಕು? ಜಗ್ಗೇಶ್ ಎಂ.ಎಲ್.ಸಿ ಆಗಿದ್ದಾರಲ್ಲದೆ ಕೆ.ಎಸ್.ಆರ್.ಟಿ.ಸಿ ನಿಗಮದ ಉಪಾಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿಲ್ಲವೇ ಎಂದು ತಾರಾಪರ ಧ್ವನಿಯೆತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸ್ಥಾನವನ್ನು ತಮಗೆ ಕೊಡಬೇಕೆಂದು ಸಿನಿಮಾ ರಂಗದ ಕೆಲವರು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮುಂದೆ ಇಡುತ್ತಿದ್ದಾರೆ.

ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆಯಾಗಿ ತಾರಾ ಅಧಿಕಾರ ಕೈಗೆತ್ತಿಕೊಂಡು ಮೂರ್‍ನಾಲ್ಕು ತಿಂಗಳುಗಳು ಕಳೆದಿವೆ. ಆದರೆ ಅವರ ಜೊತೆಗೆ ಅಕಾಡೆಮಿಗೆ ಸದಸ್ಯರನ್ನು ಸರ್ಕಾರ ಆಯ್ಕೆ ಮಾಡದಿರುವ ಕಾರಣ ಇಡೀ ಸಮಿತಿಯನ್ನು ಬರ್ಕಾಸ್ತು ಮಾಡಿ ಹೊಸ ಅಧ್ಯಕ್ಷ ಮತ್ತು ಸಮಿತಿ ಸದಸ್ಯರನ್ನು ಒಮ್ಮೆಗೆ ಘೋಷಿಸಿ ಎಂದು ಉದ್ಯಮದವರು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ.

ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಈಗ ಪೈಪೋಟಿ ಆರಂಭವಾಗಿದೆ. ಈ ಸ್ಥಾನಕ್ಕೆ ಈಗ ಅನೇಕ ಹಿರಿಯರ ಹೆಸರುಗಳು ಕೇಳಿಬರುತ್ತಿವೆ. ಮುಖ್ಯವಾಗಿ ಕರ್ನಾಟಕಕ್ಕೆ ಹಲವಾರು ಚಿನ್ನದ ಪದಕವನ್ನು ತಂದುಕೊಟ್ಟಿರುವ ಗಿರೀಶ್ ಕಾಸರವಳ್ಳಿ, ರಾಷ್ಟ್ರಪ್ರಶಸ್ತಿ ವಿಜೇತೆ ಜಯಮಾಲ, ರಾಷ್ಟ್ರಪ್ರಶಸ್ತಿ ವಿಜೇತ ನಿರ್ಮಾಪಕ ಬಸಂತ್‌ಕುಮಾರ್ ಪಾಟೀಲ್ ಮತ್ತು ಈಗಷ್ಟೇ ಚಿತ್ರರಂಗದಲ್ಲಿ 50 ಸುದೀರ್ಘ ವರ್ಷವನ್ನು ಪೂರೈಸಿರುವ ಚಿತ್ರರಂಗದ ಕುಳ್ಳ ಎಂದೇ ಖ್ಯಾತಿ ಪಡೆದಿರುವ ದ್ವಾರಕೀಶ್ ಇವರ ಹೆಸರು ವಿಧಾನಸೌಧದ ಕಾರಿಡಾರ್‌ನಲ್ಲಿ ದಟ್ಟವಾಗಿ ಕೇಳಿಬರುತ್ತಿದೆ.

ಇದಕ್ಕೆ ವ್ಯತಿರಿಕ್ತವಾಗಿ ಬಿಜೆಪಿ ಪಕ್ಷದ ಸದಸ್ಯೆಯಾದ, ಈ ಹಿಂದೆ ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆಯಾಗಿದ್ದ ಶೃತಿಯವರನ್ನು ವೈಯಕ್ತಿಕ ಕಾರಣಗಳಿಗಾಗಿ ಆ ಹುದ್ದೆಯಿಂದ ತೆಗೆದುಹಾಕಿದ್ದು ತಪ್ಪು, ಅದನ್ನು ಸರಿಪಡಿಸುವ ಉದ್ದೇಶಕ್ಕಾಗಿಯಾದರೂ ಈ ಕೂಡಲೇ ಶೃತಿಯನ್ನು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆಯನ್ನಾಗಿ ನೇಮಿಸಬೇಕು ಎಂದು ಕೆಲವು ಲಿಂಗಾಯತ ಶಾಸಕರು ಶೆಟ್ಟರ್ ಮತ್ತು ಯಡಿಯೂರಪ್ಪರವರನ್ನು ಆಗ್ರಹಿಸಿದ್ದಾರೆ.

ಮೊನ್ನೆ ತಾರಾ ಎಂ.ಎಲ್.ಸಿ ಆಗುವ ಸಂದರ್ಭದಲ್ಲೂ ಆಕೆಗೆ ತೀವ್ರ ಪೈಪೋಟಿ ನೀಡಿದ್ದು ಇದೇ ಶೃತಿ. ಬಿಜೆಪಿ ವಲಯದಲ್ಲಿ ಶೃತಿಯೇ ಎಂ.ಎಲ್.ಸಿ ಆಗುತ್ತಾರೆ ಎಂಬ ಸುದ್ದಿ ಕೇಳಿಬಂದಿದ್ದರೂ ಕೊನೆ ಕ್ಷಣದಲ್ಲಿ ತಾರಾ ಅವರನ್ನೇ ಎಂ.ಎಲ್.ಸಿ ಮಾಡಿದ್ದು ಎಲ್ಲರಿಗೂ ಆಶ್ಚರ್ಯ ನೀಡಿತ್ತು, ಅತ್ತ ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ನಿಗಮವೂ ಇಲ್ಲ, ಇತ್ತ ಎಂ.ಎಲ್.ಸಿ ಸ್ಥಾನವೂ ತಪ್ಪಿಹೋಗಿದ್ದಕ್ಕೆ ಶೃತಿಯವರನ್ನೇ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷೆ ಮಾಡಬೇಕು ಎಂಬುದು ಲಿಂಗಾಯತರ ಒತ್ತಾಯ. ಜೊತೆಗೆ ಶೃತಿಯನ್ನು ಅಧ್ಯಕ್ಷೆಯನ್ನಾಗಿ ಮಾಡಿದರೆ ರಂಗಭೂಮಿ ಮತ್ತು ಸಿನಿಮಾ ಎರಡೂ ವಲಯಗಳಿಗೆ ಆದ್ಯತೆ ನೀಡಿದಂತಾಗುತ್ತದೆ. ಅಷ್ಟೇ ಅಲ್ಲ, ಉತ್ತರ ಕರ್ನಾಟಕದಲ್ಲಿ ತಮ್ಮ ರಂಗಭೂಮಿ ಚಟುವಟಿಕೆಯಿಂದಲೂ ಆಕೆ ಜನಪ್ರಿಯವಾಗಿರುವುದರಿಂದ ಪಕ್ಷಕ್ಕೆ ಸಹಕಾರಿಯಾಗಬಹುದು ಎಂಬುದು ಅವರ ವಾದ.

ಪಕ್ಷದ ವಲಯದಲ್ಲಿ ಕೇಳಿಬರುತ್ತಿರುವ ಮತ್ತೊಂದು ಹೆಸರೆಂದರೆ ರಾಜೇಂದ್ರಸಿಂಗ್ ಬಾಬು. ಅನೇಕ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿರುವ ರಾಜೇಂದ್ರಸಿಂಗ್ ಬಾಬು ಈ ಹಿಂದೆ ಯಡಿಯೂರಪ್ಪನವರ ಆತ್ಮಕಥೆಯನ್ನು ಸಿನಿಮಾ ಮಾಡುವುದಾಗಿ ಘೋಷಿಸಿ ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದರು. ಬಾಬು ಅವರ ಮಹಾತ್ಮ ಪ್ರೊಡಕ್ಷನ್‌ನ ನೂರನೇ ವರ್ಷವಾದ ಈ ಸಂದರ್ಭದಲ್ಲಿ ಅವರನ್ನು ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರನ್ನಾಗಿ ಮಾಡುವುದು ಸೂಕ್ತ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಯಡಿಯೂರಪ್ಪನವರ ಜೊತೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರುವ ರಾಜೇಂದ್ರಸಿಂಗ್ ಬಾಬು ಕನ್ನಡ ಚಿತ್ರರಂಗದಲ್ಲಿ ಅನೇಕ ಮಹತ್ತರವಾದ ಚಿತ್ರಗಳನ್ನು ನೀಡಿ, ತನ್ನದೇ ಆದ ಛಾಪನ್ನು ಒತ್ತಿದ್ದಾರೆ. ಈ ಕಾರಣದಿಂದ ಪಕ್ಷದಲ್ಲಿ ಕೆಲವರು ಸಿಂಗ್‌ಬಾಬು ಪರವಾಗಿ ಕೈ ಎತ್ತಿದ್ದಾರೆ. ಆದರೆ ಉದ್ಯಮದಿಂದ ಬಾಬು ಪರವಾಗಿ ಯಾರೂ ಒತ್ತಡ ಹೇರಿಲ್ಲವೆಂಬುದೂ ಅವರ ಪಾಲಿಗೆ ಮೈನಸ್ ಪಾಯಿಂಟ್ ಆಗಬಹುದು.

ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಸ್ಪರ್ಧೆಯ ಬಗ್ಗೆ ತಾರಾರವರನ್ನು ಕೇಳಿದಾಗ ಅವರು "ನನಗೆ ಈ ಬಗ್ಗೆ ಏನೂ ಗೊತ್ತಿಲ್ಲ, ನಾನು ಈಗಾಗಲೇ ಮುಂದಿನ ಆರು ತಿಂಗಳಿಗೆ ಬೇಕಾದ ಯೋಜನೆಯನ್ನು ಹಾಕಿಕೊಂಡು ಕುಳಿತುಕೊಂಡಿದ್ದೇನೆ. ಡಿಸೆಂಬರ್‌ನಲ್ಲಿ ನಡೆಯುವ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವಕ್ಕೆ ಸಂಬಂಧಪಟ್ಟ ಪತ್ರಿಕಾಗೋಷ್ಠಿ ಕರೆಯಲು ಮೊನ್ನೆ ಮುಖ್ಯಮಂತ್ರಿಯವರು ಗ್ರೀನ್‌ಸಿಗ್ನಲ್ ನೀಡಿರುವುದು ಅವರಿಗೆ ನಮ್ಮ ಕಾರ್ಯವೈಖರಿ ಮೆಚ್ಚುಗೆಯಾಗಿರುವುದಕ್ಕೆ ಸಾಕ್ಷಿ. ಅಷ್ಟೇ ಅಲ್ಲ, ಮಾಸದ ಚಿತ್ರ, ಪತ್ರಕರ್ತರಿಗೆ ಪ್ರಶಸ್ತಿ ಹಾಗೂ ಇನ್ನೂ ಅನೇಕ ಹೊಸ ಕಾರ್ಯಕ್ರಮಗಳನ್ನು ನಾನು ಆರಂಭಿಸುತ್ತಿದ್ದೇನೆ" ಎಂದು ಉತ್ತರಿಸಿದರು.

ಇದನ್ನು ಕೇಳಿ ಉದ್ಯಮದವರು ಮುಸಿಮುಸಿ ನಗುತ್ತಿದ್ದಾರೆ. ಡಿಸೆಂಬರ್‌ನಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಚಿತ್ರೋತ್ಸವಕ್ಕೆ ಮೂರು ತಿಂಗಳು ಮೊದಲು ಪತ್ರಿಕಾಗೋಷ್ಠಿ ಕರೆಯುವ ಆಗತ್ಯವಾದರೂ ಏನು? ಅದೊಂದು ಮಹಾನ್ ಸಾಧನೆಯೇ? ಹಾಗೆಯೇ ಸಿನಿಮಾಕ್ಕೆ ಸಂಬಂಧಪಟ್ಟ ಕಾನೂನಿನ ಬಗ್ಗೆ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಗಡಿಬಿಡಿಯಲ್ಲಿ ಪುಸ್ತಕವನ್ನು ತಂದಿರುವುದು ಯಾವ ಪುರುಷಾರ್ಥಕ್ಕಾಗಿ? ಇಂತಹ ಪುಸ್ತಕದಿಂದ ಕನ್ನಡ ಉದ್ಯಮಕ್ಕೆ ಏನು ಲಾಭವಾಗುತ್ತದೆ? ಎಂದು ತಾರಾ ವಿರೋಧಿಗಳು ಪ್ರಶ್ನಿಸುತ್ತಿದ್ದಾರೆ.

ತೀವ್ರ ಬರದಿಂದ ಕರ್ನಾಟಕ ರಾಜ್ಯ ತತ್ತರಿಸುತ್ತಿರುವಾಗಲೇ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ 'ಬೆಳ್ಳಿ ಹೆಜ್ಜೆ' ಕಾರ್ಯಕ್ರಮವನ್ನು ಅಮೆರಿಕದಲ್ಲಿ ನಡೆಸಲು ಯೋಜನೆ ಹಾಕಿಕೊಂಡಿರುವ ತಾರಾ ಈ ಕುರಿತು ಸರಕಾರಕ್ಕೆ ಪತ್ರ ಬರೆದಿದ್ದರು. ಸರಕಾರ ತಾರಾರ ಈ ಬೇಡಿಕೆಯನ್ನು ನಯವಾಗಿ ತಿರಸ್ಕರಿಸಿತು. ರವಿಚಂದ್ರನ್ ಕನ್ನಡನಾಡು ಕಂಡ ಮಹಾನ್ ನಟ ಎಂಬುದರಲ್ಲಿ ಎರಡು ಮಾತಿಲ್ಲ, ಅವರನ್ನು ಕನ್ನಡನಾಡಿನ ಜನರ ನಡುವೆಯೇ ಸನ್ಮಾನಿಸಬೇಕೇ ಹೊರತು ದೂರದ ಅಮೆರಿಕಕ್ಕೆ ಕರೆದುಕೊಂಡು ಹೋಗಿ ಸನ್ಮಾನ ಮಾಡುವುದರಲ್ಲಿ ಅರ್ಥವೇನಿದೆ? ಎಂಬುದು ತಾರಾ ವಿರೋಧಿ ಬಣಗಳ ಮತ್ತೊಂದು ಪ್ರಶ್ನೆ. ಅವರೆಲ್ಲ ಹೇಳುವುದಿಷ್ಟೇ: "ಚಲನಚಿತ್ರ ಅಕಾಡೆಮಿಯ ಮಾಜಿ ಅಧ್ಯಕ್ಷ ನಾಗಾಭರಣ ಅವರು ಹಾಕಿಕೊಂಡಿದ್ದ ಕಾರ್ಯಕ್ರಮವನ್ನೇ ತಾರಾ ಮುಂದುವರೆಸುತ್ತಿದ್ದಾರೆ. ಇದಕ್ಕಿಂತ ಕ್ರಿಯಾಶೀಲ ಕೆಲಸವನ್ನು ಮಾಡುವಂತಹ ಅಧ್ಯಕ್ಷರ ಅಗತ್ಯವಿದೆ."


ಹೀಗೆ ತಾರಾ ಸ್ಥಾನಪಲ್ಲಟಕ್ಕೆ ಉದ್ಯಮದಲ್ಲಿ ಎಲ್ಲಿಲ್ಲದ ಚಟುವಟಿಕೆ ಆರಂಭವಾಗಿದೆ. ಆದರೆ ಯಾವುದೇ ಕಾರಣಕ್ಕೂ ಈ ಸ್ಥಾನವನ್ನು ತಾನು ಬಿಟ್ಟುಕೊಡಲು ತಯಾರಿಲ್ಲ ಎಂಬ ರೀತಿಯಲ್ಲಿ ತಾರಾ ಅಕಾಡೆಮಿಯಲ್ಲಿ ದಿನಕ್ಕೊಂದು ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉತ್ಸಾಹದಲ್ಲಿ ಓಡಾಡುತ್ತಿದ್ದಾರೆ.


ಚಿತ್ರೋದ್ಯಮದಲ್ಲಿ ಒಗ್ಗಟ್ಟು ಇಲ್ಲ ಎಂಬುದನ್ನು ಅರ್ಥಮಾಡಿಕೊಂಡಿರುವ ಯಡಿಯೂರಪ್ಪ ಪ್ರತಿಯೊಬ್ಬ ಅಧ್ಯಕ್ಷ ಪದವಿಯ ಆಕಾಂಕ್ಷಿಯ ಜೊತೆಗೆ ನಿಕಟವಾದ ಸಂಪರ್ಕವನ್ನು ಹೊಂದಿಕೊಂಡಿದ್ದು ತನ್ನದೇ ಆದ ರೀತಿಯಲ್ಲಿ ರಾಜಕೀಯ ತಂತ್ರಗಾರಿಕೆಯನ್ನು ಹೆಣೆಯುತ್ತಿದ್ದಾರೆ. ಇವೆಲ್ಲ ಬೆಳವಣಿಗೆಯನ್ನು ನೋಡಿದರೆ ಸರ್ಕಾರದ ಮೇಲೆ ಅಕಾಡೆಮಿಯ ಅಧ್ಯಕ್ಷ ಸ್ಥಾನ ಬದಲಾವಣೆಯ ಬಗ್ಗೆ ಹೆಚ್ಚಿನ ಒತ್ತಡ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗಾಗಿ ಒಂದೋ ಸರಕಾರ ಹೊಸ ಅಧ್ಯಕ್ಷರನ್ನು ನೇಮಿಸಬೇಕು ಅಥವಾ ಈಗಿರುವ ಅಧ್ಯಕ್ಷರಿಗೆ ಸದಸ್ಯರನ್ನು ನೀಡಿ, ಈ ಸಮಿತಿಯನ್ನು ಗಟ್ಟಿ ಮಾಡಬೇಕು.


ಹಾಗೊಮ್ಮೆ ಅಕಾಡೆಮಿಯ ಅಧ್ಯಕ್ಷ ಸ್ಥಾನವನ್ನು ಬೇರೆಯವರಿಗೆ ಕೊಟ್ಟರೆ, ಹತ್ತಾರು ಜನ ಆಕಾಂಕ್ಷಿಗಳ ಮಾಜಿ ಕಣ್ಣೀರ ರಾಣಿ ಶೃತಿ ಮತ್ತು ಗಿರೀಶ್ ಕಾಸರವಳ್ಳಿಯವರಿಗೆ ಹೆಚ್ಚಿನ ಅವಕಾಶವಿದೆ. ಕಾಸರವಳ್ಳಿಯವ ಪ್ರತಿಭೆ ಬಗ್ಗೆ ಯಾರೂ ದೂಸರಾ ಮಾತಾಡುವವರೇ ಇ ಆದರೆ ಅವರು ಅನೇಕ ಬಾರಿ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಬಿಜೆಪಿ ಸರ್ಕಾರವನ್ನು ಟೀಕಿಸಿರುವುದರಿಂ ಅವರಿಗೆ ಅಧ್ಯಕ್ಷ ಪದವಿ ಸಿಗುವ ಸಾಧ್ಯತೆ ತುಂಬಾ ಕಡಿಮೆ ಆದರೆ ಶೃತಿ ವಿಷಯದಲ್ಲಿ ಬಿಜೆಪಿ ನಾಯಕರಿಗೆ ಸಿಂಪತಿಯಿ ಯಾವುದೇ ಕಾರಣ ನೀಡದೇ ಆಕೆಯನ್ನು ಅನಾಮತ್ತಾ ನಿಗಮದಿಂದ ಕೆಳಗಿಳಿಸಿದ ತಪ್ಪನ್ನು ಸರಿಪಡಿಸು ಕಾರಣಕ್ಕಾದರೂ ಆಕೆಗೆ ಅಧ್ಯಕ್ಷ ಪದವಿ ನೀಡಬೇಕು ಎಂದ ಹೇಳುವವರ ಸಂಖ್ಯೆ ಜಾಸ್ತಿಯಿದೆ. ಚುನಾವಣೆ ಸಮೀಪಿಸು ತ್ತಿರುವ ಈ ಸಂದರ್ಭದಲ್ಲಿ ಪ್ರತಿಭೆಗಿಂತ ರಾಜಕೀಯ ಲೆಕ್ಕಾಚಾರಗಳೇ ಮುಖ್ಯವಾಗಿರು ವುದರಿಂದ ಒಂದು ವೇ ಶೃತಿಗೆ ಅವಕಾಶ ಸಿಕ್ಕರೂ ಆಶ್ಚರ್ಯ ಪಡಬೇಕಾಗಿಲ್ಲ. ಈ ಬಗ್ಗೆ ಶೃತಿ ಹೇಳಿದ್ದಿಷ್ಟೇ: "ನನ್ನನ್ನು ಈ ಹಿಂದೆ ನೀವ ಪಕ್ಷಕ್ಕೆ ಕರೆಸಿದ್ದು, ಅಧ್ಯಕ್ಷ ಪದವಿಯನ್ನೂ ನೀಡಿದ್ದೂ ನೀ ಆ ಪದವಿಯಿಂದ ಇಳಿಸಿದ್ದೂ ನೀವೆ. ನನಗೆ ಸಿನಿಮ ಉದ್ಯಮದಲ್ಲಿ ಬೇಕಾದಷ್ಟು ಗೌರವವಿದೆ. ಆದ ರಾಜಕೀಯವಾಗಿ ನನ್ನ ಗೌರವಕ್ಕೆ ಈಗಾಗಲೇ ಧಕ್ಕೆಯಾಗಿ ಹೀಗಾಗಿ ನಾನು ಯಾವುದೇ ಸ್ಥಾನ, ಪದವಿಯನ ನಿರೀಕ್ಷಿಸುವುದಿಲ್ಲ, ಒಂದು ವೇಳೆ ನೀವು ಕೊಡುವುದ ಆದರೆ ಗೌರವಯುತವಾಗಿ ಕೊಡಿ ಎಂದು ಹೇಳಿದ್ದೇ ಇಲ್ಲದಿದ್ದರೆ ನನ್ನಷ್ಟಕ್ಕೆ ನನ್ನನ್ನು ಬಿಟ್ಟುಬಿಡಿ ಎಂದ ಹೇಳಿದ್ದೇನೆ." ಶೃತಿಯ ಮಾತುಗಳಲ್ಲಿ ನೋವು, ಅನುಕಂ ಸ್ವಾಭಿಮಾನ ಎಲ್ಲವೂ ಅಡಕವಾಗಿವೆ.


ಆದರೆ ಈಗಿನ ರಾಜಕೀಯ ಪರಿಸ್ಥಿತಿ ನೋಡಿದ ಶೆಟ್ಟರ್ ಯಾವುದೇ ಬದಲಾವಣೆ ಮಾಡದೆ ಕೈ ಕ ಕುಳಿತುಕೊಂಡರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ ಎಂ ಮಾತೂ ಕೇಳಿಬರುತ್ತಿದೆ.


● ಶೆಣ





























# ಕುವೆಂಪು ಹೆಸರಲ್ಲಿ SCZ ಯೋಜನೆ ಮತ್ತು ಯೋಚನೆ



ನಮಾಜು ಮಾಡುವ ಅಂತಾ ಹೋದರೆ ಮಸೀದಿನೇ ಮೇಲೆ ಬಿದ್ದಂತಾಯ್ತು' ಎನ್ನುವಂತಿದೆ ಮಲೆನಾಡಿನ ಪರಿಸ್ಥಿತಿ. ಕುವೆಂಪು ಹೆಸರಲ್ಲಿ ಸೃಷ್ಟಿಯಾಗುತ್ತಿರುವ ...ರಿಗಳೇ ಇದಕ್ಕೆ ಕಾರಣವಾಗಿವೆ.

ಕುವೆಂಪು ಪ್ರತಿಷ್ಠಾನದ ಇತ್ತೀಚಿನ ವಿದ್ಯಮಾನಗಳನ್ನು ...ನಿಸಿದರೆ ಇಲ್ಲಿ ಒಂದು ರೀತಿಯ Special Cul-...al Zone (SCZ) ನಿರ್ಮಿಸುವ ಯತ್ನ ...ಯುತ್ತಿದೆಯೇನೋ ಎನಿಸುವಂತಿದೆ.

ಕನ್ನಡದ ಬಹುದೊಡ್ಡ ಬರಹಗಾರರಾಗಿರುವ ...ಪುರವರು ಹುಟ್ಟಿದ, ಬಾಳಿ-ಬದುಕಿದ, ಓಡಾಡಿದ ...ಗಳಿಗೆಲ್ಲಾ ಖಂಡಿತಾ ಮಹತ್ವವಿದೆ. ನಮ್ಮ ಸಾಂಸ್ಕೃತಿಕ ...ಪರೆಯ ನೆನಪುಗಳನ್ನು ಬಿಂಬಿಸುವ ಜೊತೆಗೆ ...ನವರಿಗೆ ಸ್ಫೂರ್ತಿ ನೀಡಬಲ್ಲ ಅಂತಹ ತಾಣಗಳನ್ನು ...ದಿಂದ ರಕ್ಷಿಸಿ ಕಾಪಾಡಿಕೊಳ್ಳಬೇಕಾದ್ದು ಸರಿ ಹೌದು. ...ದೆ ಇದೇ ಒಂದು ಗೀಳಾಗಿ, ಅಬ್ಸೆಷನ್ ರೀತಿ ...ಯುತ್ತಾ ಕೊನೆಗೆ ಕುವೆಂಪು ಎಂಬ ಹೆಸರು ...ರಿಸಲ್ಪಡುವ ಸ್ಥಳ ಮಾತ್ರವಲ್ಲದೆ ಅದು ಪ್ರತಿಧ್ವನಿಸುವ ...ರದುದ್ದಕ್ಕೂ, ಪ್ರತಿಯೊಂದನ್ನು ನಿರ್ಬಂಧಿಸಿ ...ತ್ರಗೊಳಿಸಲು ಹೊರಟುಬಿಟ್ಟರೆ....?

...ತೀರ್ಥಹಳ್ಳಿಯ ದೇವಂಗಿ ಗ್ರಾಮ ಪಂಚಾಯತಿ ...ಪ್ತಿಯೊಳಗಿರುವ ಕುವೆಂಪು ಪ್ರತಿಷ್ಠಾನದ ಭವಿಷ್ಯದ ...ೋಜನೆಗಳು ಹಾಗೂ ಕುವೆಂಪು ಕುಟುಂಬದವರ, ...ರ ವರ್ತನೆಗಳು ನಿಧಾನಕ್ಕೆ ಸಾಂಸ್ಕೃತಿಕ ದಬ್ಬಾಳಿಕೆಯ ...ವು ಪಡೆದುಕೊಳ್ಳುವ ಲಕ್ಷಣಗಳು ಈಗ ಕಾಣುತ್ತಿವೆ. ... ಈ ತಕ್ಷಣಕ್ಕೆ ಅಲ್ಲಿ ವಿವಾದ ಎದ್ದಿರುವುದು ಪ್ರತಿಷ್ಠಾನದ ...ದ ಬಾಗಿಲಿನ ಎದುರಿಗಿರುವ ರಸ್ತೆಯಾಚೆಗೆ ಒಂದು ...ೋಟೆಲ್ ಅಥವಾ ರೆಸಾರ್ಟ್ ತರದ್ದೇನೋ ಎದ್ದೇಳುತ್ತಿದೆ ...ಬ ವಿಚಾರ.

... ಸ್ಥಳೀಯ ಗ್ರಾಮ ಪಂಚಾಯತಿ ಅಧ್ಯಕ್ಷ ಸುಬೋದ್ ...ಬುವರು ಈ ಜಾಗದ ಮಾಲೀಕರಾಗಿರುವುದು ಮತ್ತವರು ...ವೆಂಪು ಮನೆತನದ ಬಂಧುವೇ ಆಗಿರುವುದು ಈ ...ವಾದದ ಬಂದು ಆಯಾಮವಾಗಿದೆ. ಮತ್ತೊಂದೆಡೆ ...ವೆಂಪು ಪ್ರತಿಷ್ಠಾನದ ಎದುರು ಈ ಹೋಟೆಲ್ ...ಕೂಡದೆಂಬ ಗುಂಪಿದೆ. ಈ ಗುಂಪಿನಲ್ಲಿ ಕುವೆಂಪುರ ...ಗ್ಗೆ ನಿಷ್ಕಪಟ ಪ್ರೀತಿ, ಗೌರವ ಇರುವವರು, ಕುವೆಂಪು ...ಸರಿಂದ ಲಾಭ ಪಡೆದವರು, ಕುವೆಂಪುರನ್ನು ...ವತ್ವಕ್ಕೇರಿಸಲು ಬಯಸುವ ತರೇವಾರಿ ಜನರಿದ್ದಾರೆ.

ಇಲ್ಲಿ ಕೇಳಬಹುದಾದ ಒಂದು ಸರಳ ಪ್ರಶ್ನೆ ಏನೆಂದರೆ ...ವೆಂಪು ಸ್ಮಾರಕದ ಹತ್ತಿರ ಒಂದು ಹೋಟೆಲ್ ಒಂದೇ ...ಟ್ಟರೆ ಏನಾಗಿಬಿಡುತ್ತದೆ ಎಂಬುದು? ಪ್ರತಿ ದಿನ ಕನಿಷ್ಠ ...00-300 ಮಂದಿ ಅಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಅಲ್ಲೇ ...ತ್ತಿರದಲ್ಲಿ ಊಟ-ತಿಂಡಿ ಕಾಫಿ-ಟೀ ಸಿಗುವಂತಾದರೆ, ...ಳಿತು ಕೊಂಚ ವಿಶ್ರಾಂತಿ ಪಡೆಯುವಂತಾದರೆ ಆಕಾಶವೇನು ...ಳಚಿ ಬೀಳುತ್ತದೆಯಾ?

ಈ ತರದ ಪ್ರಶ್ನೆ ಕೇಳಬೇಕಾಗಿ ಬಂದಿರುವುದು ಏಕೆಂದರೆ ...ವು ಕುವೆಂಪು ಭಕ್ತರು ಹೋಟೆಲ್ ಬೇಡ ಅಂತಾ ಮಾತ್ರವಲ್ಲದೆ ಈ ಪ್ರತಿಷ್ಠಾನದ ಅಕ್ಕಪಕ್ಕದಲ್ಲಿರುವ ರೈತರು ರಬ್ಬರ್ ಬೆಳೆ ಹಾಕಕೂಡದೆಂತಲೂ ಫರ್ಮಾನು ಹೊರಡಿಸುತ್ತಿರುವುದರಿಂದ. ಹಂಪಿ ವಿವಿಯ ವಿದ್ವಾಂಸರೊಬ್ಬರು 'ಕುವೆಂಪು ಹುಟ್ಟಿದ ಮಲೆನಾಡಿನಲ್ಲಿ ಯಾವ ರೈತರೂ ರಬ್ಬರ್ ಬೆಳೆಯಕೂಡದು' ಎಂದು ಒಂದು ಸುತ್ತೋಲೆ ಸ್ಟೇಟ್‌ಮೆಂಟ್ ಕೊಟ್ಟು ಅದೃಶ್ಯರಾದ ಸುದ್ದಿಯೂ ಈಗ ಕೇಳಿಬರುತ್ತಿದೆ.

ಇದರರ್ಥ ಕುವೆಂಪು ರಬ್ಬರ್‌ನ ಕಡುವಿರೋಧಿಯಾಗಿದ್ದರೆಂದು ಇರಲಾರದು. ಅಥವಾ ಕುವೆಂಪು ತಮ್ಮ ಬರವಣಿಗೆಯ ಬದುಕಿನುದ್ದಕ್ಕೂ ಒಮ್ಮೆಯೂ ಚಿತ್ತಾಗದಂತೆ ಕಾಟು ಹಾಕದೆ ಬರೆದರು, ಹಾಗಾಗಿ ಅವರು ಎಂದೂ ರಬ್ಬರ್ (Eraser) ಬಳಸಲೇ ಇಲ್ಲ ಎಂತಲೂ ಇರಲಾರದು.

ಬಹುಶಃ ರಬ್ಬರ್ ಮಲೆ ನಾಡಿನ ಪಾರಂಪರಿಕ ಬೆಳೆ ಅಲ್ಲ, ಈಗ ರಬ್ಬರ್ ಪ್ಲಾಂಟೇಷನ್‌ಗಳು ತಲೆ ಎತ್ತಿದರೆ ಅಲ್ಲಿನ ನಿಸರ್ಗ ರಮಣೀಯತೆ ಸೊಬಗೆಲ್ಲಾ ಕಣ್ಮರೆಯಾದೀತೆಂಬ ಕಾಳಜಿಯೇ ಈ ರಬ್ಬರ್ ವಿರೋಧಕ್ಕೆ ಕಾರಣ ವಾಗಿರಲಿಕ್ಕೂ ಸಾಕು. ಇರಲಿ...

ಆದರೆ

ನೆಲದ ಮೇಲೆ ನಿಂತು ತಣ್ಣಗೆ ಯೋಚಿಸಿದರೆ ಈ ಹುಸಿ ಭಾವಾವೇಶದ ಹಿಂದಿನ ಯೋಚನೆಗಳು ನಮ್ಮನ್ನು ಎಲ್ಲಿಗೆ ತಲುಪಿಸಿಬಿಡಬಹುದೆಂಬ ಆತಂಕವೂ ಕಾಡುತ್ತದೆ.


ಏಕೆಂದರೆ ಈ ಸ್ಥಳ ಮಹಾತ್ಮೆಯ ಇನ್ನಿತರ ಆಯಾಮಗಳನ್ನು ಚೆಕ್ ಮಾಡಿ ನೋಡಿದರೆ ಇದೇನೊ ಒಂಥರಾ Special Cultural Zone (SCZ) ಆಗುವಂತೆ ಕಾಣುತ್ತಿದೆ.

> **ವಿಷಯ:** 02. ಬೆಂಗಳೂರಿನಲ್ಲಿ ಕುವೆಂಪು ಪ್ರತಿಷ್ಠಾನಕ್ಕೆ ಬಿ.ಡಿ.ಎ ಅವರಿಂದ ಸಿ.ಎ ನಿವೇಶನ ಕೇಳುವ ಕುರಿತು.
> **ತೀರ್ಮಾನ:** ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಕುವೆಂಪು ಸಾಹಿತ್ಯ ಪ್ರಚಾರಕ್ಕೆ ಪ್ರತಿಷ್ಠಾನ ಕನ್ನಡೇ ಒಂದು ಸ್ಥಳವನ್ನು ಮಾಡಿಕೊಳ್ಳುವ ವಿಚಾರವನ್ನು ಸಾಮಾನ್ಯಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಈ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಸಲಹೆ ಸೂಕ್ತವಾಗಿರುವುದರಿಂದ ಬೆಂಗಳೂರು ರಾಜ್ಯದ ರಾಜಧಾನಿಯಾಗಿರುವುದರಿಂದ ನಿವೇಶನ ಪಡೆಯುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತವಾಯಿತು. ಬೆಂಗಳೂರಿನಲ್ಲಿ ಸ್ಥಳ ಪಡೆಯಬೇಕಾದರೆ ಬಿ.ಡಿ.ಎ.ಅವರಿಂದ ಸಿ.ಎ ನಿವೇಶನವನ್ನು ಕೇಳಿ ಪಡೆಯುವುದು ಸೂಕ್ತವೆಂದು ಸಭೆ ಅಭಿಪ್ರಾಯಪಟ್ಟಿತು. ನಿವೇಶನ ತೆಗೆದುಕೊಳ್ಳುವುದಾದರೆ ಕನಿಷ್ಠ ಎಂದರೆ ಒಂದು ಎಕರೆ ಪ್ರದೇಶದ ನಿವೇಶನವನ್ನು ಪಡೆಯುವುದು ಸೂಕ್ತವೆಂದು ಸಭೆ ತೀರ್ಮಾನಿಸಿತು. ಈಗಾಗಲೇ ಹಳೇ ಬಡಾವಣೆಗಳಲ್ಲಿ ಆ ರೀತಿಯ ನಿವೇಶನ ಸಿಗುವುದು ಕಷ್ಟವಾದ್ದರಿಂದ ಬಿ.ಡಿ.ಎಯವರು ನಿರ್ಮಿಸಲಿರುವ ಹೊಸ ಬಡಾವಣೆಯಲ್ಲಿ ಪಡೆಯಬೇಕೆಂದು ಸಲಹೆ ನೀಡಿದರು. ನಿವೇಶನ ಬಿ.ಡಿ.ಎ.ಅವರಿಂದ ಪಡೆಯುವುದಾದರೆ ಐದು ಜನರ ಸಮಿತಿಯೊಂದನ್ನು ಮಾಡಿಕೊಳ್ಳುವುದು ಸೂಕ್ತವೆಂದು ಪ್ರತಿಷ್ಠಾನದ ಅಧ್ಯಕ್ಷರು, ಸಾಮಾನ್ಯಕಾರ್ಯದರ್ಶಿಗಳು, ಖಜಾಂಚಿಗಳು ಹಾಗೂ ಶ್ರೀ ಕಾಗೋಡು ತಿಮ್ಮಪ್ಪನವರು, ಶ್ರೀ ಡಿ.ಬಿ.ಚಂದ್ರೇಗೌಡ ಅವರನ್ನು ಒಳಗೊಂಡ ಸಮಿತಿ ಸ್ಥಳ ಪರಿಶೀಲಿಸಿ ಸರ್ಕಾರದೊಂದಿಗೆ ಹಾಗೂ ಬಿ.ಡಿ.ಎಯೊಂದಿಗೆ ವ್ಯವಹರಿಸಬೇಕೆಂದು ಆ ಕುರಿತು ನಿರ್ಧಾರ ತೆಗೆದುಕೊಳ್ಳಲು ಈ ಸಮಿತಿಗೆ ಅಧಿಕಾರ ಕೊಡಬಹುದೆಂದು ಸಭೆ ತೀರ್ಮಾನಿಸಿತು.

### ಪ್ರತಿಷ್ಠಾನದ ಪ್ರತಿಷ್ಠಾಪನೆ

ಇದಾದದ್ದು 1992 ರಲ್ಲಿ.

ದೇವಂಗಿ ಗ್ರಾಮ ಪಂಚಾಯತಿಯ ಚಿಕ್ಕನೂರು ಗ್ರಾಮ ವ್ಯಾಪ್ತಿಯಲ್ಲಿ ಕುವೆಂಪುರ ಪೂರ್ವಜರ ಒಂದು ದೊಡ್ಡ ಮನೆಯಿತ್ತು, ಅಲ್ಲೇ ಕುವೆಂಪು ನೆನಪಿನ ಪ್ರತಿಷ್ಠಾನ ಸ್ಥಾಪಿಸುವ ಯೋಜನೆ ರೆಡಿಯಾದಾಗ ಆ ಆಸ್ತಿ ಅಣ್ಣತಮ್ಮರ ನಡುವೆ ವಿಭಜನೆಯಾಗಿ ಮೂರ್ನಾಲ್ಕು ಮಂದಿ ವಾರಸುದಾರರಿದ್ದರು.



ಕೊನೆಗೆ ಕುವೆಂಪುರವರ ಗೌರವಾರ್ಥ ಉಳಿದವರು ತಮ್ಮ ಪಾಲಿನ ಆಸ್ತಿಯನ್ನು ಸರ್ಕಾರಕ್ಕೇ ಬಿಟ್ಟುಕೊಟ್ಟರು. ಬದಲೀ ಎರಡು ಭಾಗ ಹೊಂದಿದ್ದ ಶೇಷಪ್ಪ ಗೌಡ, ಇನ್ನೊಂದು ಪಾಲು ಹೊಂದಿದ್ದ ಸುಬೋದ್‌ರ ಒಟ್ಟು 1.1 ಎಕರೆ ಜಾಗಕ್ಕೆ ಕಟ್ಟಡ ಸೇರಿದಂತೆ ಪರಿಹಾರವಾಗಿ ಒಟ್ಟು 7.5 ಲಕ್ಷ ರೂಪಾಯಿ ಕೊಡಲಾಗಿತ್ತು, ಅವತ್ತಿನ ಬೆಲೆಯಲ್ಲೇ ಇವರು ಬಿಟ್ಟುಕೊಟ್ಟು ಮನೆಗಳಲ್ಲಿದ್ದ ನಾಟಗಳ ಮೌಲ್ಯ 25 ಲಕ್ಷ ರೂ.ಗಳಿಗೂ ಹೆಚ್ಚಿತ್ತು, ಈ ಪ್ರಕ್ರಿಯೆಯಲ್ಲಿ ಸುಬೋದ್‌ಗೆ ಸರ್ಕಾರವು 30 ಗುಂಟೆ ಭೂಮಿಯನ್ನು ನೀಡಿತ್ತು. ಜೊತೆಗೊಂದು ಸರ್ಕಾರಿ ಕೆಲಸ ಕೊಡುವುದಾಗಿಯೂ, ಜಮೀನಿಗೆ ನೀರಿನ ಸೌಲಭ್ಯ ಕಲ್ಪಿಸುವುದಾಗಿಯೂ ಆಮಿಷ ತೋರಿದ್ದರೂ ಆ ನಂತರ ಅದೇನೂ ಆಗಲಿಲ್ಲ, ಈ ಪ್ರತಿಷ್ಠಾನದ ನಿರ್ದಿಷ್ಟ ಜಾಗ ಈಗ ಸುಮಾರು 300 x 200 (ಒಂದು ಎಕರೆ ಅಂದಾಜು) ಅಡಿಗಳಷ್ಟಿದೆ. ಹೀಗೆ ಶುರುವಾದ ಪ್ರತಿಷ್ಠಾನ ಈಗ ನಿಧಾನಕ್ಕೆ ಹರಡಿಕೊಂಡು 20 ಎಕರೆಗೂ ಮೀರಿ ವ್ಯಾಪಿಸಿಕೊಂಡಿದೆ. ಪ್ರತಿಷ್ಠಾನದ ಹಿಂಭಾಗಕ್ಕೆ ಕವಿಶೈಲದ ದಿಕ್ಕಿಗೆ ಚಾಚಿಕೊಂಡಂತೆ 15 ಎಕರೆ ಇದೆ. ಗಡಿಕಲ್‌ನ ಬಳಿ ಸಹ್ಯಾದ್ರಿ ದೇಸಿ ವಸ್ತು ಸಂಗ್ರಹಾಲಯ ಮೂರು ಎಕರೆಯಲ್ಲಿದೆ. ಚಿಕ್ಕನೂರಿನಲ್ಲಿಯೇ ಕುವೆಂಪು ಶತಮಾನೋತ್ಸವ ಭವನ 2 ಎಕರೆಯಷ್ಟಿದೆ. ಇದೆಲ್ಲಕ್ಕೂ ಕಲಶವಿಟ್ಟಂತೆ ಪ್ರತಿಷ್ಠಾನದ ಕಾಂಪೌಂಡ್ ಪಕ್ಕದಲ್ಲಿಯೇ ಶ್ರೀಮಾನ್ ಸುಧಾಕರ್ ಎಂಬುವರ ಒಂದು ಚಿಕ್ಕ ಹೋಟೆಲ್ ಕಂ ಕುರುಕು ತಿಂಡಿಗಳ ಅಂಗಡಿಯೂ ಇದೆ. ಮಜಾ ಅಂದರೆ ಕುವೆಂಪುಗೂ ಈ ಅಮೆರಿಕನ್ ಚಿಪ್ಸ್ ಪ್ಯಾಕೆಟ್‌ಗಳಿಗೂ ನೇರ ಸಂಬಂಧ ಇರದಿದ್ದರೂ ಪ್ರತಿಷ್ಠಾನದ ಹಣದಿಂದಲೇ ಈ ಹೋಟೆಲ್ ಕಟ್ಟಡಕ್ಕೆ ಆಗ ಹಣ ಖರ್ಚು ಮಾಡಲಾಗಿತ್ತು, ಅದಕ್ಕೆ ಪ್ರತ್ಯುಪಕಾರವೆಂಬಂತೆ ಸುಧಾಕರ ಈಗ ಯಾರಿಗೂ ನಯಾಪೈಸೆ ಬಾಡಿಗೆ ಕೊಡದೆ ಅನಧಿಕೃತ ಮಾಲಿಕನೇ ಆಗಿಹೋಗಿದ್ದಾನೆ. ಆಗ ಇವೆಲ್ಲಾ ನಡೆಯುತ್ತಿದ್ದಾಗ ಪ್ರತಿಷ್ಠಾನದ ಕೆ.ಟಿ. ನಾರಾಯಣಮೂರ್ತಿ ಎಂಬುವರು ಕಟ್ಟಡ ನಿರ್ಮಾಣಕ್ಕೆಂದು ತರಿಸುತ್ತಿದ್ದ ಜಲ್ಲಿ ಮರಳು, ಇಟ್ಟಿಗೆ ವ್ಯವಹಾರದಲ್ಲಿ ತಮ್ಮ ಜಾಣ್ಮೆ ತೋರಿ ಒಂದಕ್ಕೆರಡು ಬಿಲ್ ಜಡಿದು ಕನ್ನಡ ಸಾಹಿತ್ಯ-ಸಂಸ್ಕೃತಿಯನ್ನು ಉದ್ಧರಿಸಲು ಶ್ರಮಪಟ್ಟರು.

ಇದೆಲ್ಲಾ ಹಳೆಯ ಕತೆ ಬಿಡಿ. ಈಗ ಹೇಳಬೇಕೆಂದರೆ ಪ್ರತಿಷ್ಠಾನವು ತನಗೊಪ್ಪಿಸಿದ ಕೆಲಸವನ್ನು ತಕ್ಕಮಟ್ಟಿಗೆ ಅಚ್ಚುಕಟ್ಟಾಗಿಯೇ ಪೂರೈಸಿದೆ ಎನ್ನಬಹುದು. ಅಲ್ಲಿ ಪ್ರದರ್ಶಿಸಿರುವ ಕುವೆಂಪು ಸಂಬಂಧಿತ ಫೋಟೋಗಳು, ದಾಖಲೆಗಳು, ಮಲೆನಾಡಿನ ಪರಂಪರೆ ಯನ್ನು ಬಿಂಬಿಸುವ ವಸ್ತುಗಳೆಲ್ಲ ನೋಡಿದವರಿಗೆ ಖಂಡಿತಾ ಮುದ ನೀಡುವಂತಿದೆ.

ಆದರೆ

ಅಲ್ಲಿ ದುರ್ಬೀನು ಹಾಕಿ ಹುಡುಕಿದರೂ ಕುವೆಂಪು ಪಡೆದ ಜ್ಞಾನಪೀಠ ಪ್ರಶಸ್ತಿ ಹಾಗೂ ಪುತ್ಥಳಿ ಕಾಣಸಿಗುವುದಿಲ್ಲ. ಅದನ್ನು ಕುವೆಂಪು ವಾರಸುದಾರರು ಮೈಸೂರಿನ ಉದಯರವಿ ಮನೆಯೊಳಗೆ ಇಟ್ಟುಕೊಂಡಿದ್ದಾರೆ. ಇದೇನು ಲೆಕ್ಕಾಚಾರವೋ ಗೊತ್ತಿಲ್ಲ, ಹಾಗಾಗಿ ಪ್ರತಿಷ್ಠಾನವು ಒಂದು ರೀತಿ ಅಪೂರ್ಣ ಅಂತಲೇ ಹೇಳಬಹುದು. ಇವರಿಗೆ ಪ್ರತಿಷ್ಠಾನದ ಆವರಣ ನೀಟಾಗಿರಬೇಕು, ಅಕ್ಕಪಕ್ಕದ ಜನ ತಮ್ಮ ಆಸ್ತಿ ಬಿಟ್ಟುಕೊಟ್ಟು ಜಾಗ ಖಾಲಿ ಮಾಡಬೇಕು, ಆಸುಪಾಸಿನಲ್ಲಿ ಯಾರೂ ಅಂಗಡಿ ಹೋಟೆಲ್ ತೆರೆಯಬಾರದು... ಎಂಬುದೆಲ್ಲಾ ಇದೆ. ಆದರೆ ಇಷ್ಟೆಲ್ಲಾ ಪವಿತ್ರಗೊಳಿಸಿದ ಮೇಲೂ ಜ್ಞಾನಪೀಠ ಪ್ರಶಸ್ತಿಯೂ ಅಲ್ಲಿರಬಾರದು ಎಂಬಂತಾಯಿತು. ಅಂದರೆ ಜನಸಾಮಾನ್ಯರು ತಮ್ಮ ಪಾಲಿನ ಅಮೂಲ್ಯವಾದದ್ದನ್ನೆಲ್ಲಾ ಕುವೆಂಪುಗಾಗಿ ತ್ಯಾಗ ಮಾಡಬೇಕು ಅಂದರೆ ಕುವೆಂಪು ಮನೆಯವರು ತಮಗೆ ಅಮೂಲ್ಯ ಎನಿಸಿದ್ದನ್ನು ಜನರಿಗಿರಲಿ ಸ್ವತಃ ಕುವೆಂಪು ಪ್ರತಿಷ್ಠಾನಕ್ಕೂ ಕೊಡುವುದಿಲ್ಲ ಎಂಬ ಲೆಕ್ಕಾಚಾರವಿದು.

ಇಷ್ಟು ಸಾಲದೆಂಬಂತೆ ಪ್ರತಿಷ್ಠಾನಕ್ಕೆ ಸಾಗಿ ಬರುವ ದಾರಿಯಲ್ಲಿ ಹೈವೇ ಪಕ್ಕದಲ್ಲೇ 10 ಎಕರೆ ಜಾಗವಿದ್ದು ಒಮ್ಮೆ ಅದನ್ನು ಪಡೆದುಕೊಳ್ಳುವ ಯತ್ನ ನಡೆದಿತ್ತು, ಅಲ್ಲಿ ಐದಾರು ಮನೆಗಳಿವೆ. ಜನ ಇದ್ದಾರೆ. ಅವರನ್ನು ಅಲ್ಲಿಂದ ಓಡಿಸಿ ಜಾಗ ವಶಪಡಿಸಿಕೊಳ್ಳುವ ಪ್ಲಾನ್ ರೆಡಿಯಾಗಿದ್ದು ಈಗ ಸದ್ಯಕ್ಕೆ ಪೆಂಡಿಂಗ್ ಇಡಲಾಗಿದೆ. ಈಗಾಗಲೇ ಅಲ್ಲಿ ಕುವೆಂಪು ಹೆಸರಲ್ಲಿ ಒಂದು ಜೈವಿಕ ಪಾರ್ಕ್ ಘೋಷಿಸಲಾಗಿದೆ. ಇಂಥ ನೋಟಿಫೈಡ್ ಏರಿಯಾದೊಳಗಡೆ ಜನವಸತಿ ಇರುವಂತಿಲ್ಲ, ಇದರಿಂದಾಗಿ ಮುಂದಿನ ದಿನಗಳಲ್ಲಿ ನೂರಾರು ಜನ ತಾಪತ್ರಯಕ್ಕೊಳಗಾಗಲಿದ್ದಾರೆ.

### ಸ್ಥಳ ಮಹಾತ್ಮೆಯ ವರಸೆ

ಪುನಃ ಮೊದಲಿನ ವಿಚಾರಕ್ಕೇ ಬರುವುದಾದರೆ ಸುಬೋದ್ ಅಲ್ಲಿ ಹೋಟೆಲ್ ತೆರೆಯಕೂಡದು. ಮತ್ಯಾರೋ ರಬ್ಬರ್ ಬೆಳೆಯಕೂಡದು... ಎಂದೆಲ್ಲಾ ಫರ್ಮಾನು ಹೊರಡಿಸುವುದರ ಬದಲಾಗಿ ಒಟ್ಟಾರೆ ಅಲ್ಲಿನ ಪರಿಸರ, ಸ್ಥಳದ ಮಹತ್ವಕ್ಕೆ ಧಕ್ಕೆಯಾಗದಂತೆ ಹೇಗೆ ಈ ವಿಚಾರ ಬಗೆಹರಿಸಬೇಕೆಂದು ಯೋಚಿಸಿದರೆ ಒಳಿತು. ಪ್ರತಿಷ್ಠಾನದವರ ಅಥವಾ ಕುವೆಂಪು ಭಕ್ತರ ವರ್ತನೆಗಳಲ್ಲಿ ಕುವೆಂಪುರನ್ನು ದೈವತ್ವಕ್ಕೇರಿಸುವ ಧೋರಣೆ ಇರಕೂಡದು. ಸ್ವತಃ ಕುವೆಂಪುರ ತಂದೆಯೇ ಕೆಲಕಾಲ ತೀರ್ಥಹಳ್ಳಿಯಲ್ಲಿ ಹೋಟೆಲ್ ನಡೆಸುತ್ತಿದ್ದರೆಂಬುದನ್ನು ನಾವು ಮರೆಯಬಾರದು.


ಕುವೆಂಪು ಹೆಸರಲ್ಲಿ ಏನನ್ನೂ ಹೇರುವ ಕೆಲಸ ಆಗಕೂಡದು. ರೈತರು ಕೃಷಿಬಿಕ್ಕಟ್ಟಿನ ಈ ಕಾಲದಲ್ಲಿ ಪರಿತಪಿಸುತ್ತಿರುವಾಗ ಅವರು ಅಡಿಕೆ, ರಬ್ಬರ್, ಕಾಫಿ, ಅನಾನಸ್... ಹೀಗೆ ಒಂದನ್ನು ಬಿಟ್ಟು ಇನ್ನೊಂದರತ್ತ ಶಿಫ್ಟ್ ಆಗುವುದು ಬಹಳ ಸಹಜ ಸಂಗತಿ. ನಮ್ಮ ಬುದ್ಧಿಜೀವಿಗಳು ಕುವೆಂಪುಗಿರುವ ಸಾಂಸ್ಕೃತಿಕ ಪರಂಪರೆಯ ಮೌಲ್ಯಕ್ಕೂ ರಬ್ಬರ್ ಬೆಳೆಗೂ ಕ್ರಾಸ್ ಕನೆಕ್ಷನ್ ಮಾಡಿ ಕನ್‌ಫ್ಯೂಸ್ ಆಗುತ್ತಿದ್ದಾರೆ.

ಈ ಮಹಾಶಯರು ನಿಜಕ್ಕೂ ಯೋಚಿಸಬೇಕಾದ ಇನ್ನೊಂದು ಹೊಸ ವಿಚಾರವಿದೆ.

ಕುವೆಂಪು ಪ್ರತಿಷ್ಠಾನವು ಈಗ ಸರ್ಕಾರದಿಂದ ಹಣ ಪಡೆದು ಬೆಂಗಳೂರಿನಲ್ಲಿ ಸೈಟು ಖರೀದಿಸಲು ಹೊರಟಿದೆ!

ಕುವೆಂಪುಗೂ, ಮಲೆನಾಡಿಗೂ ಹಾಗೂ ಬೆಂಗಳೂರಿನ ಬಿಡಿಎ ಸೈಟಿಗೂ ಅದ್ಯಾವ ಪಾರಂಪರಿಕ ಸಂಬಂಧ ಅಂತಾ ಅವರೊಮ್ಮೆ ವಿಚಾರಿಸಲಿ.

● ಪಾರ್ವತೀಶ



## ಪ್ರತಿಷ್ಠಾನದ ಕಾಯಿಲೆಗಳು!


ಮಲೆನಾಡಿನಲ್ಲಿ ಕುವೆಂಪು ಹೆಸರಿನ ನೆಪದಲ್ಲಿ 20 ಎಕರೆಯ SEZ ಆಗುತ್ತಿರುವಾಗಲೇ ಪ್ರತಿಷ್ಠಾನದವರು ಈಗ ...ಂಗಳೂರಿನತ್ತ ಕಣ್ಣು ಹಾಕಿದ್ದಾರೆ. ದಿನಾಂಕ 13.8.12 ರಂದು ನಡೆದ ಸಭೆಯಲ್ಲಿ ಬೆಂಗಳೂರಿನಲ್ಲಿ ಬಿಡಿಎ ...ತಿಯಿಂದ ಒಂದು ಎಕರೆ ಜಮೀನು ಪಡೆದು ಕುವೆಂಪುರ ಸಾಹಿತ್ಯ ಪ್ರಚಾರಕ್ಕೆ ಬಳಸಲು ನಿರ್ಣಯ ಮಾಡಿದ್ದಾರೆ. ...ದರ ವಿಶೇಷ ಏನೆಂದರೆ ಕುವೆಂಪುರ ಯಾವೊಂದು ಪುಸ್ತಕವನ್ನು ಪ್ರತಿಷ್ಠಾನ ಪ್ರಕಟಿಸಿಲ್ಲ. ಕುವೆಂಪುರ ಪುತ್ರಿ ...ನಿಯವರ ಉದಯರವಿ ಪ್ರಕಾಶನ ಮಾತ್ರ ಕುವೆಂಪುರ ಪುಸ್ತಕಗಳನ್ನು ಪ್ರಕಟಿಸುತ್ತಿದೆ. ಕೇವಲ ಅದನ್ನು ಮಾರುವ ...ಲಸವನ್ನಷ್ಟೇ ಪ್ರತಿಷ್ಠಾನ ಮಾಡುತ್ತಿದೆ. ಈ ಕೆಲಸಕ್ಕೂ ಬಳಕೆಯಾಗುತ್ತಿರುವುದು ಸರ್ಕಾರಿ ವಾಹನ, ಸರ್ಕಾರಿ ಪೆಟ್ರೋಲು ...ಾಗೂ ಸರ್ಕಾರಿ ಸಿಬ್ಬಂದಿಯೇ!

ಕಮಿಷನ್ ಕಳೆದು ಬರುವ ಲಾಭವೆಲ್ಲಾ ತಾರಿಣಿಯವರಿಗೆ ಸಿಗುವಂಥ ಅದ್ಭುತ ವ್ಯವಸ್ಥೆ' ಇದಾಗಿದೆ. ಹಾಗೆ ...ೋಡಿದರೆ ಬೆಂಗಳೂರಿನಲ್ಲಿರುವ ಸಪ್ನ (5 ಶಾಖೆ), ನವ ಕರ್ನಾಟಕ, (3 ಶಾಖೆ), ಅಂಕಿತ, ಚೈತ್ರ, ದೇಸಿ, ಕಣ್ವ ...ಮುಖ, ಸಾಹಿತ್ಯ ಲೋಕ, ಸ್ನೇಹ, ಕನ್ನಡ ಡಾಟ್ ಕಾಂ ಇವೇ ಮುಂತಾದ 25 ಕ್ಕೂ ಹೆಚ್ಚು ಪುಸ್ತಕದ ಮಳಿಗೆಗಳಿವೆ. ...ವೆಂಪುರವರ ಪುಸ್ತಕಗಳನ್ನು ಇಲ್ಲಿಯೇ ಮಾರಬಹುದಲ್ಲವೆ?

ಇದೇ ಮೀಟಿಂಗ್‌ನಲ್ಲಿ 'ಪೋಷಕರು ಬರದಿದ್ದರೆ 'ಮಂತ್ರ ಮಾಂಗಲ್ಯ' ವಿವಾಹಕ್ಕೆ ಒಪ್ಪಕೂಡದೆಂತಲೂ' ...ರ್ಮಾನಿಸಲಾಗಿದೆ. ಅನೇಕ ಸಂದರ್ಭದಲ್ಲಿ ಅಂತರ್ಜಾತೀಯ ಹಾಗೂ ಸರಳ ಮದುವೆಗಳಿಗೆ ಪೋಷಕರು ಒಪ್ಪದೆ ...ೋಗುವುದು ಉಂಟಲ್ಲವೆ. ಕುವೆಂಪುರವರ 'ವಿಚಾರ ಕ್ರಾಂತಿ', 'ಮಂತ್ರ ಮಾಂಗಲ್ಯ' ಘೋಷಣೆಗಳು ಪ್ರತಿಷ್ಠಾನದವರ ...ಗೆ ಸಿಕ್ಕು ಯಾವ ಸ್ಥಿತಿಗೆ ಬಂದಿದೆ ನೋಡಿ.

ಇವರಿಗೆ ಮಲೆನಾಡಿನಲ್ಲೂ ಹತ್ತಾರು ಎಕರೆ ಭೂಮಿ ಬೇಕು, ಬೆಂಗಳೂರಿನಲ್ಲೂ ದೊಡ್ಡ ಸೈಟು ಬೇಕು, ...ಂಟಗಟ್ಟಲೆ ಸರ್ಕಾರಿ ಹಣ ಬೇಕು, ಆದರೆ ಕುವೆಂಪು ತತ್ವ ಸಿದ್ಧಾಂತ ಬೇಡವಾಗಿದೆ.

# ಉತ್ತರ ಕನ್ನಡ: ಮೆಡಿಕಲ್ ಕಾಲೇಜಿಗೆ ಕಲ್ಲು ಹಾಕುತ್ತಿರುವ ಕಾಗೇರಿ!!



ಉತ್ತರ ಕನ್ನಡ ಎಂದರೆ ಉತ್ತರ ಕಾಣದ ಸಮಸ್ಯೆಗಳ ಜಿಲ್ಲೆಯೆಂದೇ ಲಾಗಾಯ್ತಿನಿಂದ ಜನಜನಿತ. ದುರಂತವೆಂದರೆ, ಈ ತೀರ ಹಿಂದುಳಿದ ಕರಾವಳಿ-ಮಲೆನಾಡು- ಅರೆಬಯಲು ಸೀಮೆಯ ನಾಡಿಗೆ ಆದರ ಸಚಿವ, ಸಂಸದ, ಶಾಸಕ ಶಿಖಾಮಣಿಗಳೇ ಶಾಪದಂತಾಗಿದ್ದಾರೆ! ಸಮರ್ಥ ಸಂಸದರಾಗಿದ್ದ ಕವಿ-ಕರ್ಮಯೋಗಿ ದಿನಕರ ದೇಸಾಯಿ ಒಬ್ಬರನ್ನು ಬಿಟ್ಟರೆ ಉಳಿದವರೆಲ್ಲ ದಂಡಪಿಂಡಗಳೇ! ಮುಖ್ಯ ಮಂತ್ರಿಯಂಥ ಅತ್ಯುನ್ನತ ಪೀಠದಲ್ಲಿದ್ದ ರಾಮಕೃಷ್ಣ ಹೆಗಡೆಯಿಂದ ಇತ್ತೀಚಿನ ದೇಶಪಾಂಡೆ-ಶಿವಾನಂದ ನಾಯ್ಕ, ತನಕದ ಮಂತ್ರಿ ಮಾಂಡಲೀಕರು ತಂತಮ್ಮ ಜೀರ್ಣೋದ್ಧಾರ ಭರ್ಜರಿಯಾಗಿ ಮಾಡಿಕೊಂಡರೇ ಹೊರತು ಈ ನಿರ್ಲಕ್ಷಿತ ಜಿಲ್ಲೆಯ ಬೇಕು-ಬೇಡಗಳಿಗೆ ನಿಯತ್ತಿನಿಂದ ಸ್ಪಂದಿಸಲೇ ಇಲ್ಲ!

ಚೆಡ್ಡಿ ಪರ್ವದಲ್ಲೀಗ ಉತ್ತರ ಕನ್ನಡಕ್ಕೆ ಇಬ್ಬಿಬ್ಬರು ಸಚಿವರ "ಭಾಗ್ಯ" ಬಂದಿದೆ! ಒಣಪ್ರತಿಷ್ಠೆ-ಅಧಿಕಾರಕ್ಕೆ ಕಾಗೆಯಂತೆ ಕಚ್ಚಾಡುವ ಕಾಗೇರಿ ಮಾಣಿ ಮತ್ತು ಅಡ್ನಾಡಿ ಅಸ್ನೋಟಿಕರ್ ಎಂಬ ಮಂತ್ರಿದ್ವಯರು ಉತ್ತರ ಕನ್ನಡ ಪಾಲಿಗೆ ಇದ್ದೂ "ಇನ್ನಿಲ್ಲ"ದಂತಾಗಿದ್ದಾರೆ. ತಾನು ಇಡೀ ಜಿಲ್ಲೆಯ ಉಸ್ತುವಾರಿ ಮಂತ್ರಿ ಎಂಬ "ಎಚ್ಚರ" ಇಲ್ಲದ ಕಾಗೇರಿ ಭೌತಿಕವಾಗಿ ಅದೆಷ್ಟು ಎತ್ತರವೋ ಅಷ್ಟೇ ಕುಬ್ಜ ಗುಣ-ನಡತೆಯಲ್ಲಿ. ಕಾಗೇರಿಯ ಮಂತ್ರಿಗಿರಿ ಆತ ಪ್ರತಿನಿಧಿಸುವ ಶಿರಸಿ-ಸಿದ್ಧಾಪುರ ಅಸೆಂಬ್ಲಿ ಕ್ಷೇತ್ರಕ್ಕೆ ಸೀಮಿತವಾಗಿ ಹೋಗಿದೆ. ಇದಾತನ ಅಲ್ಪತನಕ್ಕೆ ನಿಚ್ಚಳ ನಿದರ್ಶನ. ಅತ್ತ ಆನಂದ ಅಸ್ನೋಟಿಕರ್ ಮಂತ್ರಿ ಹುದ್ದೆಯಲ್ಲಿದ್ದರೂ ಸ್ವ-ಕ್ಷೇತ್ರ ಕಾರವಾರ-ಅಂಕೋಲೆಯ ಯಃಕಶ್ಚಿತ್ ಶಾಸಕನ ಮಟ್ಟದಲ್ಲೇ ಇದ್ದಾನೆ.

ಯಾವಾಗ ಕಾಗೇರಿ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿ ಒಕ್ಕರಿಸಿದನೋ ಅಂದೇ ಉತ್ತರ ಕನ್ನಡದ ಕರಾವಳಿಯ ಕಡೆಗಣನೆಯೂ ಶುರುವಾಯ್ತು! ಸ್ವ-ಜಾತಿ ಹವ್ಯಕ ಬ್ರಾಹ್ಮಣರು ಹೆಚ್ಚಿರುವ ಶಿರಸಿ ಸೀಮೆಯನ್ನು ಆಸ್ಥಾನ ಮಾಡಿಕೊಂಡ ಕಾಗೇರಿ ಕರಾವಳಿಗೆ ಮಂಜೂರಾದ ವಿವಿಧ ಯೋಜನೆ-ಅನುದಾನ-ಅನುಕೂಲಗಳನ್ನೆಲ್ಲ ದಾದಾಗಿರಿಯಿಂದ ಶಿರಸಿಗೆ ಹೊತ್ತೊಯ್ಯತೊಡಗಿದ! ಶಿರಸಿ-ಹಾವೇರಿ ರೈಲು ಮಾರ್ಗಕ್ಕೆ ತಂತ್ರಗಾರಿಕೆ ನಡೆಸಿರುವ ಕಾಗೇರಿಯ ಬ್ರಾಹ್ಮಣ ಬಳಗವೇ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗವಾಗದಂತೆ ಕಿತಾಪತಿ ಮಾಡುತ್ತಿದೆ. ಪ್ರತ್ಯೇಕ ಲೋಕೋಪಯೋಗಿ ಡಿವಿಜನ್ ಆಫೀಸು-ಡಿಡಿಪಿಐ ಆಫೀಸು ಶಿರಸಿಗೆ ತಂದುಕೊಂಡಿರುವ ಮಂತ್ರಿ ಕಾಗೇರಿಯ ಹಿಡನ್ ಅಜೆಂಡಾ


ಪಂಡಿತ ಸಾರ್ವಜನಿಕ ಆಸ್ಪತ್ರೆ..



ಎಂದರೆ ಘಟ್ಟದ ಮೇಲಿನ ಪ್ರದೇಶವನ್ನು ಜಿಲ್ಲೆಯಾಗಿಸಿಕೊಳ್ಳೋದು. ಅಂದರೆ-ಶಿರಸಿಯನ್ನು ಬ್ರಾಹ್ಮಣರ ಸಾಮ್ರಾಜ್ಯ ಮಾಡಿಕೊಂಡು ಅದರ ಅನಭಿಷಕ್ತ ದೊರೆಯಾಗಿ ಮೆರೆಯೋದು.

ರಾಜ್ಯದಲ್ಲೇ ಎರಡನೇ ಅತಿದೊಡ್ಡ ಜಿಲ್ಲೆಯಾದ ಉತ್ತರ ಕನ್ನಡ ಎರಡು ಜಿಲ್ಲೆಯಾಗಿಸುವುದು ಆಡಳಿತಾತ್ಮಕವಾಗಿ ಮತ್ತು ಅಭಿವೃದ್ಧಿಗಾಗಿ ಉತ್ತಮ ಎನ್ನಬಹುದು. ಆದರೆ ಕಂತ್ರಿ ಕಾಗೇರಿಯದು ಪಕ್ಕಾ ದುರುದ್ದೇಶ; ಶಿರಸಿಯಲ್ಲಿ ಬ್ರಾಹ್ಮಣಶಾಹಿ ಏಕಸ್ವಾಮ್ಯ ಸ್ಥಾಪಿಸುವ ಹುನ್ನಾರ. ಅದಕ್ಕಾಗಿಯೇ ಆತ ಒಡೆದಾಳುವ ಹಿಕಮತ್ತು ನಡೆಸಿದ್ದಾರೆ. ಪ್ರತ್ಯೇಕ ಜಿಲ್ಲೆಯ ಪ್ರಸ್ತಾಪ ಮಂಡಿಸುವ ರಾಜಕೀಯ ಇಚ್ಛಾಶಕ್ತಿಯ ದಮ್ ಇಲ್ಲದ ಕಾಗೇರಿ ತಾರತಮ್ಯದ ಆಡಳಿತ ಮಂತ್ರಿಗಿರಿ ಬಲದಿಂದ ನಡೆಸಿದ್ದಾರೆ. ಘಟ್ಟದ ಕೆಳಗೆ ಮಂಜೂರಾಗುವ ಸೌಲಭ್ಯ-ಸ್ಕೀಮು-ಪ್ರಾಜೆಕ್ಟ್‌ಗಳನ್ನು ಬಲಾತ್ಕಾರದಿಂದ ಶಿರಸಿಗೆ ಸ್ಥಳಾಂತರಿಸುವ ಕಾಗೇರಿ ಚೆಡ್ಡಿ ದೇಶಭಕ್ತ ಬ್ರಾಹ್ಮಣನೊಬ್ಬನಿಗೆ ಭೂಷಣವಲ್ಲದ ನೀಚತನ ನಾಜೂಕಾಗಿ ನಡೆಸಿದ್ದಾರೆ!

ಒಕ್ಕಟ್ಟಾಗಿದ್ದ ಉತ್ತರ ಕನ್ನಡವನ್ನು ಕಾಗೇರಿಯ ಹೊಟ್ಟೆಕಿಚ್ಚಿನ ಆಡಳಿತಶೈಲಿ ಮಾನಸಿಕವಾಗಿ ಒಡೆದುಹಾಕಿದೆ. ಬಹುಶಃ ದೇಶದ ಯಾವ ಭಾಗದಲ್ಲೂ ಇಲ್ಲದ ವಿಶಿಷ್ಟ ಸಂಸ್ಕೃತಿ, ವೈವಿಧ್ಯಮಯ ಜನಸಮುದಾಯ, ಭೌಗೋಳಿಕ ಬದಲಾವಣೆ ಈ ಜಿಲ್ಲೆಯಲ್ಲಿದ್ದರೂ ವಿವಿಧತೆಯಲ್ಲಿ ಏಕತೆಯಿತ್ತು, ಆದರೆ ಕಾಗೇರಿಯ ಬ್ರಾಹ್ಮಣಿಕೆ ಬುದ್ಧಿಯಿಂದ ಈಗ ಜಿಲ್ಲೆಯಲ್ಲಿ ದಾಯಾದಿ ಮತ್ಸರಕ್ಕೆಡೆಯಾಗಿದೆ; ಘಟ್ಟದ ಮೇಲಿನ-ಕೆಳಗಿನ ಭಾಗವೆಂಬ ದ್ವೇಷಾಸೂಯೆಯ ಕ್ಷೋಭೆ ಶುರುವಾಗಿದೆ. ಕಾಗೇರಿಯ ತಾರತಮ್ಯ-ಅನ್ಯಾಯದ ರೀತಿ-ನೀತಿಗೆ ಕೆರಳಿರುವ ಜನ ಧಿಕ್ಕಾರ ಹಾಕುತ್ತಿದ್ದಾರೆ; ಜಿಪಂ ಇಂಜಿನಿಯರಿಂಗ್ ಕಚೇರಿ, ವಾರ್ತಾ ಕಚೇರಿ, ಸಣ್ಣ ನೀರಾವರಿ ಆಫೀಸು ಕಾರವಾರದಿಂದ ಕಸಿದು ಶಿರಸಿಗೊಯ್ದಾಗ ಜನ ಈ ಕಾಗೇರಿಗೆ ಛೀಮಾರಿ ಹಾಕಿದ್ದರು. ಕೇಸು ಕೋರ್ಟಿಗೂ ಹೋಗಿತ್ತು, ಆದರೂ ನಿರ್ಲಜ್ಜ ಕಾಗೇರಿ ಪಾಠ ಕಲಿತಿಲ್ಲ, ಈಗಾತ ಜಿಲ್ಲಾ ಕೇಂದ್ರ ಕಾರವಾರಕ್ಕೆ ಮಂಜೂರಾಗಿದ್ದ ಮೆಡಿಕಲ್ ಕಾಲೇಜನ್ನು ಅಪಹರಿಸಲು ರಹಸ್ಯ ಕಾರ್ಯಾಚರಣೆ ನಡೆಸುತ್ತಿದ್ದಾರೆ....




ರಾಮದಾಸ್

ಜಿಲ್ಲೆಗೊಂದು ಮೆಡಿಕಲ್ ಕಾಲೇಜು; ಅದು ಜಿಲ್ಲಾ ಕೇಂದ್ರದಲ್ಲೇ ಸ್ಥಾಪನೆ ಆಗಬೇಕು. ಇದು ಸರ್ಕಾರದ ನೀತಿ. ಈ ನಿಯಮದಂತೆ ಉತ್ತರ ಕನ್ನಡ ರಾಜಧಾನಿ ಕಾರವಾರದಲ್ಲೊಂದು ವೈದ್ಯಕೀಯ ಮಹಾವಿದ್ಯಾಲಯ ಶುರುಮಾಡುವ ಪ್ರಸ್ತಾವನೆ ಮೂರು ವರ್ಷದ ಹಿಂದೆಯೇ ಸರ್ಕಾರಕ್ಕೆ ಹೋಗಿತ್ತು, ಆದರೆ ಅದು ನೆನೆಗುದಿಗೆ ಬಿದ್ದಿತ್ತು. ಏಕೆಂದರೆ, ಬ್ರಾಹ್ಮಣ ಮಂತ್ರಿ ಕಾಗೇರಿಗೆ ಕಾರವಾರದಲ್ಲಿ ಆ ಮೆಡಿಕಲ್ ಕಾಲೇಜು-ಆಸ್ಪತ್ರೆ ಆರಂಭವಾಗುವುದು ಬೇಡವಾಗಿತ್ತು, ಶೂದ್ರ ಮಂತ್ರಿ ಅಸ್ನೋಟಿಕರ್‌ಗೆ ಆತನ ರಂಗೀಲಾ ರಾಜಕಾರಣದ ನಡುವೆ ಇದರ ಖಬರೇ ಇರಲಿಲ್ಲ, ಅಸ್ನೋಟಿಕರನ ಈ ನಿದ್ದೆಬಡುಕತನ ಕಾಗೇರಿ ವ್ಯವಸ್ಥಿತವಾಗಿ ಪಿತೂರಿಗೆ ಬಳಸಿಕೊಂಡರು. ಹೇಗಾದರೂ ಮಾಡಿ ತನ್ನ ಶಿರಸಿ ಸಂಸ್ಥಾನಕ್ಕೇ ಈ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ಮತ್ತು ಕಾಲೇಜು ತರಲು ರಹಸ್ಯ "ಆಟ" ಆರಂಭಿಸಿದ್ದರು.

ಇದ್ದಕ್ಕಿದ್ದಂತೆಯೇ ಕಳೆದ ವರ್ಷ ಶಿರಸಿಯ ಪಂಡಿತ್ ಜನರಲ್ ಆಸ್ಪತ್ರೆ (ಸರ್ಕಾರಿ ಆಸ್ಪತ್ರೆ)ಯನ್ನು ಮೇಲ್ದರ್ಜೆಗೇರಿಸಿಕೊಂಡರು ಕಾಗೇರಿ ಸಾಹೇಬ್ರು. ಆಗಲೇ ಕಾಗೇರಿ ಕಾರವಾರಕ್ಕೆ ಮಂಜೂರಾದ ಮೆಡಿಕಲ್ ಕಾಲೇಜನ್ನು ಶಿರಸಿಗೆ ವರ್ಗಾಯಿಸಲು ಕರಾಮತ್ತು ನಡೆಸಿರುವ ಸೂಚನೆಗಳು ಗೋಚರಿಸಹತ್ತಿತ್ತು. ಕಾಗೇರಿಯ ಕರಾಮತ್ತು ಒಂದೆಡೆ ನಡೆಯುತ್ತಿದ್ದರೆ, ಮತ್ತೊಂದೆಡೆ ಕೇಂದ್ರದ ಆರೋಗ್ಯ ಇಲಾಖೆಯ ಅಧಿಕಾರಿಗಳು ಕಾರವಾರಕ್ಕೆ ಬಂದು ಮೆಡಿಕಲ್ ಕಾಲೇಜು ಸ್ಥಾಪನೆಗೆ ಇರುವ ಸಾಧ್ಯಾಸಾಧ್ಯತೆಯ ಅಧ್ಯಯನ ನಡೆಸಿದರು; ಜಿಲ್ಲಾ ಆಸ್ಪತ್ರೆಯನ್ನು ವೈದ್ಯಕೀಯ ವಿದ್ಯಾಲಯ ಮಾಡುವ ಕುರಿತು ವಿಸ್ತೃತ ಚರ್ಚೆ ನಡೆಸಿಹೋದರು. ಇದು ಗೊತ್ತಾಗಿದ್ದೇ ತಡ, ಸಚಿವ ಕಾಗೇರಿಗೆ ಕಳಗಿಂದ ಕಡಿತ ಶುರುವಾಯ್ತು; ಆತ ತಕ್ಷಣ ಶಿರಸಿಗೊಂದು ಮೆಡಿಕಲ್ ಕಾಲೇಜು ಬೇಕೆಂದು ಪ್ರಸ್ತಾವನೆ ಸರ್ಕಾರಿ ಮಟ್ಟದಲ್ಲಿ ಮಂಡಿಸಿಬಿಟ್ಟರು.


ಆರೆಸ್ಸೆಸ್ ಮತ್ತು ಚೆಡ್ಡಿ ಸರ್ಕಾರದಲ್ಲಿ ಕಾಗೇರಿ ತುಂಬ ಪ್ರಭಾವಿ. ಕೆಲಸಕ್ಕೆ ಬಾರದ ಮಂತ್ರಿ ಅಸ್ನೋಟಿಕರ್ ಮತ್ತು ಉತ್ತರ ಕನ್ನಡದ ಶೂದ್ರ ಸಮೂಹ ಅದೆಷ್ಟೇ ದೊಡ್ಡ ಬೊಬ್ಬೆ ಹಾಕಿದರೂ ಕಾಗೇರಿಯ ರಾಕ್ಷಸ ಹಠವೇ ಗೆಲ್ಲುತ್ತದೆ. ಆತ ಕಾರವಾರದಿಂದ ಮೆಡಿಕಲ್ ಕಾಲೇಜನ್ನು ಶಿರಸಿಗೆ ಶಿಫ್ಟ್ ಮಾಡಲು ಅಧಿಕಾರಿಗಳಿಗೆ ಒಳಗೊಳಗೇ ತಾಕೀತು ಮಾಡಿದರು. ಅಧಿಕಾರಿಗಳು ಕಾರವಾರಕ್ಕಿಂತ ಶಿರಸಿಯೇ ಮೆಡಿಕಲ್ ಕಾಲೇಜು ಸ್ಥಾಪನೆಗೆ ಪ್ರಶಸ್ತ ಸ್ಥಳ ಎಂಬ ಸುಳ್ಳು ವರದಿ, ಅಂಕಿ-ಅಂಶ ಸಿದ್ಧಪಡಿಸಿಬಿಟ್ಟರು. ಶಿರಸಿಯಲ್ಲಿ ವೈದ್ಯಕೀಯ ಕಾಲೇಜು-ಸುಸಜ್ಜಿತ ಆಸ್ಪತ್ರೆ ಪ್ರಾರಂಭಿಸುವ ಶಿಫಾರಸ್ಸು ಅಧಿಕಾರಿಗಳ ವರದಿಯ ಮೇಲೇ ಕೈಗೊಳ್ಳಲಾಗಿದೆ ಎಂಬಂತೆ ಬಿಂಬಿಸಲು ಕಾಗೇರಿ ಮಾಡಬಾರದ್ದೆಲ್ಲ ಮಾಡಿದ್ದಾರೆ. ತಾನು ಸಂಭಾವಿತನೆಂದು ಕರಾವಳಿ ಭಾಗದ ಜನರಿಗೆ ತೋರಿಸಿಕೊಳ್ಳಲು ಆತ ನಾಟಕವಾಡಿದ್ದಾರೆ.



ಅಸ್ನೋಟಿಕರ್

ಕಾಗೇರಿಯ ಆಜ್ಞೆಯಂತೆ ಕಂದಾಯ ಮತ್ತು ಆರೋಗ್ಯ ಇಲಾಖಾಧಿಕಾರಿಗಳು ತಯಾರಿಸಿರುವ ಬೋಗಸ್ ವರದಿಯಲ್ಲಿ ಪ್ರತಿದಿನ ಶಿರಸಿಯ ಸರ್ಕಾರಿ ಆಸ್ಪತ್ರೆಗೆ ಬರುವ ಹೊರರೋಗಿಗಳು 450 ಎಂದು ತೋರಿಸಲಾಗಿದೆ; ಇದರಲ್ಲಿ ಶಿರಸಿಯ ಪಕ್ಕದ ಹಾವೇರಿ ಜಿಲ್ಲೆಯ ಹಾನಗಲ್, ಶಿವಮೊಗ್ಗೆಯ ಸೊರಬದಿಂದಲೂ ರೋಗಿಗಳು ಬರುತ್ತಾರೆಂದು ವೈಭವೀಕರಿಸಲಾಗಿದೆ. ಹಾಗೆಯೇ ಶಿರಸಿ ಬಳಿಯ ಗೋಮಾಳದ 25 ಎಕರೆ ಜಾಗವನ್ನು ವೈದ್ಯಕೀಯ ಕಾಲೇಜಿಗೆಂದು ಮೀಸಲಿಟ್ಟ ಪ್ರದೇಶವೆಂದು ಬರೆಯಲಾಗಿದೆ. ರೋಗಿಗಳ ಸಂಖ್ಯೆಯಲ್ಲಿ ಅತಿಶಯೋಕ್ತಿ ಇದ್ದರೆ, ಗೋಮಾಳ ಬೇರೆ ಉದ್ದೇಶಕ್ಕೆ ಬಳಸದಂತೆ ಸುಪ್ರೀಂಕೋರ್ಟ್ ಹಾಗು ಹೈಕೋರ್ಟ್ ಕಟ್ಟುನಿಟ್ಟಿನ ಆದೇಶ ನೀಡಿದೆ. ಇದನ್ನು ಉಲ್ಲಂಘಿಸಿ ಅಧಿಕಾರಿಗಳು ಕಾಗೇರಿಯನ್ನು ಖುಷಿಪಡಿಸಲು ಶಿರಸಿಯಲ್ಲಿ ಮೆಡಿಕಲ್ ಕಾಲೇಜಿಗೆ ದೊಡ್ಡ ಜಾಗವಿದೆ ಎಂದು ಭ್ರಮೆ ಮೂಡಿಸಿದ್ದಾರೆ.

ಹಾಗೆ ನೋಡಿದರೆ, ಕಾರವಾರದಲ್ಲೇ ಮೆಡಿಕಲ್ ಕಾಲೇಜಿಗೆ ಬೇಕಾಗುವ ಮೂಲಭೂತ ಸೌಕರ್ಯಗಳು ಹೆಚ್ಚಿವೆ. ಆದರೆ ಅಧಿಕಾರಿಗಳು ಇದೆಲ್ಲವನ್ನು ಪ್ರಜ್ಞಾಪೂರ್ವಕವಾಗಿ ಮರೆಮಾಚಿದ್ದಾರೆ. ಕಾರವಾರ ಆಸ್ಪತ್ರೆಗೆ ದಿನನಿತ್ಯ ಬರುವ ಹೊರರೋಗಿಗಳು 150 ಎಂದು ವರದಿಯಲ್ಲಿ ಹೇಳಲಾಗಿದೆ. ಇದು ಹಸೀ ಸುಳ್ಳು. ಹಾಗೆಯೇ ನಿತ್ಯವೂ ಕಾರವಾರ ಅಥವಾ ಕರಾವಳಿ ಭಾಗದಿಂದ ಗೋವಾ ಮತ್ತು ಮಣಿಪಾಲ (ಉಡುಪಿ) ಆಸ್ಪತ್ರೆಗೆ ಅನಿವಾರ್ಯವಾಗಿ ಹೋಗುವ ರೋಗಿಗಳ ಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ನಮೂದಿಸಿಲ್ಲ, ಕಾರವಾರ ಆಸ್ಪತ್ರೆಯಲ್ಲಿ ಇರಬೇಕಾದ ವೈದ್ಯರು 30 ಮಂದಿ; ಆದರೆ ಇರುವುದು ಬರೀ 8 ಜನ. ಹೀಗಿರುವಾಗ ರೋಗಿಗಳು ಬಚಾವಾಗಲು ಗೋವಾ-ಮಣಿಪಾಲಕ್ಕೆ ಹೋಗದಿರುತ್ತಾರಾ? ಈ ಕಟುವಾಸ್ತವ ಬೇಕಂತಲೇ ಕಾಗೇರಿ ಕೃಪಾಪೋಷಿತ ಮಂಡಳಿ ಮುಚ್ಚಿಟ್ಟಿದೆ! ವೈದ್ಯರಿಲ್ಲದ್ದರಿಂದಲೇ ಕಾರವಾರ ಆಸ್ಪತ್ರೆಗೆ ರೋಗಿಗಳು ಬರುತ್ತಿಲ್ಲವೆಂಬ ಸತ್ಯ ಪರಿಗಣಿಸಿಯೇ ಇಲ್ಲ, ಅಧಿಕಾರಿಗಳೂ ತಾವು ಕಾಗೇರಿಗೆ ಬೆದರಿ 'ಪಾತಕ' ಮಾಡಿದ್ದೇವೆಂಬುದನ್ನು ಮೊಗುಂ ಆಗಿ ಒಪ್ಪಿಕೊಳ್ಳುತ್ತಾರೆ, ಪಾಪ!





ಕಾರವಾರದ ಜಿಲ್ಲಾ ಆಸ್ಪತ್ರೆಗೆ ಶಿರಸಿ ಆಸ್ಪತ್ರೆಗೆ ಬರುವಷ್ಟೂ ರೋಗಿಗಳು ಬರುತ್ತಿಲ್ಲ ಎಂಬ ಸುಳ್ಳನ್ನು ಮೈನಸ್ ಅಂಶವೆಂದು ತೋರಿಸಿ ಜಿಲ್ಲಾ ಆಸ್ಪತ್ರೆಗೆ ಮಂಜೂರಾಗುವ ಮೆಡಿಕಲ್ ಕಾಲೇಜಿಗೆ ಕಲ್ಲು ಹಾಕುವುದೇ ಕಾಗೇರಿ ಬಳಗದ ಮೂಲ ಉದ್ದೇಶ. ಅದಕ್ಕಾಗಿಯೇ ಆತ ಗಣೇಶಚತುರ್ಥಿ ಹಬ್ಬದ ಮುನ್ನಾ ದಿನ ತರಾತುರಿಯಲ್ಲಿ ಜಿಲ್ಲಾಧಿಕಾರಿ, ಜಿಪಂ ಸಿಇಓಗಳನ್ನು ಶಿರಸಿಗೇ ಕರೆಸಿ ಕೆಡಿಪಿ ಮೀಟಿಂಗ್ ನಡೆಸಿದ್ದರು. ಹಬ್ಬದ ಮರುದಿನವೇ ಬೆಂಗಳೂರಲ್ಲಿ ವೈದ್ಯಕೀಯ ಸಚಿವ ರಾಮದಾಸ್ ಕರೆದಿದ್ದ ಸಭೆಯಲ್ಲಿ ಶಿರಸಿಯೇ ಮೆಡಿಕಲ್ ಕಾಲೇಜಿಗೆ ಯೋಗ್ಯ-ಅರ್ಹ ಪ್ರದೇಶವೆಂದು ವಾದಿಸಲು ಅಧಿಕಾರಿಗಳಿಗೆ "ಶಸ್ತ್ರ" ಒದಗಿಸಲೆಂದೇ ಕಾಗೇರಿ ಈ ಕೆಡಿಪಿ ಸಭೆ ನಡೆಸಿದ್ದರು. ತಾನು ಮಾತ್ರ ತುಂಬ ಉಪಾಯವಾಗಿ ವೈದ್ಯಕೀಯ ಮಂತ್ರಿ ಕರೆದ ಸಭೆಗೆ ಹೋಗದೆ ತಪ್ಪಿಸಿಕೊಂಡ ಕಾಗೇರಿ ತನ್ನ ಪ್ರತಿನಿಧಿಯಾಗಿ ಶಿರಸಿ ಅಸಿಸ್ಟೆಂಟ್ ಕಮೀಷನರ್ ಗೌತಮ್ ಬಗಾದಿಯನ್ನು ಕಳಿಸಿದ್ದರು. ಈ ಬಗಾದಿ "ಬಾಸ್" ಮನದಿಚ್ಛೆಯಂತೆಯೇ ಕಾರವಾರಕ್ಕಿಂತ ಶಿರಸಿಯೇ ಮೆಡಿಕಲ್ ಕಾಲೇಜು ಹೋಗಲು ಸರಿಯಾದ ಸ್ಥಳವೆಂದು ವಿತಂಡವಾದ ಮಂಡಿಸಿ ಬಂದರು.

ಕಾರವಾರದಲ್ಲೊಂದು ಮೆಡಿಕಲ್ ಕಾಲೇಜು ಅರ್ಥಾತ್ ಸುಸಜ್ಜಿತ ಆಸ್ಪತ್ರೆ ಬೇಕೆಂಬ ಬೇಡಿಕೆ ಇಂದು-ನಿನ್ನೆಯದಲ್ಲ. ಉತ್ತರ ಕನ್ನಡದ ಕರಾವಳಿಯಲ್ಲಿ ತುರ್ತು ಸಂದರ್ಭದಲ್ಲಿ ಬೇಕಾದ ದೊಡ್ಡ ಆಸ್ಪತ್ರೆಯೇ ಇಲ್ಲ, ಇಲ್ಲಿಂದ ರಾಷ್ಟ್ರೀಯ ಹೆದ್ದಾರಿಯೊಂದು ಹಾದುಹೋಗಿದೆ. ಅಪಘಾತಗಳು ನಿತ್ಯ-ನಿರಂತರ. ಇಂಥ ಹೊತ್ತಲ್ಲಿ ಅಪಘಾತಕ್ಕೆ ತುತ್ತಾದವರಿಗೆ ಅಥವಾ ಗಂಭೀರ ಸಮಸ್ಯೆಯ ರೋಗಿಗಳಿಗೆ ರಕ್ಷಿಸಬೇಕೆಂದರೆ ದೂರದ ಮಣಿಪಾಲ ಅಥವಾ ಗೋವಾ ಪಣಿ ಆಸ್ಪತ್ರೆಯೇ ಗತಿ. ಆಸ್ಪತ್ರೆ ತಲುಪುವಾಗಲೇ ಹಲವರು ಜೀವ ಬಿಟ್ಟಿದ್ದಾರೆ. ಹಾಗಾಗಿ ಕಾರವಾರದಲ್ಲಿ ಮೆಡಿಕಲ್ ಕಾಲೇಜು ಬೇಕೆಂಬ ಕೂಗು ಇದ್ದೇ ಇದೆ. ಆದರೆ ಕಾಗೇರಿ-ದೇಶಪಾಂಡೆಯಂಥ ಉತ್ತರ ಕನ್ನಡ ಆಳಿದ-ಆಳುತ್ತಿರುವ ದುರುಳ ದೊರೆಗಳಿಗೆ ಈ ಅಳಲು ಕೇಳಿಸುತ್ತಿಲ್ಲ, ಅವರಿಗೆ ಕೀಳು ರಾಜಕಾರಣವೇ ಅಮಾಯಕರ ಜೀವಕ್ಕಿಂತ ಮುಖ್ಯ.

ಕಾರವಾರ ಸಿವಿಲ್ ಆಸ್ಪತ್ರೆಗೆ ಪ್ರತಿದಿನ 300ಕ್ಕೂ ಹೆಚ್ಚು ಪೇಷಂಟ್ ಬರುತ್ತಾರೆ. ಒಳರೋಗಿಗಳಿಗಾಗಿ ಬರೋಬ್ಬರಿ 400 ಹಾಸಿಗೆ ಸೌಲಭ್ಯವೂ ಇದೆ. ಕಾಲೇಜು ಕಟ್ಟಲು ಸಾಕಷ್ಟು ಸ್ಥಳವೂ ಇದೆ. ಸಿವಿಲ್ ಆಸ್ಪತ್ರೆ ಸ್ಥಾಪಿಸುವ ಸಂದರ್ಭದಲ್ಲೇ ಮೆಡಿಕಲ್ ಕಾಲೇಜಿಗೆ ಬೇಕಾಗುವಷ್ಟು ಸ್ಥಳ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು, ಸೂಕ್ತ ಕಟ್ಟಡವೂ ಇಲ್ಲಿದೆ. ವೈದ್ಯಕೀಯ ಕಾಲೇಜಾಗಿ ಸಿವಿಲ್ ಆಸ್ಪತ್ರೆ ಪರಿವರ್ತಿಸಿಕೊಳ್ಳಲು ಹಲವು ಅನುಕೂಲತೆಗಳು ಕಾರವಾರದಲ್ಲಿದೆ. ಇದೆಲ್ಲ ಕಡೆಗಣಿಸಿ ಕಾಗೇರಿಯ ಬ್ರಾಹ್ಮಣ ಬಳಗ ಕರಾವಳಿ ಭಾಗಕ್ಕೆ ವಂಚನೆ-ಮೋಸ ಮಾಡಲು ಅಧಿಕಾರ ಬಲ ಬಳಸುತ್ತಿರುವುದು ಘೋರವಾಗಿದೆ.

ಶಿರಸಿಗಿಂತ ಕಾರವಾರ ಭಾಗಕ್ಕೆ ಮೆಡಿಕಲ್ ಕಾಲೇಜಿನ ಅವಶ್ಯಕತೆ ಹೆಚ್ಚಿದೆ. ವೈದ್ಯಕೀಯ ಶಿಕ್ಷಣ ಮತ್ತು ವೈದ್ಯಕೀಯ ಸವಲತ್ತಿನ ಎರಡೂ ದೃಷ್ಟಿಯಿಂದ ಯೋಚಿಸಿದರೂ ಕಾರವಾರವೇ ಸರಿಯಾದ ಸ್ಥಳ. ಶಿರಸಿಗೆ ಸಮೀಪದಲ್ಲಿ ಹುಬ್ಬಳ್ಳಿಯ ಕೆಎಂಸಿ ಮತ್ತು ಶಿವಮೊಗ್ಗದ ಸುಸಜ್ಜಿತ ಆಸ್ಪತ್ರೆಗಳಿವೆ. ಆದರೆ ಕರಾವಳಿಯವರಿಗೆ ಇಂಥ ಅವಕಾಶ ಹತ್ತಿರದಲ್ಲಿ ಇಲ್ಲ, ಕಾಗೇರಿ ಪಟಾಲಂ ಶಿರಸಿ ವಾಣಿಜ್ಯ ಕೇಂದ್ರವೆಂದು ಸುಳ್ಳು ಹೇಳುತ್ತಿದೆ. ಆದರೆ ಕೈಗಾ ಅಣುಸ್ಥಾವರ, ನೌಕಾನೆಲೆ, ವಿವಿಧ ಜಲವಿದ್ಯುತ್ ಯೋಜನೆ, ಮೀನುಗಾರಿಕೆ, ಅಡಿಕೆ ವ್ಯವಹಾರ, ಬಂಗಾರದ ಆಭರಣ ತಯಾರಿಕೆ ಮುಂತಾದವು ಉತ್ತರ ಕನ್ನಡದ ಕರಾವಳಿಯಲ್ಲಿ ಮಲೆನಾಡಿಗಿಂತ ಹೆಚ್ಚು, ಕಾರವಾರ ನಗರವೊಂದರಲ್ಲೇ ನಡೆಯುವ ವಹಿವಾಟಿನ ಶೇ. 10 ರಷ್ಟೂ ಶಿರಸಿಯಲ್ಲಿ ಪ್ರತಿವರ್ಷ ನಡೆಯದು. ಕಾರವಾರದಲ್ಲಿ ನೌಕಾನೆಲೆ ಆಸ್ಪತ್ರೆಯಿದ್ದರೂ ಅದು ಜನಸಾಮಾನ್ಯರ ಕೈಗೆಟುಕದ ಗಗನಕುಸುಮದಂತಾಗಿದೆ. ಈ "ಫೆಸಿಬಿಲಿಟಿ" ನೋಡಿದರೆ ಮೆಡಿಕಲ್ ಕಾಲೇಜು ಕಾರವಾರದಲ್ಲಿ ಸ್ಥಾಪಿಸುವುದು ನ್ಯಾಯ ಮತ್ತು ಜನಪರ ನಿರ್ಧಾರವಾಗುತ್ತದೆ. ಕಾರವಾರಕ್ಕೆ ವೈದ್ಯಕೀಯ ಕಾಲೇಜು ಬಂದರೆ ಬರೀ ಕರಾವಳಿಗಷ್ಟೇ ಅಲ್ಲ, ಮಲೆನಾಡಿನ ಜೋಯಿಡಾ, ಯಲ್ಲಾಪುರದವರಿಗೂ ಅನುಕೂಲ ಆಗಲಿದೆ.

ಇನ್ನಾದರೂ ಕಾಗೇರಿ ಘಟ್ಟದ ಮೇಲಿನ-ಘಟ್ಟದ ಕೆಳಗಿನ ಭಾಗವೆಂದು ಒಡೆದಾಳುವ ಬ್ರಿಟಿಷ್ ಪಾಲಿಸಿ ಬಿಡಬೇಕು. ತಾಕತ್ತಿದ್ದರೆ ಶಿರಸಿಯನ್ನು ಜಿಲ್ಲೆಯಾಗಿಸಬೇಕೇ ಹೊರತು ಕರಾವಳಿಗೆ ಬಂದ ಸೌಲಭ್ಯ-ಸವಲತ್ತು ಕಸಿದುಕೊಂಡು ಹೋಗಿ "ಬಳಗ"ಕ್ಕೆ ಭಾಗ್ಯ ಒದಗಿಸಬಾರದು! ಈಗಾಗಲೇ ಕಾಗೇರಿ ತನ್ನ ಚೆಡ್ಡಿ ಕೆಡರಿನ ಮಂತ್ರಿ ರಾಮದಾಸ್‌ಗೆ ರಹಸ್ಯವಾಗಿ ಸಂಧಿಸಿ ಕಾರವಾರದ ಮೆಡಿಕಲ್ ಕಾಲೇಜು ಶಿರಸಿಗೆ ವರ್ಗಾಯಿಸಲು ಕಿವಿಯೂದಿಯೂ ಆಗಿದೆ. ಇದರಿಂದ ಕೆರಳಿದ ಕರಾವಳಿಯ ಜನ ಬೀದಿಗಿಳಿದು ಕಾಗೇರಿಗೆ ಬುದ್ಧಿ ಕಲಿಸಲು ರೆಡಿಯಾಗುತ್ತಿದ್ದಾರೆ. ಈ ಸಂಘರ್ಷದಲ್ಲಿ ಜಿಲ್ಲೆ ಮೆಡಿಕಲ್ ಕಾಲೇಜಿನಿಂದ ವಂಚಿತವಾಗುವ ಅನಾಹುತಕಾರಿ ಲಕ್ಷಣ ಗೋಚರಿಸ ಲಾರಂಭಿಸಿದೆ. ಜಿಲ್ಲೆಯ ಮೆಡಿಕಲ್ ಕಾಲೇಜ್ ಪ್ರಸ್ತಾವನೆ ಪೆಂಡಿಂಗ್ ಇಡಲು ಚೆಡ್ಡಿ ಸರ್ಕಾರ ಚಿಂತನೆ ನಡೆಸಿದೆ. ಇದು ಕಾಗೇರಿಯ ಕಂತ್ರಿ ಕಸರತ್ತು. ಮಂತ್ರಿ ಅಸ್ನೋಟಿಕರ್‌ನೂ ಕಾರವಾರಕ್ಕೆ ಮೆಡಿಕಲ್ ಕಾಲೇಜ್ ಬೇಕೆಂದು ತೊಡೆತಟ್ಟುತ್ತಿದ್ದಾನೆ.

ಘಟ್ಟದ ಮೇಲಿನವರು ಮತ್ತು ಕೆಳಗಿನವರು ಮೆಡಿಕಲ್ ಕಾಲೇಜಿಗಾಗಿ ಬೇಡಿಕೆ ಮಂಡಿಸುತ್ತಿದ್ದಾರೆ. ಒಟ್ಟಿನಲ್ಲಿ ಕಂತ್ರಿ ಕಾಗೇರಿಯಿಂದ ಜಿಲ್ಲೆಯ ಸಾಮರಸ್ಯ ಕೆಡುವ ಅಪಾಯ ಎದುರಾಗಿದೆ. ಇನ್ನಾದರೂ ಕಾಗೇರಿಗೆ ಸಿಎಂ ಶೆಟ್ಟರ್ ಕಿವಿಹಿಂಡಿ ಬುದ್ಧಿ ಹೇಳಿಯಾರೆ? ಇಲ್ಲ ಜನರೇ ಜುಟ್ಟು ಹಿಡಿಯಬೇಕಾದೀತಾ?

● ನಹುಷ

# ಪಶುವೈದ್ಯರ ರಾಜೀನಾಮೆ: ಗೋವು ರಕ್ಷಕರನ್ನು ಸರ್ಕಾರ ರಕ್ಷಿಸಲಿ

ರಾಜೀನಾಮೆ ಅನ್ನುವುದು ಕರ್ನಾಟಕದ ಮಟ್ಟಿಗೆ ಮಾನ್ಯ ಸಂಗತಿ. ದಿನಬೆಳಗಾದರೆ ಯಾರಾದರೂ ಒಬ್ಬ ಚಿವ, ಅಧಿಕಾರಿ, ಅಧ್ಯಕ್ಷ, ರಾಜೀನಾಮೆಯ ಕ್ಯಾತೆ ೆವಿರುತ್ತಾನೆ. ಆದರೆ ನೂರಾರು ಜನ ಸಾಮೂಹಿಕವಾಗಿ ಜೀನಾಮೆ ಸಲ್ಲಿಸಿರುವ ಸಂಗತಿ ಸ್ವಲ್ಪ ಭಿನ್ನವಾಗಿದೆ. ದು ಯಾವುದೇ ಪಕ್ಷ ಅಥವಾ ಮಂತ್ರಿ, ಮಂತ್ರಿಯ ಂಬಾಲಕರ ವಿಷಯವಲ್ಲ, 1,700 ಪಶುವೈದ್ಯರು ೀಡಿರುವ ಸಾಮೂಹಿಕ ರಾಜೀನಾಮೆಯ ಷಯ.



ಎತ್ತು, ಎಮ್ಮೆ, ಕುರಿ, ಕೋಳಿ, ಮೇಕೆ ುತ್ತು ಗೋವುಗಳನ್ನು ಸಂರಕ್ಷಿಸಬೇಕಾದ ಶುವೈದ್ಯರೇ ಸ್ವಘೋಷಿತ ಗೋಸಂರಕ್ಷಕರ ರ್ಕಾರಕ್ಕೆ, ರಾಜೀನಾಮೆ ಪತ್ರ ಾಕಿರುವುದು ಸರ್ಕಾರದ ಕಾರ್ಯ ಕ್ಷತೆಗೆ ಸಾಕ್ಷಿಯಾಗಿದೆ. ಸಮಾಜದ ಸ್ವಾಸ್ಥ್ಯ ಾಪಾಡಿಕೊಳ್ಳಲು ಮಾನವ ವೈದ್ಯರಷ್ಟೇ ುಖ್ಯವಾಗಿ ಪಶುವೈದ್ಯರೂ ಬೇಕು ನ್ನುವುದನ್ನು ಮನಗಾಣದ ಸರ್ಕಾರದ್ದು ೀಗ ಶೋಚನೀಯ ಸ್ಥಿತಿ.

ಸುಮಾರು ಮೂವತ್ತು ವರ್ಷಗಳಿಂದಲೂ ಒಳಗೇ ುರಿಯುತ್ತಿದ್ದ ಅಸಹನೆ ಈಗ ಸ್ಫೋಟಗೊಂಡಿದೆ. ನಾಡಿನಲ್ಲಿ ರಗಾಲ, ಅನಾವೃಷ್ಟಿ ತಲೆದೋರಿರುವ ಈ ಸಂದರ್ಭ ಶುವೈದ್ಯರು ಸರ್ಕಾರದ ಮುಸುಡಿಗೆ ಎಂಟಾಣೆಯ ಗದವೊಂದರಿಂದ ಹೀಗೆ ಬಾರಿಸಿರುವುದು ಪಶು ಸಚಿವ ಳಮಗಿಯವರಿಗೆ ಬೆವರಿಳಿಸಿದೆ. ಪಶುಪಾಲನೆ ಹಾಗೂ ಶುವೈದ್ಯಕೀಯ ಸೇವಾ ಇಲಾಖೆಯ ಈ ಸಿಬ್ಬಂದಿಗಳ ೇಡಿಕೆಗಳೇನೇ ಇರಲಿ, ಸರ್ಕಾರ ತುರ್ತಾಗಿ ಸ್ಪಂದಿಸದೆ ರುವುದು ಇಲ್ಲಿ ಬಹುಮುಖ್ಯ ಪ್ರಶ್ನೆಯಾಗಿದೆ.

ಇದು ಪಶುವೈದ್ಯರು ಹಾಗೂ ಇಲಾಖೆಗಳಷ್ಟೇ ೀಮಿತವಾದ ಸಂಗತಿಯಲ್ಲ. ಈ ಇಲಾಖೆ ಹಾಗೂ ಶುವೈದ್ಯರೊಂದಿಗೆ ಇಡಿಯಾಗಿ ಬೆಸೆದುಕೊಂಡಿರುವ ್ರಾಮೀಣ ಬದುಕಿನ, ಕಸುಬು ಹಾಗೂ ಕಸುವನ್ನು ರ್ಥಮಾಡಿಕೊಳ್ಳಬೇಕಾದ ಸಂಕೀರ್ಣ ಸಂಗತಿಯೂ ಆಗಿದೆ. ಡಳಿತಾರೂಢರಿಗೆ ಗ್ರಾಮೀಣ ಬದುಕಿನ ಕನಿಷ್ಠ ತಿಳಿವಳಿಕೆಯೂ ಇಲ್ಲದೆ ಹೋಗಿರುವುದು ಕರ್ನಾಟಕದ ಸದ್ಯದ ಬಹುಮುಖ್ಯ ದುರಂತಗಳಲ್ಲೊಂದು. ಇಲ್ಲಿ ಪಶುವೈದ್ಯರ ಬೇಡಿಕೆ ಸಂಬಳ ಸಾರಿಗೆಗೆ ಸಂಬಂಧಿಸಿದ್ದಷ್ಟೇ ಅಲ್ಲ, ಇಲಾಖೆಯಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅಗತ್ಯವಾಗಿರುವ ಮೂಲಸೌಕರ್ಯಗಳ ಬೇಡಿಕೆಯೂ ಆಗಿದೆ.

ಹಳ್ಳಿಗಳಲ್ಲಿ ಸಾಕಷ್ಟು ಮೇವಿಲ್ಲದೆ, ಶುದ್ಧ ನೀರಿಲ್ಲದೆ ಜಾನುವಾರುಗಳು ಅನೇಕ ರೋಗಗಳಿಗೆ ತುತ್ತಾಗುತ್ತಿವೆ. ರೈತರು ದಿವಾಳಿಯಾಗಿದ್ದಾರೆ. ಊರು ಬಿಡುವ ಸನ್ನಿವೇಶ ಬಂದರೂ ಸಹಾ ತಮ್ಮ ಜಾನುವಾರುಗಳನ್ನು ನೆಚ್ಚಿಕೊಂಡು ಕಾಲ ದೂಡುತ್ತಿದ್ದಾರೆ. ಹಾಲಿನ ಉತ್ಪಾದನೆಯಿಂದ ಲಕ್ಷಾಂತರ ಕುಟುಂಬಗಳು ಗಂಜಿ ಕುಡಿಯುತ್ತಿವೆ, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿವೆ. ಹೀಗಿದ್ದಾಗ ಬರದ ಬರೆ ಒಂದು ಕಡೆ ಬಿದ್ದರೆ, ಬೆಲೆಯೇರಿಕೆಯ ಬಾಸುಂಡೆ ಮತ್ತೊಂದು ಕಡೆ ಬೀಳುತ್ತಿದೆ. ಬಡವ, ಕೃಷಿಕ ಈ ನಾಡಿನಲ್ಲಿ ಬದುಕುವುದಾದರೂ ಹೇಗೆ? ಹಲವು ವರ್ಷಗಳಿಂದ ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯ ಬೇಡಿಕೆಗಳನ್ನು ಉದಾಸೀನತೆಯಿಂದ ಕಾಣುತ್ತಾ ಬಂದಿರುವ ಸರ್ಕಾರ, ಈಗಲೂ ಅದೇ ಧೋರಣೆ ಹೊಂದಿದೆ.

**2011-12**ನೇ ಸಾಲಿನಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ಮಂಡಿಸಿದ್ದ ಕೃಷಿ ಬಜೆಟ್‌ನಲ್ಲಿ ಪಶುಪಾಲನೆ ಹಾಗೂ ಪಶುವೈದ್ಯಕೀಯ ಇಲಾಖೆಗಳ ಪುನರ‍್ರಚನೆಗೆ ಒತ್ತು ನೀಡಿದ್ದರು. ಅದರಂತೆ, ಅಗತ್ಯ ಮಾಹಿತಿಯನ್ನು ಪಡೆಯಲು ಏಳೆಂಟು ಜನ ಐಎಎಸ್ ಅಧಿಕಾರಿಗಳ ಸಮಿತಿಯನ್ನು ನೇಮಿಸಿದ್ದರು. ಈ ಹೈ ಪವರ್ ಕಮಿಟಿಗೆ ಆಗಿನ ಅಡಿಷನಲ್ ಚೀಫ್ ಅಂಡ್ ಡೆವಲಪ್‌ಮೆಂಟ್ ಕಮಿಷನರ್ ಶ್ರೀಮತಿ ಮೀರಾ ಸಕ್ಸೇನಾರವರು ಛೇರ್ಮನ್ ಆಗಿದ್ದರು. ಈ ಸಮಿತಿಯನ್ನು ಶ್ರೀಮತಿ ಮೀರಾ ಸಕ್ಸೇನಾ ಸಮಿತಿ ಎಂತಲೇ ಗುರ್ತಿಸಲಾಗುತ್ತದೆ. ಈ ಸಮಿತಿ ಇಲಾಖೆಗೆ ಸಂಬಂಧಿಸಿದಂತೆ ಸಮಗ್ರ ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿ ವರ್ಷ ಕಳೆಯುತ್ತಾ ಬಂದಿದೆ. ವರದಿಯಲ್ಲಿ ಕೆಲವು ಬಹುಮುಖ್ಯ ಶಿಫಾರಸ್ಸುಗಳನ್ನು ಸಮಿತಿ ಪ್ರಬಲವಾಗಿ ಪ್ರಸ್ತಾಪಿಸಿದೆ. ಸಮಿತಿಯ ಶಿಫಾರಸ್ಸುಗಳಲ್ಲಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ತಜ್ಞ ವೈದ್ಯರನ್ನೊಳಗೊಂಡ ಸುಸಜ್ಜಿತವಾದ ಒಂದು ಪಾಲಿಕ್ಲಿನಿಕ್ ಸ್ಥಾಪನೆ ಹಾಗೂ ಸೂಕ್ತ ವಾಹನ ಸೌಲಭ್ಯದ ವ್ಯವಸ್ಥೆ, ಹೋಬಳಿ ಮಟ್ಟದ ಪಶುಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಿ ಪಶು ಆಸ್ಪತ್ರೆಗಳನ್ನಾಗಿ ಮಾಡುವುದು, ಇಲಾಖೆಯ ಸಹಾಯಕ ನಿರ್ದೇಶಕರುಗಳಿಗಿರುವ ಇತರೇ ಕೆಲಸಗಳ ಹೊರೆಯನ್ನು ತಗ್ಗಿಸಿ, ಇಲಾಖೆಯ ಕಾರ್ಯ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು ಅನುವು ಮಾಡಿಕೊಡುವುದು ಮತ್ತು ಮಾನವ ವೈದ್ಯರಿಗೆ ಇರುವಂತೆ ಸೇವಾ ಅವಧಿಯ ಮಿತಿ, ವೇತನದಲ್ಲಿ ಹೆಚ್ಚಳ, ಭತ್ಯೆ, ಗ್ರಾಮೀಣ ಭತ್ಯೆ ಹಾಗೂ ಇತರೆ ಸೌಕರ್ಯಗಳನ್ನು ಪಶುವೈದ್ಯರಿಗೂ ಒದಗಿಸಬೇಕಾಗಿರುವ ಅಗತ್ಯ ಶಿಫಾರಸ್ಸುಗಳನ್ನು ಮೀರಾ ಸಕ್ಸೇನಾ ಸಮಿತಿ ಸರ್ಕಾರಕ್ಕೆ ತನ್ನ ವರದಿಯಲ್ಲಿ ಸಲ್ಲಿಸಿದೆ.

ಮೀರಾ ಸಕ್ಸೇನಾ ಸಮಿತಿಯ ವರದಿ **2011**ರಲ್ಲೇ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಸರ್ಕಾರ ಅದರ ಅನುಷ್ಠಾನಕ್ಕೆ ಮುಂದಾಗದಿರುವುದು ಈಗಿನ ಈ ಸಾಮೂಹಿಕ ರಾಜೀನಾಮೆಗೆ ಕಾರಣವಾಗಿದೆ. ಸರ್ಕಾರ ತನ್ನ ನಿಲುವನ್ನು ಇನ್ನೂ ಸ್ಪಷ್ಟಪಡಿಸಿಲ್ಲ.

ಕರ್ನಾಟಕ ಪಶುವೈದ್ಯಕೀಯ ಸಂಘ ಈ ತೀರ್ಮಾನ ಏಕಾಏಕಿ ತೆಗೆದುಕೊಂಡದ್ದೇನಲ್ಲ. ಈ ಮೊದಲೇ ಸಮಿತಿಯ ಶಿಫಾರಸ್ಸುಗಳನ್ನು ಶೀಘ್ರದಲ್ಲಿ ಅನುಷ್ಠಾನಗೊಳಿಸಬೇಕು ಎಂದು ಕೋರಿ ಸರ್ಕಾರಕ್ಕೆ ಹಲವು ಬಾರಿ ಒತ್ತಾಯಿಸಲಾಗಿದೆ. **2012**ರ ಆಗಸ್ಟ್ **27**ರಂದು ವಿಸ್ತೃತವಾದ ಪತ್ರವೊಂದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಇಲಾಖೆಯ ಸಚಿವರಿಗೆ ರವಾನಿಸಲಾಗಿದೆ. ಯಾರೂ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ. ಕಡೆಗೆ, ಪಶುವೈದ್ಯಕೀಯ ಸಂಘವು ಸೆಪ್ಟೆಂಬರ್ **11**ರಿಂದ ಸರ್ಕಾರಕ್ಕೆ ತಮ್ಮ ಅಸಹಕಾರವನ್ನು ಘೋಷಿಸಿತ್ತು. ಇದರಂತೆ, ಪಶುವೈದ್ಯರು ಜಾನುವಾರುಗಳಿಗೆ ಚಿಕಿತ್ಸೆ ನೀಡುವುದೊಂದನ್ನು ಬಿಟ್ಟು ಸರ್ಕಾರದ ಇತರೆ ಯಾವುದೇ ಕಾರ್ಯಕ್ರಮ/ ಕೆಲಸಗಳನ್ನು ಮಾಡದಿರುವ ಮೂಲಕ ತಮ್ಮ ಅಸಹಕಾರವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೆ ಕಿವಿ ಮುಚ್ಚು ಬಾಯಿ ಇದ್ದಿದ್ದರೆ. ಸಮಸ್ಯೆ ಆಗಲೇ ಬಗೆಹರಿಯುತ್ತಿತ್ತು, ಆದರೆ ಸರ್ಕಾರ ಈಗ ಬಡಿಕಲು ಮೂಗಿಟ್ಟಂತೆ ಬಿಗುತ್ತಿರುವುದು ಎಲ್ಲರಿಗೂ ಗೊತ್ತಿಲ್ಲವೇ! ಇನ್ನು ಸುಮ್ಮನಿದ್ದರೆ ಉಳಿಯೋಗವಿಲ್ಲ ಎಂದು ಪಶುವೈದ್ಯರು ಸಂಘದ ತೀರ್ಮಾನದಂತೆ ಸಾಮೂಹಿಕ ರಾಜೀನಾಮೆ ನೀಡಿದ್ದಾರೆ. ಸೆಪ್ಟೆಂಬರ್



**22**ರಂದು ರಾಜ್ಯದ **1700** ಮಂದಿ ಪಶುವೈದ್ಯರು ಸರ್ಕಾರಕ್ಕೆ ರಾಜೀನಾಮೆ ಸಲ್ಲಿಸಿ ಸೇವೆಯಿಂದ ವಿಮುಕ್ತಿಗೊಳಿಸುವಂತೆ ಒತ್ತಾಯಿಸಿದ್ದಾರೆ. ಸರ್ಕಾರ ಈಗ ತಿಣುಕಾಡುತ್ತಿದೆ. ಸೆಪ್ಟೆಂಬರ್ **15**ರಿಂದ ಆರಂಭಗೊಳ್ಳಬೇಕಿದ್ದ ಜಾನುವಾರು ಗಣತಿ ಅಕ್ಟೋಬರ್ **15**ರೊಳಗೆ ಮುಗಿಯಬೇಕಿತ್ತು. ಆದರೆ ಪಶುವೈದ್ಯರು ಈಗ ನೀಡಿರುವ ರಾಜೀನಾಮೆಯಿಂದ ಎಲ್ಲವೂ ವಿಳಂಬವಾಗಲಿದೆ. ಗೋಸಂರಕ್ಷಕರ ಸರ್ಕಾರ ಗೋವುಗಳಿಗೆ ಚಿಕಿತ್ಸೆ ನೀಡಿ ಅವನ್ನು ನಿಜಾರ್ಥದಲ್ಲಿ ಸಂರಕ್ಷಿಸುವ ಪಶುವೈದ್ಯರೊಂದಿಗೆ ಹೀಗೆ ಚೆಲ್ಲಾಟವಾಡಬಾರದು. ಬರ ಬಿದ್ದು ಬಡಕಲಾಗಿರುವ ಜಾನುವಾರುಗಳು ಸಾಯುವ ಮುನ್ನ ನಿಷ್ಕ್ರಿಯವಾಗಿರುವ ಸರ್ಕಾರ ಎಚ್ಚೆತ್ತುಕೊಳ್ಳಲಿ..! ಪಶುಪಾಲನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯ ಅಗತ್ಯಗಳಿಗೆ ಸ್ಪಂದಿಸಬೇಕಾದದ್ದು ಸರ್ಕಾರದ ಜವಾಬ್ದಾರಿಯಲ್ಲವೆ?

● ನಾಸೆರ್ ಹುಸೇನ್

## ▸2 ಡೊನಾಲ್ಡ್ ಆ್ಯಂಡರ್ಸನ್ ಜಾಡು ಹುಡುಕುತ್ತಾ...!

ಡೆಯಿತು. ಇದರಿಂದಾಗಿ ಕಾಡುಪ್ರಾಣಿಗಳ ಸಹಜ ಬದುಕಿನಲ್ಲಿ ಅನೇಕ ಏರುಪೇರುಗಳಾಗಿ ಮನುಷ್ಯ-ಕಾಡುಪ್ರಾಣಿಗಳ ಹೊಸ ರೀತಿಯ ಸಂಘರ್ಷಕ್ಕೆ ಈ ಕಾಲಘಟ್ಟ ಸಾಕ್ಷಿಯಾಗಿತ್ತು. ಇದು ಕೇವಲ ಕರ್ನಾಟಕ ಅಥವಾ ಇಂಡಿಯಾದ ವಿದ್ಯಮಾನ ಮಾತ್ರವಲ್ಲ, ಬರ್ಮಾ, ಥಾಯ್‌ಲ್ಯಾಂಡ್, ಚೀನಾ, ಪಾಕಿಸ್ತಾನ, ರಶಿಯಾ, ಸೈಬೀರಿಯಾ, ಆಫ್ರಿಕಾದ ಅನೇಕ ದೇಶಗಳಲ್ಲಿ ಸಿಂಹ, ಹುಲಿ, ಚಿರತೆಗಳು ನರಭಕ್ಷಕಗಳಾಗಿ ಬದಲಾದ ಸಾವಿರಾರು ಕಥನಗಳಿವೆ. ಅಂತಲ್ಲೆಲ್ಲಾ ನರಭಕ್ಷಕಗಳಾಗಿ ರೂಪಾಂತರಗೊಂಡ ಪ್ರಾಣಿಗಳನ್ನು ಬೇಟೆಯಾಡಿ ಕೊಲ್ಲುವ ಸಾಹಸಿಗಳೂ ಹುಟ್ಟಿಕೊಂಡರು.

ಇಂಡಿಯಾದಲ್ಲಿ ಬರ್ಟನ್, ಪೊವೆಲ್, ಜಿಮ್ ಕಾರ್ಬೆಟ್ ಈ ಸಾಲಿಗೆ ಸೇರುತ್ತಾರೆ. ಕೆನೆತ್ ಆ್ಯಂಡರ್ಸನ್ ಅವರಲ್ಲೊಬ್ಬ.


ಕೆನೆತ್ ಉಪದ್ರವಕಾರಿಯಲ್ಲದಿದ್ದ ಹುಲಿಗಳನ್ನು ಕೊಲ್ಲುತ್ತಿರಲಿಲ್ಲ ಎಂಬುದು ಕೊಂಚ ನಿಜವಾದರೂ ಹುಲಿಗಳು ನರಭಕ್ಷಕಗಳಾಗಿ ಬದಲಾದದ್ದು ಕೇವಲ ಅರಣ್ಯ ನಾಶದಿಂದಲೇ ಎಂಬುದನ್ನು ಖಚಿತವಾಗಿ ಪ್ರತಿಪಾದಿಸಬಹುದಾ ಎಂಬ ಬಗ್ಗೆ ಈಗ ನನಗೇ ಅನುಮಾನಗಳು ಬರುತ್ತಿವೆ.

ಫ್ರಾನ್ಸಿಸ್ ಬುಖಾನನ್‌ನ ಬರಹಗಳಲ್ಲಿ ಇದಕ್ಕೆ ಒಂದೆರಡು ಪುರಾವೆಗಳಿವೆ. **1799**ರಲ್ಲಿ ನಡೆದ **4**ನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಬ್ರಿಟಿಷರು ಟಿಪ್ಪುವನ್ನು ಕೊಂದ ನಂತರ ಇಡೀ ಮೈಸೂರು ರಾಜ್ಯದ ಆರ್ಥಿಕತೆ, ಕೃಷಿ, ಕೈಗಾರಿಕೆ, ಸಾರಿಗೆ, ವ್ಯಾಪಾರ ತಂತ್ರಜ್ಞಾನಗಳ ಬಗ್ಗೆ ಅಧ್ಯಯನ ನಡೆಸಲು ಡಾ. ಫ್ರಾನ್ಸಿಸ್ ಬುಖಾನನನ್ನು ನೇಮಿಸುತ್ತಾರೆ. ತನ್ನ ಅಧ್ಯಯನದ ವಿವರಗಳನ್ನು **"Journey from Madras through the countries of Mysore...."** ಎಂಬ ಪುಸ್ತಕದ ಮೂರು ಸಂಪುಟಗಳಲ್ಲಿ ಬುಖಾನನ್ ದಾಖಲಿಸಿದ್ದಾನೆ. ಆದರ 3ನೇ ಸಂಪುಟದಲ್ಲಿ (ಪುಟ 427) 1800 ರ ಜೂನ್ 10ನೇ ತಾರೀಖು ತಾನು ಕಾನಕಾನ್‌ಹಳ್ಳಿಗೆ (ಈಗಿನ ಕನಕಪುರ) ಬಂದಾಗ ಕಂಡದ್ದನ್ನು ಅವನು ಹೀಗೆ ಬಣ್ಣಿಸುತ್ತಾನೆ.

**"The beasts of prey have increased so much that, during the two last years of the sulthan's government, eighty of the inhabitants of cancan hully were carried away by tigers. From within the walls of the fort."**

ಇದು ಆಗಿನ ದುರ್ಗಮ ಕಾಡುಗಳ ಅಗಣಿತ ಸಂಖ್ಯೆಯಲ್ಲಿದ್ದಿರಬಹುದಾದ ಹುಲಿಗಳ ಚಿತ್ರಣವನ್ನೂ, ಅದೇ ರೀತಿ 18ನೇ ಶತಮಾನದಲ್ಲೇ ಅಸಂಖ್ಯ ಆನೆ, ಕಾಡೆಮ್ಮೆ, ಚಿರತೆಗಳ ನರಭಕ್ಷಕ ಹುಲಿಗಳ ತಾಣವಾಗಿದ್ದವೆಂಬುದನ್ನೂ ಹೇಳುತ್ತಿವೆ.

ಅಷ್ಟೆಲ್ಲಾ ಹಿಂದೆ ಯಾಕೆ, ತೀರಾ ಕಳೆದ ತಿಂಗಳಷ್ಟೆ ನಾವೊಂದಿಷ್ಟು ಗೆಳೆಯರು ಬಿಳಿದಾಳೆಯಿಂದ ವಾಪಾಸ್ ಬರುತ್ತಿದ್ದಾಗ ನಡುವೆ ಕಾಡಿನ ಹಾದಿಯಲ್ಲಿ ರಸ್ತೆ ಪಕ್ಕ ಕೇವಲ ಮೂವತ್ತು ಅಡಿ ದೂರದಲ್ಲೇ ಮೂರು ಕಾಡಾನೆಗಳನ್ನು ನೋಡಿದೆವು. ನಮ್ಮ ಗಾಡಿಯ ಶಬ್ದ ಕಿರಿಕಿರಿ ಮಾಡುತ್ತೆಂಬಂತೆ ಹಾಗೂ ಅವುಗಳು ಅಲ್ಲಿದ್ದಾವೆಂದು ನಮಗೆ ಹೇಳುವಂತೆ ಆನೆಯೊಂದು ವಾರ್ನಿಂಗ್ ನೀಡುವ ರೀತಿಯಲ್ಲಿ ಸಣ್ಣಗೆ ಹರಿತವಾಗಿ ಘೀಳಿಟ್ಟಿತು. ಮರುಕ್ಷಣದಲ್ಲೇ ಅದನ್ನು ಮೀರಿಸುವ ಕೂಗೊಂದು ಹತ್ತಿರದಲ್ಲೇ ಕೇಳಿಸಿತು. ಕಾರಿನಲ್ಲಿದ್ದ ನಮ್ಮೆಲ್ಲರ ಚೀತ್ಕಾರ ಅದಾಗಿತ್ತು.



ನಮ್ಮ ತಂಡದೊಂದಿಗಿದ್ದು ಫೋಟೋ ತೆಗೆದ ಚಂದನ್

ಡೊನಾಲ್ಡ್‌ನ ಕಾಡಿನ ಅನುಭವಗಳನ್ನು ಕೇಳುತ್ತಾ, ನಡುನಡುವೆ ನಮ್ಮ ಸಣ್ಣಪುಟ್ಟ ಕಾಡಿನ ಅನುಭವಗಳ ಬಗ್ಗೆ ಹೇಳುತ್ತಾ ಮಾತು ಸಾಗುತ್ತಿದ್ದಾಗ "ನಾನೊಂದು ಸಿನಿಮಾದಲ್ಲಿ ಆಕ್ಟ್ ಮಾಡಿದಿನಿ ಗೊತ್ತಾ?" ಅಂದರು. ಬೆರಗಾದ ನಾವು "ಯಾವ ಸಿನಿಮಾ!" ಎಂದೆವು.

**1958**ರಲ್ಲಿ ಬಂದ **'Harry Black and the Tiger'** ಎಂಬ ಹಾಲಿವುಡ್‌ನ ಸಿನಿಮಾ ಅದು. ಆ ಕಾಲದ ಪ್ರಖ್ಯಾತರಾದ ಸ್ಟುವರ್ಟ್ ಗ್ರ್ಯಾಂಗರ್, ಬಾರ್ಬರಾ ಬುಶ್ ನಟಿಸಿದ್ದ ಆ ಸಿನಿಮಾದಲ್ಲಿ ಡೋನಾಲ್ಡ್ ಯಾವ ಪಾತ್ರ ಮಾಡಿದ್ದರು?

ನಾವೀ ಪ್ರಶ್ನೆ ಕೇಳಿದ ಮರುಕ್ಷಣವೇ ಡೊನಾಲ್ಡ್‌ರ ಪುಟ್ಟ ಮನೆಯೆಲ್ಲಾ ಹಾರಿಹೋಗುವಂತೆ ನಾವೆಲ್ಲಾ ನಗಲು ಶುರು ಮಾಡಿದೆವು.

**"The hero was doing kissing scenes and I was asked to do risky scenes"** ಎಂದು ಡೊನಾಲ್ಡ್ ಹೇಳಿದ್ದೆ ನಗು ಸ್ಫೋಟಿಸಲು ಕಾರಣವಾಗಿತ್ತು.

ಆಮೇಲೆ "ಮಿ.ಡೊನಾಲ್ಡ್ ನಿಮ್ಮ ಬಾಲ್ಯದ ಬಗ್ಗೆ ಹೇಳಿ?" ಅಂದೆವು.


ನಸುನಕ್ಕ ಡೊನಾಲ್ಡ್ "ಇಡೀ ಮೈಸೂರು ದೇಶದಲ್ಲಿ ಆರನೇ ವಯಸ್ಸಿನಲ್ಲೇ ಪೊಲೀಸರ ಲಾಕಪ್ ಸೇರಿದ್ದ ಮೊದಲ ಹುಡುಗ ನಾನೇ ಇರಬೇಕು" ಅಂದರು. ಈತ ಮಹಾ ತುಂಟ ಪೋರನೇ ಆಗಿದ್ದಿರಬೇಕು ಅಂದುಕೊಳ್ಳುತ್ತಾ "ಜೈಲಿಗೆ ಹೋಗುವಂತಾ ತಪ್ಪು ನೀವೇನು ಮಾಡಿದಿರಿ?" ಎಂದು ಕೇಳಿದೆವು.

ಕತೆ ಮುಂದುವರೆಸಿದ ಡೊನಾಲ್ಡ್ "ನಾನು ಆರನೇ ವಯಸ್ಸಲ್ಲಿದ್ದಾಗಲೇ ಕೈಗೆ ಗನ್ ಸಿಕ್ಕಿತು. ಅದೊಂದು ದಿನ ನಮ್ಮ ಮನೆಯ ಕಾಂಪೌಂಡಿನೊಳಗೆ ಹೂವಿನ ಕುಂಡಗಳ ನಡುವೆ ನಾನು ಹುದುಗಿ ಕುಳಿತು ಪಾಟ್‌ಗಳ ಸಂಧಿಯಿಂದ ಗನ್ ತೂರಿಸಿ ಕಾಯುತ್ತಿದ್ದೆ. ಆಗ ಗೇಟ್ ತೆರೆದು ಶಾಲಾ ಬಾಲಕಿಯೊಬ್ಬಳು ಒಳಬಂದಳು. ಗುರಿ ಇಟ್ಟು ನಾನು ಟ್ರಿಗರ್ ಒತ್ತಿದೆ" ಅಂದರು.

ನಾವು ಕಂಗಾಲಾಗಿ "ಯಾರಾಕೆ?" ಅಂದೆವು.

"ನನ್ನ ಅಕ್ಕ ಮಾರ್ಗರೆಟ್."

(ಮುಂದುವರೆಯುವುದು)




ಡೊನಾಲ್ಡ್ ಮನೆಯ ಪ್ರತಿಮೂಲೆಯಲ್ಲೂ ಕಾಡುಪ್ರಾಣಿಗಳ ಫೋಟೋಗಳಿವೆ



ಹಾಲಿವುಡ್ ನಟಿ ಬಾರ್ಬರ ಜೊತೆ ಬಂಡೀಪುರದಲ್ಲಿ ನಡೆದ ಸಿನಿಮಾ ಶೂಟಿಂಗ್‌ನಲ್ಲಿ....




ಹ್ಯಾರಿ ಬ್ಲಾಕ್.... ಸಿನಿಮಾದ ಪೋಸ್ಟರ್



# ಹೊಸದುರ್ಗ ಗೂಳಿಹಟ್ಟಿ ಥೈಲಿಯ ಚಿದಂಬರ ರಹಸ್ಯ

ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದುರ್ಗ ವಿಧಾನಸಭಾ ಕ್ಷೇತ್ರ ಅಚ್ಚರಿ ಹುಟ್ಟುಹಾಕುವ ಕ್ಷೇತ್ರ. ನೂರು ಓಟಿರದ ಜೈನರ ಇಲ್ಕಲ್ ವಿಜಯ ಕುಮಾರ, ಸಾವಿರ ಓಟು ಇರುವ ಗೂಳಿಹಟ್ಟಿ ಶೇಖರ್ ತರಹದವರು ಪಕ್ಷೇತರರಾಗಿದ್ದರೂ ಗೆಲ್ಲಿಸುವ ಕ್ಷೇತ್ರವಿದು. ಹಾಗೆಯೇ ಮಾಜಿ ಮುಖ್ಯಮಂತ್ರಿ ದಿವಂಗತ ನಿಜಲಿಂಗಪ್ಪನವರನ್ನು ಮನೆಗಟ್ಟಿದ ಕ್ಷೇತ್ರವೂ ಇದೇ. ಈ ಎಲ್ಲ ಕಾರಣಗಳಿಂದಾಗಿ ಹೊಸದುರ್ಗದಲ್ಲಿ ವಿಧಾನಸಭಾ ಚುನಾವಣೆಯ ಮಟ್ಟಿಗೆ ಮತದಾರನ ಆಂತರಿಕ ನಿರ್ಧಾರವನ್ನು ನಿಖರವಾಗಿ ಹೇಳುವುದು ಕಡುಕಷ್ಟವಾಗುತ್ತದೆ.

ಹೊಸದುರ್ಗದಲ್ಲಿ ಲಿಂಗಾಯತರ ಮತಗಳೇ ನಿರ್ಣಾಯಕ ಪಾತ್ರ ವಹಿಸುತ್ತವೆ. ಈ ಕ್ಷೇತ್ರದಲ್ಲಿ ಕುಂಚಿಟಿಗರು, ಸಾಧು ಲಿಂಗಾಯತರು, ನೊಣಬರು, ಪಂಚಮಸಾಲಿಗರ ಮತಗಳೇ 40 ಸಾವಿರ ಇವೆ. ಕುರುಬರ 22 ಸಾವಿರ, ಮುಸ್ಲಿಮರ 15 ಸಾವಿರ, ದಲಿತರು, ನಾಯಕರು ಅಂತೆಲ್ಲ 30 ಸಾವಿರವಾದರೆ, ಬೋವಿಗಳು ಮೂರು ಸಾವಿರ ಜೈನರು ನೂರು ಮತಗಳೂ ಇಲ್ಲಿವೆ. ಹೊಸದುರ್ಗ ಪಟ್ಟಣದಲ್ಲಿ ಮಾತ್ರ ದೇವಾಂಗ ಜಾತಿಯ ಮತಗಳು ಕೊಂಚ ಮೇಲುಗೈ ಸಾಧಿಸುತ್ತವೆ.

## ಚಿದಂಬರ ರಹಸ್ಯ

ಹಾಲಿ ಶಾಸಕ ಮಾಜಿಮಂತ್ರಿ ಗೂಳಿಹಟ್ಟಿ ಶೇಖರ್ ಹೊಸದುರ್ಗ ವಿಧಾನಸಭೆಯಿಂದ ಸ್ಪರ್ಧಿಸಿದ್ದೇ ಅಚ್ಚರಿ ನೀಡಿತ್ತು. ಗೂಳಿಹಟ್ಟಿ ಬೋವಿ ಕಾಲೋನಿಯಲ್ಲಿದ್ದದ್ದೇ ಹತ್ತು ವರ್ಷಗಳ ಕಾಲ. ಆನಂತರ ಚಿತ್ರದುರ್ಗದಲ್ಲಿ ವಿದ್ಯಾಭ್ಯಾಸ, ಬೆಂಗಳೂರಿನಲ್ಲಿ ಕೆಲಸ ಎಂದೆಲ್ಲ ಹೊರಟವನು ಹೊಸದುರ್ಗದ ಕಡೆ ಬಂದದ್ದೇ ಇಲ್ಲ. ಹೊಸದುರ್ಗವಿರಲಿ ಶೇಖರನ ಜನ್ಮಸ್ಥಳ ಗೂಳಿಹಟ್ಟಿಯೇ ಆತನನ್ನು ಮರೆತುಬಿಟ್ಟಿತ್ತು. 2005ರಲ್ಲಿ ಈತನ ತಂದೆ ದಿವಾಕರಪ್ಪ ತಾಲ್ಲೂಕು ಪಂಚಾಯತಿಗೆ ಜೆ.ಡಿ.ಎಸ್‌ನಿಂದ ಸ್ಪರ್ಧಿಸಿದಾಗಲೇ ಈ ಶೇಖರನ ಎಂಟ್ರಿಯಾದದ್ದು. ತಂದೆಯನ್ನು ಗೆಲ್ಲಿಸಿ ಪಂಚಾಯತಿ ಅಧ್ಯಕ್ಷನನ್ನಾಗಿಸಿದ್ದೇ ಈತನ ಮೊದಲ ಸಾಧನೆ ಮತ್ತು ಪವಾಡ.

ಅಜಮಾಸು 25 ವರ್ಷಗಳಿಂದ ಬೆಂಗಳೂರು ಸೇರಿಕೊಂಡಿದ್ದ ಶೇಖರ 2005ರಲ್ಲಿ ಹೊಸದುರ್ಗ ರಾಜಕಾರಣದಲ್ಲಿ ಹವಾ ಎಬ್ಬಿಸಿದ. ಆದರೆ ಅದಕ್ಕೆಂದು ಆತನಿಗೆ ಹಣ ಬಂದಿದ್ದು ಎಲ್ಲಿಂದ ಎಂಬುದು ಚಿದಂಬರ ರಹಸ್ಯವಾಗಿತ್ತು. ಆತ ಗಣಿ-ಗ್ರಾನೈಟ್ ದಂಧೆಯಿಂದ ರೊಕ್ಕ ಮಾಡಿದ್ದಾನೆಂಬ ಮಾತು ಕೇಳಿಬಂದಿದ್ದರೂ ಆತನ ಹೆಸರು ಮಾತ್ರ ಎಂದೂ ಈ ವಲಯಗಳಲ್ಲಿ ಕೇಳಿಬಂದಿರಲಿಲ್ಲ. ಅಷ್ಟೇ ಅಲ್ಲ, ಹೊಸದುರ್ಗ ಕ್ಷೇತ್ರದಲ್ಲಿ ಸರಕಾರದ ಗ್ರಾಂಟು ಬರುವ ಮೊದಲೇ ತನ್ನ ಗಂಟಿನಿಂದಲೇ ಕಾಮಗಾರಿ ಮಾಡಿ ಮುಗಿಸಿದ್ದನೆಂದರೆ ಸಾಮಾನ್ಯ ಮಾತಲ್ಲ.

## 2008ರ ಚುನಾವಣೆ

2008ರ ವಿಧಾನಸಭಾ ಚುನಾವಣೆಯಲ್ಲಿ ಶೇಖರನ ಸ್ಪರ್ಧೆಯೇ ವಿಚಿತ್ರ ಸಂಚಲನ ಹುಟ್ಟುಹಾಕಿತ್ತು. ಹೊಸದುರ್ಗಕ್ಕೆ ಕೇವಲ ಎರಡು ವರ್ಷಗಳ ಹಿಂದಷ್ಟೆ ಪ್ರವೇಶ ನೀಡಿದ ಶೇಖರ ಕ್ಷೇತ್ರದ ಮುನ್ನೂರು ಚಿಲ್ಲರೆ ಹಳ್ಳಿಗಳಲ್ಲಿ ತನ್ನ ದುಡ್ಡಿನ ಖರಾಮತ್ತು ಬೀರಿದ. ಬಡವರ ಮನೆಯ ಗೃಹಪ್ರವೇಶ, ನಾಮಕರಣ, ತಿಥಿ-ಮತಿ, ಮದುವೆ ಅಂತೆಲ್ಲ ಧಾರಾಳವಾಗಿ ಕೈ ಬಿಚ್ಚಿದ. ಅಪಘಾತಕ್ಕೆ ಈಡಾದವರ ಕುಟುಂಬಕ್ಕೆ ತನ್ನ ಕೈಯಿಂದ ಐವತ್ತು ಸಾವಿರ ರೂಗಳನ್ನು ಕೊಡುತ್ತಿದ್ದ. ಇದನ್ನೆಲ್ಲ ಕಂಡು ಮತದಾರ ರೋಮಾಂಚನಗೊಳ್ಳದಿರಲು ಸಾಧ್ಯವೇ? ಶೇಖರನ ಆರ್ಭಟದೆದುರು ಕಾಂಗ್ರೆಸಿನ ಗೋವಿಂದಪ್ಪ ಪತರುಗುಟ್ಟಿಹೋದರು.

ಗೋವಿಂದಪ್ಪ ಎರಡು ಬಾರಿ ಶಾಸಕನಾಗಿ ಕಡಿದುಕಟ್ಟೆ ಹಾಕಿದ್ದೂ ಅಷ್ಟರಲ್ಲೇ ಇತ್ತು. ತನ್ನ ದರ್ಪದಿಂದ ಗೋವಿಂದಪ್ಪ ಕ್ಷೇತ್ರದ ತುಂಬಾ ಸರ್ವಾಧಿಕಾರಿ ರಾಜಕಾರಣ ನಡೆಸಿದ್ದ. ಆತನ ಬಗ್ಗೆ ಜನ ಬೇಸತ್ತಿದ್ದರು. ಆಗ ಮಾಜಿ ಶಾಸಕ ಇಲ್ಕಲ್ ವಿಜಯಕುಮಾರ್ ಎಂಟ್ರಿ ಕೊಟ್ಟರು. 1963-64ರ ಚುನಾವಣೆಯಲ್ಲಿ ಇದೇ ವಿಜಯಕುಮಾರನ ತಂದೆ ವಜ್ರಪ್ಪ ನಿಜಲಿಂಗಪ್ಪನವರನ್ನು ನಿರಾಯಾಸವಾಗಿ ಸೋಲಿಸಿದ್ದರು. ಆಗ ಅವರು ಕುರುಬರ ಬಾಗೂರಿನ ಜಿ.ಟಿ.ರಂಗಪ್ಪನನ್ನು ಪಕ್ಷೇತರನನ್ನಾಗಿ ನಿಲ್ಲಿಸಿ ಗೆಲ್ಲಿಸಿದ್ದರು.


ಹಾಗೇ 2008 ರ ಚುನಾವಣೆಯಲ್ಲಿ ಗೋವಿಂದಪ್ಪನನ್ನು ಹಣಿಯಲು ವಿಜಯಕುಮಾರ ಪಕ್ಷೇತರ ಅಭ್ಯರ್ಥಿ ಗೂಳಿಹಟ್ಟಿ ಶೇಖರನ ಹೆಗಲ ಮೇಲೆ ಕೈಹಾಕಿದರು. ಶೇಖರನ ದುಡ್ಡು-ವಿಜಯ ಕುಮಾರನ ಪ್ರಭಾವ, ಎರಡೂ ಜೊತೆಗೂಡಿ ಕಾಂಗ್ರೆಸ್-ಬಿ.ಜೆ.ಪಿಗೆ ನೀರು ಕುಡಿಸಿದ್ದವು.

## ಬಿಜೆಪಿ ಮಾಡಿಕೊಂಡ ಎಡವಟ್ಟು


ಹೊಸದುರ್ಗ ವಿಧಾನಸಭಾ ಚುನಾವಣೆಯು ಬಿಜೆಪಿಗೆ ಪ್ರತಿಷ್ಠೆಯ ಕ್ಷೇತ್ರವಾಗಿತ್ತು. ಆ ಪಕ್ಷವು ಗುರುಸ್ವಾಮಿಗೆ ಬಿ ಫಾರಂ ಕೊಟ್ಟಿತ್ತು. ಗುರುಸ್ವಾಮಿಗೆ ಕುಂಚಿಟಿಗರ ಬೆಂಬಲ ಮತ್ತು ಜನಪ್ರಿಯತೆ ಎರಡೂ ಇತ್ತು. ಅಷ್ಟೊತ್ತಿಗಾಗಲೇ ಇದೇ ಪಾರ್ಟಿಯಿಂದ ಲಿಂಗಮೂರ್ತಿ ಎಂಬ ಎಳಸು ಎದ್ದುನಿಂತಿದ್ದ. ಇಬ್ಬರೂ ಕುಂಚಿಟಿಗ ಲಿಂಗಾಯತರು. ಚಾಲಾಕಿಯಾಗಿದ್ದ ಲಿಂಗಮೂರ್ತಿ ಯಡಿಯೂರಪ್ಪನ ಕಾಲುಹಿಡಿದ. ಜೊತೆಗೆ ಹೊಸದುರ್ಗದಲ್ಲಿರುವ ಕುಂಚಿಟಿಗ ಸಮಾಜದ ಜರತಾರಿ ಜಗದ್ಗುರು ಶಾಂತವೀರಸ್ವಾಮಿ ಯಡ್ಡಿಗೆ ಸೂಚನೆ ನೀಡಿದ್ದೇ ತಡ ಬೆಳಗಾಗುವುದರೊಳಗೆ ಗುರುಸ್ವಾಮಿಗೆ ಅನೌನ್ಸ್ ಆಗಿದ್ದ ಬಿಜೆಪಿಯ ಬಿ ಫಾರಂಗೆ ತಿದ್ದುಪಡಿಯಾಗಿ ಅದರ ಮೇಲೆ ಲಿಂಗಮೂರ್ತಿಯ ಹೆಸರು ಬಿತ್ತು. ಅಲ್ಲಿಗೆ ಬಿಜೆಪಿ ಚುನಾವಣೆ ಮುನ್ನವೇ ಅರ್ಧ ಸೋತಿತ್ತು. ಯಾವಾಗ ಗುರುಸ್ವಾಮಿಯ ಕೈಯಿಂದ ಲಿಂಗಮೂರ್ತಿ ಪಕ್ಷದ ಟಿಕೆಟನ್ನು ಕಿತ್ತನೋ ಆಗ ಗುರುಸ್ವಾಮಿ ಪಕ್ಷೇತರ ಗೂಳಿಹಟ್ಟಿ ಶೇಖರನ ಮಗ್ಗುಲಿಗೆ ಬಂದು ಕುಂತ. ಹೊಸದುರ್ಗದ ವೀರಶೈವರ ಮುಕ್ಕಾಲು ಭಾಗ ಶೇಖರನ ಹಿಂದೆ ಸಾಲುಗಟ್ಟಿ ನಿಂತಿತು. ಯಡ್ಡಿಯ ಜಾತಿರಾಜಕಾರಣವೂ ಲಿಂಗಮೂರ್ತಿಗೆ ಕೈಕೊಟ್ಟಿದ್ದರಿಂದ ಆತ ಮೂರನೇ ಸ್ಥಾನಕ್ಕೆ ದೂಡಲ್ಪಟ್ಟ.



ಗುರುಸ್ವಾಮಿ



ಗೋವಿಂದಪ್ಪ



ಲಿಂಗಮೂರ್ತಿ

## ಗೋವಿಂದಪ್ಪನಿಗೆ ಮೂರು ನಾಮ

ಕಾಂಗ್ರೆಸ್‌ನಿಂದ ಎಡರು ಬಾರಿ ಶಾಸಕನಾಗಿದ್ದರೂ ಗೋವಿಂದಪ್ಪ ಕ್ಷೇತ್ರದಲ್ಲಿ ಜನಪ್ರಿಯತೆ ಕಳೆದುಕೊಂಡಿದ್ದ. ಆತನನ್ನು ಮಟ್ಟ ಹಾಕಲು ಕಾಂಗ್ರೆಸಿನೊಳಗೇ ಪಿತೂರಿ ನಡೆದಿತ್ತು. ಶೇಖರನ ಬೆನ್ನಿಗೆ ನಿಂತಿದ್ದ ವಿಜಯಕುಮಾರ ಕ್ಷೇತ್ರದಲ್ಲಿರುವ ತನ್ನ ಬಸ್ಸು ಮತ್ತು ಸಿನಿಮಾ ಟಾಕೀಸನ್ನೇ ಚುನಾವಣಾ ಪ್ರಚಾರಕ್ಕೆ ಉಪಯೋಗಿಸಿಕೊಂಡರು. ಪ್ರಚಾರ ಕಾರ್ಯ ಶುರುವಾದಾಗಿನಿಂದ ಪ್ರಯಾಣಿಕರಿಗೆ ಪುಗಸಟ್ಟೆ ಪ್ರಯಾಣ, ಸಿನಿಮಾಮಂದಿರಕ್ಕೂ ಪುಗಸಟ್ಟೆ ಎಂಟ್ರಿ. ಸಹಜವಾಗಿಯೇ ಜನ ಮುಗಿಬಿದ್ದು ಓಟು ಹಾಕಿದರು. ಇದೆಲ್ಲದರ ಪರಿಣಾಮವಾಗಿ 2008 ಚುನಾವಣೆಯಲ್ಲಿ ಶೇಖರ್ ಗೂಳಿಯ ಗುಟುರು ಹಾಕಿಬಿಟ್ಟ-ಗೋವಿಂದಪ್ಪನಿಗೆ ಮತದಾರ ತಿರುಪತಿ ನಾಮ ತೀಡಿಬಿಟ್ಟ.

ಆದರೂ ಗೂಳಿಹಟ್ಟಿ ಶೇಖರ್ ಗೆದ್ದದ್ದು ಕೇವಲ 1,168 ಮತಗಳ ಅಂತರದಿಂದ ಎಂಬುದನ್ನು ನೆನಪಿಡಬೇಕು.

## ಬಿಜೆಪಿ ಸಂಗ ಮಾನಭಂಗ

2008ರ ಚುನಾವಣೆಯಲ್ಲಿ ಶೇಖರ ಗೆದ್ದದ್ದೇ ತಡ ಹೊಸದುರ್ಗದಲ್ಲಿ ಪ್ರತ್ಯಕ್ಷನಾದ ಶ್ರೀರಾಮುಲು ಶೇಖರನನ್ನು ಎತ್ತಾಕಿಕೊಂಡು ಹೋಗಿ ಮುಖ್ಯಮಂತ್ರಿಯಾಗುವ ಉಮೇದಿನಲ್ಲಿದ್ದ ಯಡ್ಡಿಯ ಕಾಲುಬುಡದಲ್ಲಿ ಕೆಡವಿಬಿಟ್ಟ. ಕರ್ನಾಟಕದಲ್ಲಿ ಗೂಳಿಹಟ್ಟಿ ಶೇಖರನೇ ಯಡ್ಡಿ-ಚಿಡ್ಡಿ-ರೆಡ್ಡಿ ಗ್ಯಾಂಗಿನ 'ಆಪರೇಶನ್ ಕಮಲ'ಕ್ಕೆ ಮೊದಲ ಬಲಿಯಾದ. ಬಿಜೆಪಿಗೆ ಬೆಂಬಲ ನೀಡಿ ಮಂತ್ರಿಯಾದ ಶೇಖರ ಕ್ರೀಡಾಸಚಿವನಾಗಿ ಹೊಸದುರ್ಗದಲ್ಲಿ ಮಿಂಚಿದ. ಕ್ರೀಡಾಂಗಣ ನಿರ್ಮಿಸಿದ, ಈಜುಕೊಳ ಎಬ್ಬಿಸಿದ, ಪಟ್ಟಣ ಪಂಚಾಯತಿಗೆ ತಿಂಗಳಿಗೆ ಲಕ್ಷಾಂತರ ಆದಾಯ ಬರುವಂತೆ ಮಳಿಗೆ ಕಟ್ಟಿಸಿದ. ಹೊಸದುರ್ಗದ ಹದಗೆಟ್ಟ ರಸ್ತೆಗಳು ಮಿಂಚುವಂತೆ ಮಾಡಿದ. ಇವೆಲ್ಲದರ ಮೂಲಕ 60 ವರ್ಷಗಳಿಂದ ನರಕದಂತಿದ್ದ ಕ್ಷೇತ್ರವನ್ನು ಕೊಂಚಮಟ್ಟಿಗೆ ಅಭಿವೃದ್ಧಿಪಡಿಸಿದ.

## ತಂದದ್ದೆಲ್ಲ ದೇವರಿಗೆ ಅಂದ

ಹೊಸದುರ್ಗ ಕ್ಷೇತ್ರದಲ್ಲಿರುವಷ್ಟು ದೇವಾಲಯಗಳು ಬಹುತೇಕ ಬೇರೆಲ್ಲೂ ಇಲ್ಲವೇನೋ. ಶೇಖರ ಶಾಸಕನಾದ ನಂತರ ಅನಾಥವಾಗಿದ್ದ ದೇವರುಗಳೆಲ್ಲ ಮಿಂಚತೊಡಗಿದವು. ಸರ್ಕಾರದಿಂದ ಬಂದ ಗ್ರಾಂಟುಗಳ ಅರ್ಧ ದೇವಾಲಯಗಳ ಪಾಲಾಗಿದೆ. ಅದರಲ್ಲಿ ಹಾಲುರಾಮೇಶ್ವರನೇ ಹತ್ತಾರು ಕೋಟಿ ನುಂಗಿಬಿಟ್ಟ. ದೇವಾಂಗ ಸಮಾಜದ ದೇವರಿಗೆ ಕೋಟಿಗಟ್ಟಳೆ ರೂಪಾಯಿಗಳು ಸಂದಾಯವಾದವು. ಹೊಸದುರ್ಗದಲ್ಲಿರುವ ಪ್ರತಿ ಜಾತಿ-ಕೇರಿಗಳಲ್ಲಿ ದೇವಾಲಯಗಳೆದ್ದವು.

## ಅಧಿಕಾರಿಗಳು ತಂಪಾದರು

ಶೇಖರ ಶಾಸಕನಾದ ನಂತರ ಕ್ಷೇತ್ರದಲ್ಲಿರುವ ಸರಕಾರಿ ಕಚೇರಿಗಳಲ್ಲಿ ಕಮೀಶನ್ ದಂಧೆಗೆ ಕಡಿವಾಣ ಬಿದ್ದಿದೆ ಎಂದೂ, ಖುದ್ದು ಶಾಸಕರೇ ನಯಾಪೈಸೆಯ ಕಮೀಶನ್ ಮುಟ್ಟುವುದಿಲ್ಲ ಎಂದೂ ಅಚ್ಚರಿ ಮೂಡಿಸುವಂತಹ ಮಾತು ಕೇಳಿಬರುತ್ತಿದೆ. ಕ್ಷೇತ್ರದಲ್ಲಿ ಗುಣಮಟ್ಟದ ಕಾಮಗಾರಿಗೆ ಒತ್ತು, ಗುತ್ತಿಗೆಯಲ್ಲಿ ಲೂಟಿಯಿಲ್ಲ, ಅನುದಾನ ಬಂತೆಂದರೆ ತಡ ಮಾಡುವಂತಿಲ್ಲ, ಕೂಡಲೇ ಕಾಮಗಾರಿ ಶುರುವಾಗಬೇಕು, ಆರಂಭಗೊಂಡ ಕಾಮಗಾರಿಯ

# ತುಮಕೂರು ವಿವಿ: ಅಭ್ಯರ್ಥಿಗಳಿಗೆ ಅವಮಾನ, ಪುರೋಹಿತಶಾಹಿಗಳಿಗೆ ಅಭಿಮಾನ

ಜನ್ಮತಾಳುವಾಗಲೇ ಹಲವಾರು ಹಗರಣಗಳನ್ನು ಮೈಮೇಲೆಳೆದುಕೊಂಡಿದ್ದ ತುಮಕೂರು ವಿಶ್ವವಿದ್ಯಾಲಯ ಈಗ ಒಮ್ಮೆಗೆ ಎರಡು ಕಾರಣಗಳಿಗೆ ಸುದ್ದಿಯಲ್ಲಿದೆ. ಒಂದೆಡೆ ಈ ವಿವಿ ಸಂಶೋಧನಾ ಅಭ್ಯರ್ಥಿಗಳಿಗೆ ಅವಮಾನ ಮಾಡಿದ್ದರೆ, ಇನ್ನೊಂದೆಡೆ ಪುರೋಹಿತಶಾಹಿಗಳಿಗೆ ಮಣೆ ಹಾಕಿ ತನ್ನ ಜಾತಿ ಪ್ರೀತಿಯನ್ನು ಪ್ರದರ್ಶಿಸಿದೆ.

ಆರು ತಿಂಗಳ ಹಿಂದೆ ಈ ವಿಶ್ವವಿದ್ಯಾಯಲವು ಕನ್ನಡ, ಇತಿಹಾಸ, ಇಂಗ್ಲಿಷ್, ಕಂಪ್ಯೂಟರ್ ಸೈನ್ಸ್, ಭೌತಶಾಸ್ತ್ರ ರಸಾಯನಶಾಸ್ತ್ರ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಹತ್ತು ಹಲವು ವಿಷಯಗಳಲ್ಲಿ ಸಂಶೋಧನೆ ಕೈಗೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿತ್ತು. ಈ ಕುರಿತು ಪತ್ರಿಕೆಗಳಲ್ಲಿ ಜಾಹಿರಾತು ನೀಡಲು ಲಕ್ಷಾಂತರ ರೂಪಾಯಿಗಳು ಕೂಡ ವೆಚ್ಚವಾಗಿತ್ತು.

ಈ ವಿವಿ ಮಾಡುವ ಎಡವಟ್ಟುಗಳು ಎಂತಹದ್ದೆಂದರೆ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ವಿಭಾಗವೇ ಇಲ್ಲದಿದ್ದರೂ ಈ ಭಾಷೆಯಲ್ಲಿ ಸಂಶೋಧನೆ ನಡೆಸಲು ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಜಾಹೀರಾತು ಸೂಚಿಸಿತ್ತು. ಇದು ಸಾಕಷ್ಟು ವಿವಾದಕ್ಕೆ ಕಾರಣವಾಗಿತ್ತು.

ಅದೇನೇ ಇರಲಿ, ರಾಜ್ಯದ ಬೇರೆ ಬೇರೆ ವಿವಿಗಳಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ನೂರಾರು ವಿದ್ಯಾರ್ಥಿಗಳು ತುಮಕೂರು ವಿವಿಯ ಜಾಹೀರಾತನ್ನು ನೋಡಿ ಸಂಶೋಧನೆ ನಡೆಸುವ ಇಚ್ಛೆಯಿಂದ ಅರ್ಜಿಗಳನ್ನು ಸಲ್ಲಿಸಿದರು. ಅಂಥವರಲ್ಲಿ ನೂರಾರು ಜನರನ್ನು ಕರೆಸಿ ಅವರಿಗೆಲ್ಲ ಪರೀಕ್ಷೆ ಬರೆಯಲು ಅವಕಾಶವನ್ನು ನೀಡಲಾಗಿತ್ತು.


ಅಭ್ಯರ್ಥಿಗಳೇನೋ ಪರೀಕ್ಷೆ ಬರೆದುಹೋದರು. ಆದರೆ ಅವರ ಉತ್ತರ ಪತ್ರಿಕೆಗಳನ್ನು ನೋಡುವ, ಮೌಲ್ಯಮಾಪನ ಮಾಡುವ ಉಸಾಬರಿಗೇ ವಿವಿ ಹೋಗಲಿಲ್ಲ, ತಿಂಗಳುಗಳು ಉರುಳಿದರೂ ತಾವು ಬರೆದ ಪ್ರವೇಶ ಪರೀಕ್ಷೆಯ ಫಲಿತಾಂಶ ಬಾರದಿದ್ದಾಗ ಅವರೆಲ್ಲ ವಿವಿಗೆ ಹಿಡಿಶಾಪವನ್ನು ಹಾಕಿದರು. ಅಷ್ಟೇ ಅಲ್ಲ, ಈ ಪ್ರವೇಶ ಪರೀಕ್ಷೆ ಬರೆಯಲು ವಿವಿ ರಿಜಿಸ್ಟ್ರಾರ್ ಹೆಸರಿನಲ್ಲಿ ಅಭ್ಯರ್ಥಿಗಳು ಕಳುಹಿಸಿದ್ದ ಡಿಡಿ ಹಣವೂ ವಾಪಸ್ ಬರಲಿಲ್ಲ, ನಿರುದ್ಯೋಗದಿಂದ ತತ್ತರಿಸಿದ್ದ ಅಭ್ಯರ್ಥಿಗಳ ಜೇಬಿಗೆ ಮತ್ತು ಕನಸಿಗೆ ವಿವಿ ಬರೆ ಎಳೆದಿತ್ತು.

ಈಗ ನೋಡಿದರೆ ಪ್ರವೇಶ ಪರೀಕ್ಷೆ ಬರೆಯಲು ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ತುಮಕೂರಿನ ಕುವೆಂಪು ನಗರದ ಮುಖ್ಯ ರಸ್ತೆಯ ಬದಿಯಲ್ಲೇ ವಿವಿ ಬಿಸಾಡಿದೆ. ಅಭ್ಯರ್ಥಿಗಳ ಮೊಬೈಲ್ ನಂಬರ್, ಫೋಟೋ, ವಿಳಾಸ, ಇತರೆ ವಿವರಗಳಿರುವ ಅರ್ಜಿಗಳನ್ನು ರಸ್ತೆಗೆ ಬಿಸಾಕಿರುವುದು ವಿವಿಯ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ.


ಅದರಲ್ಲೂ ಮಹಿಳಾ ಅಭ್ಯರ್ಥಿಗಳ ಸಂಪೂರ್ಣ ವಿವರಗಳಿರುವ ಅರ್ಜಿಗಳಿಂದ ಯಾರಾದರೂ ಪುಂಡರು ಅವರ ಮೊಬೈಲ್ ಇಲ್ಲವೇ ದೂರವಾಣಿ ನಂಬರ್ ಪಡೆದು ಮಹಿಳೆಯರಿಗೆ ಕರೆ ಮಾಡುವುದು ಅಥವಾ ಅಶ್ಲೀಲ ಮೆಸೇಜ್‌ಗಳನ್ನು ಕಳಿಸುವುದು ಮಾಡಿದರೆ ಮಹಿಳಾ ಅಭ್ಯರ್ಥಿಗಳು ಮಾನಸಿಕ ಹಿಂಸೆ ಅನುಭವಿಸಬೇಕಾಗುತ್ತದೆ



ಕುಮಾರವ್ಯಾಸದ ಪುತ್ಥಳಿಯನ್ನು ಅನಾವರಣ ಮಾಡಿದ ಜಯದೇವ್



ಅಭ್ಯರ್ಥಿಗಳ ಅರ್ಜಿಗಳು ಬೀದಿಪಾಲಾಗಿರುವುದು



...ಯಲ್ಲಿ ಮುಗಿಯಬೇಕು. ಗುಣಮಟ್ಟ ಇರಬೇಕು, ...ಇದ್ದರೆ ಅಧಿಕಾರಿಗಳು ಕಂಗಾಲಾಗುವಂತೆ ಬೈಗುಳ... ...ದಕ್ಕೂ ಶಾಸಕರದ್ದೇ ಉಸ್ತುವಾರಿ ಎಂಬ ಮಾತಿನ ...ವೆಯೋ ಶಾಸಕರಿಗೆ ಗೊತ್ತಾಗದಂತೆ ಸರ್ಕಾರಿ ...ರಿಗಳು ಅಲ್ಲಲ್ಲಿ ಕನ್ನ ಕೊರೆದು ತಂಪಾಗಿದ್ದಾರೆ ಎಂಬ ...ೂ ಕೇಳಿಬರುತ್ತಿದೆ.

### ಜನತಾ ಮನೆಯಲ್ಲಿ ಶಾಸಕ

ಗೂಳಿಹಟ್ಟಿ ಶೇಖರ ಬ್ರಹ್ಮಚಾರಿ. ಅವರಿಗೆ ...ಚಾರದಲ್ಲಿ ನಂಬಿಕೆ. ಅದ್ಯಾವನೋ ಜ್ಯೋತಿಷಿ ಮದುವೆ ...ದರೆ ಸಾವಿದೆ ಎಂದನಂತೆ. ಅಂದಿನಿಂದ ಮದುವೆಯ ...ವಿಲ್ಲ. ಅವರ ತಮ್ಮಂದಿರೆಲ್ಲ ಸರ್ಕಾರಿ ಕೆಲಸದಲ್ಲಿದ್ದಾರೆ. ...ರ್ ಇವತ್ತಿಗೂ ವಾಸವಾಗಿರುವುದು ಬೋವಿ ...ೋನಿಯಲ್ಲಿ ಜನತಾ ಮನೆಯಲ್ಲೇ.

### ಕಾಂಗ್ರೆಸ್ ಪ್ರಾಮಿಸ್ ಮಾಡಿದೆ

...ರಲಿರುವ ಚುನಾವಣೆಯಲ್ಲಿ ಗೂಳಿಹಟ್ಟಿ ಶೇಖರ ...ಸ್‌ನಿಂದ ಸ್ಪರ್ಧಿಸುವ ಸೂಚನೆಗಳಿವೆ. ಇತ್ತೀಚೆಗೆ ನಡೆದ ...ಪತಿ ಚುನಾವಣೆಯಲ್ಲಿ ಕರ್ನಾಟಕದಲ್ಲಿರುವ ಐದು ಪಕ್ಷೇತರ ಶಾಸಕರ ಬೆಂಬಲವನ್ನು ಕಾಂಗ್ರೆಸ್ ...ಮಾಂಡ್ ಕೇಳಿತ್ತು. ಆಗಲೇ ಐದೂ ಜನ ಶಾಸಕರು ...ದಿನ ಚುನಾವಣೆಯಲ್ಲಿ ತಮಗೇ ಕಾಂಗ್ರೆಸ್ ಟಿಕೆಟು ...ಬೇಕೆಂದು ಬೇಡಿಕೆ ಇಟ್ಟಿದ್ದರಂತೆ. ಅದಕ್ಕೆ ಕಾಂಗ್ರೆಸ್ ...ಮಾಂಡ್ ಓಕೆ ಅಂದಿದೆಯಂತೆ.

...ೀಗೆ ಕಾಂಗ್ರೆಸ್‌ನೊಂದಿಗೆ ಡಿಂಗ್‌ಡಾಂಗ್ ಆಡುತ್ತಲೇ ...ರ್ ಬಿಜೆಪಿಯೊಂದಿಗೂ ಮಾತುಕತೆ ನಡೆಸಿದ್ದಾರೆ. ...ಯ ಬಗ್ಗೆ ಶೇಖರಗೆ ಅಭಿಮಾನವಿದೆ. ಸದಾನಂದ ...ರು ಮುಖ್ಯಮಂತ್ರಿಯಾಗಿದ್ದಾಗ ಒಂದೇ ಏಟಿಗೆ 45 ...ಟಿ ಗ್ರಾಂಟ್‌ಅನ್ನು ಕ್ಷೇತ್ರಕ್ಕೆ ನೀಡಿದ್ದರು. ಬಿಜೆಪಿ ...ಸೊಂಡರೆ ಪಕ್ಷದ ಟಿಕೆಟು ನೀಡುವ ಭರವಸೆ ನೀಡಿದ್ದಾರೆ. ...ಾಗಿಯೇ ಶೇಖರ ಇತ್ತ ಕಾಂಗ್ರೆಸ್, ಅತ್ತ ಬಿಜೆಪಿಯ ...ಮಾಂಡಿನಿಂದ ಬುಲಾವ್‌ಗಾಗಿ ನಿರೀಕ್ಷೆಯಲ್ಲಿದ್ದಾರೆ. ...ವುದಿಲ್ಲದಿದ್ದರೂ ಪಕ್ಷೇತರನಾಗುವುದು ಗ್ಯಾರಂಟಿ.

### ಪ್ರಚಾರ ಶುರುವಾಗಿದೆ

...ಹೊಸದುರ್ಗದಲ್ಲಿ ಈಗಾಗಲೇ ಶಾಸಕ ಶೇಖರ್, ...ಜಿಯ ಲಿಂಗಮೂರ್ತಿ, ಕಾಂಗ್ರೆಸ್‌ನಿಂದ ಗೋವಿಂದಪ್ಪ ...ರ ಶುರುಮಾಡಿದ್ದಾರೆ. ಕಾಂಗ್ರೆಸ್ ಮನೆಯಲ್ಲಿ ಸೂತಕದ ...ಮೆ ಇದೆ. ಬಿಜೆಪಿಯಲ್ಲಿ ಕಿತ್ತಾಟವಿದೆ.

...ಗೋವಿಂದಪ್ಪನನ್ನು ಕುರುಬರೇ ನಂಬುತ್ತಿಲ್ಲ. ...ಮೂರ್ತಿ ಟಿಕೆಟು ತನ್ನದೇ ಅಂತ ಕ್ಷೇತ್ರದ ತುಂಬಾ ...ಡುತಿದ್ದಾನೆ. ಈತ ಯಡಿಯೂರಪ್ಪನನ್ನೇ ನಂಬಿದ್ದಾನೆ. ...ರ ಮಾತ್ರ ಶಾಸಕನಾಗಿದ್ದುಕೊಂಡೇ ಕ್ಷೇತ್ರದ ...ದಾರರನ್ನು ತೃಪ್ತಿಪಡಿಸುತ್ತಿದ್ದಾನೆ.

...ಮೊದಲೇ ಹೇಳಿದಂತೆ ಶೇಖರ್ ಖರ್ಚು ಮಾಡುವ ...ನ ಮೂಲವೇ ಚಿದಂಬರ ರಹಸ್ಯ ಅಂತ. ಈಗಲೂ ...ಕೈ ಬಿಗಿಹಿಡಿದಿಲ್ಲ. ಈತನ ರೊಕ್ಕ ಮತ್ತು ...ಳತನದೆದುರು ಯಾರು ನಿಂತಾರೆಂಬುದೇ ಅಚ್ಚರಿಯ ...ತಿ. ಆದರೆ ಕ್ಷೇತ್ರದ ಮತದಾರ ಬದಲಾವಣೆ ಬಯಸಿದರೆ ...ಶಾಂಶವೇ ಬೇರೆಯಾಗುತ್ತದೆ. ಎಷ್ಟಾದರೂ ಮಾಜಿ ...ಖ್ಯಮಂತ್ರಿ ನಿಜಲಿಂಗಪ್ಪನನ್ನೇ ಸೋಲಿಸಿದ ಕ್ಷೇತ್ರವಿದು.

● ಟಿ.ಎನ್.ಷಣ್ಮುಖ

...ಬ ಕನಿಷ್ಠ ಜ್ಞಾನವೂ ವಿವಿಗೆ ಇರುವಂತಿಲ್ಲ.

### ...ಬ್ರಾಹ್ಮಣ ಪ್ರೇಮ

...ಇತ್ತೀಚೆಗೆ ತುಮಕೂರು ವಿವಿಯ ಆವರಣದಲ್ಲಿ ...ಂತಿಗಳಾದ ಡಿವಿಜಿ ಮತ್ತು ಕುಮಾರವ್ಯಾಸನ ಪುತ್ಥಳಿಗಳನ್ನು ...ನಾವರಣ ಮಾಡಲಾಯಿತು. ಆದರೆ ಅದನ್ನು ಅನಾವರಣ ...ದಿದ್ದು ಯಾರೋ ಶಿಕ್ಷಣ ತಜ್ಞನಾಗಲಿ, ಸಾಹಿತಿಯಾಗಲಿ ...ಲ್ಲ. ಬದಲಾಗಿ ಆರೆಸ್ಸೆಸ್ ಎಂಬ ಕೋಮುವಾದಿ ...ಘಟನೆಯ ರಾಜ್ಯ ಸಂಚಾಲಕ ಮೈ.ಚ.ಜಯದೇವ್ ...ನಾವರಣ ಮಾಡಿದರು. ಅವತ್ತು ಜಯದೇವ್ ಜೊತೆ ...ಸ್ಸೆಸ್ ಸಂಘಟನೆಯ ಮತ್ತೋರ್ವ ನಾಯಕ ಕೆ.ನರಹರಿ ...ಬಾತ ಕೂಡ ಇದ್ದರು. ಇವರಿಗೂ, ವಿವಿಗೂ ಎತ್ತಿಂದೆತ್ತಣ ...ಬಂಧ ಎಂದು ಮೂಗು ಮುರಿದವರಿಗೆ ಲೆಕ್ಕವಿಲ್ಲ.


...ಅಂದಹಾಗೆ ಇವತ್ತು ಇಡೀ ವಿವಿ ಎಷ್ಟು ...ಹ್ಮಮಯವಾಗಿದೆ ಎಂದರೆ ಒಂದು ಸಭಾಭವನಕ್ಕೆ ಆರೆಸ್ಸೆಸ್ ...ಬಂಧ ದಿ. ಮದನ ಮೋಹನ ಮಾಳವೀಯ ಎಂಬಾತನ ...ರಿಡಲಾಗಿದೆ. ಇನ್ನೊಂದು ಬ್ಲಾಕಿಗೆ ಮಾಜಿ ಚೆಡ್ಡಿ ಮಂತ್ರಿ ...ಡಾ.ವಿ.ಎಸ್.ಆಚಾರ್ಯನ ಹೆಸರಿಡಲಾಗಿದೆ. ಇವುಗಳ ...ಜೊತೆಗೆ ಡಾ.ಮಯ್ಯ ಭವನ, ಡಿವಿಜಿ ಅಧ್ಯಯನ ಕೇಂದ್ರ, ...ಮಾರವ್ಯಾಸ ಅಧ್ಯಯನ ಪೀಠ, ವಿ.ಎಸ್.ಆಚಾರ್ಯ ಪುತ್ಥಳಿ, ...ಎಸ್.ಸುಬ್ಬಲಕ್ಷ್ಮಿ ಪುತ್ಥಳಿ ಮತ್ತು ಆರ್ಟ್ ಗ್ಯಾಲರಿ, ...ಎಂ.ವಿಶ್ವೇಶ್ವರಯ್ಯ ಸಭಾಂಗಣಗಳೂ ಇವೆ. ಇಲ್ಲಿ ...ಂದು ಅಂಶವನ್ನು ಗಮನಿಸಬೇಕು. ಇಲ್ಲಿರುವ ಎಲ್ಲ ...ಸರುಗಳು ಬ್ರಾಹ್ಮಣರದ್ದು! ಅಂದರೆ ತುಮಕೂರು ...ಶ್ವವಿದ್ಯಾಲಯವು ಒಂದು ವಿವಿ ಆಗಿರದೆ ಬ್ರಾಹ್ಮಣರ ...ಗ್ರಹಾರದಂತಾಗಿದೆ.


...ಆರೆಸ್ಸೆಸ್ಸಿನ ಪುಂಡನಂತೆ ವರ್ತಿಸುವ ಎಸ್.ಸಿ.ಶರ್ಮ ...ಬಾತನನ್ನು ವಿವಿಯ ಕುಲಪತಿಯನ್ನಾಗಿ ನೇಮಿಸಿದರೆ ...ಇನ್ನೇನಾಗುತ್ತದೆ?!

●


# ಯಡ್ಡಿ v/s ಬಿಜೆಪಿ: ಕ್ಲೈಮ್ಯಾಕ್ಸ್ ಒಂದು ಬಾಕಿ

ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿದ ನಂತರ ಇದೇ ಮೊದಲ ಬಾರಿಗೆ ಯಡಿಯೂರಪ್ಪ ಮತ್ತು ಬಿಜೆಪಿ ಹೈಕಮಾಂಡ್ ನಡುವಿನ "ಸಮರ"ದಲ್ಲಿ ದೆಹಲಿ ದೊರೆಗಳು ಜಯ ಗಳಿಸಿದ್ದಾರೆ. ಈಗ ಹರಿಯಾಣಾದ ಸೂರಜ್‌ಕುಂಡ್‌ನಲ್ಲಿ ನಡೆಯುತ್ತಿರುವ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಗೆ ಗೈರುಹಾಜರಾಗುವ ಮೂಲಕ ಯಡ್ಡಿ ತನ್ನ ಅಸಮಾಧಾನ ಪ್ರದರ್ಶಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ ಪಕ್ಷದ ದೆಹಲಿ ವರಿಷ್ಠರು ಯಾವ ಕಾರಣಕ್ಕೂ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ಯಡ್ಡಿಗೆ ನೀಡಬಾರದು ಎಂದು ನಿರ್ಧರಿಸಿರುವುದು. ಭ್ರಷ್ಟಾಚಾರದ ವಿಷಯವನ್ನು





ನಳೀನ್‌ಕುಮಾರ್ ಕಟೀಲ್




ಪ್ರಹ್ಲಾದ್ ಜೋಷಿ


ಮುಂದಿಟ್ಟು ಯುಪಿಎ ಸರಕಾರವನ್ನು ಶತಾಯಗತಾಯವಾಗಿ ಕೆಡವಲು ರಾತ್ರಿ ಹಗಲು ಚಿಂತಿಸುತ್ತಿರುವ ಬಿಜೆಪಿ ನಾಯಕರು ಇಂತಹ ಸಮಯದಲ್ಲಿ ಹೇಗೆ ತಾನೇ ಭ್ರಷ್ಟಾಚಾರಕ್ಕೆ ಪರ್ಯಾಯ ಹೆಸರಾದ ಯಡ್ಡಿಗೆ ಪಟ್ಟಾಭಿಷೇಕ ಮಾಡಿಯಾರು? ಹೀಗಾಗಿ ಏನೇ ಆದರೂ ಯಡ್ಡಿಯ ಒತ್ತಡಕ್ಕೆ ಈ ಬಾರಿ ದೆಹಲಿ ದೊರೆಗಳು ಮಣಿಯುವುದಿಲ್ಲ. ಅಲ್ಲಿಗೆ ಮುಖ್ಯಮಂತ್ರಿ ಪದವಿ ಕಳೆದುಕೊಂಡ ನಂತರ ಅಧ್ಯಕ್ಷನಾಗುವ ಕನಸು ಕಾಣುತ್ತಿದ್ದ, ಆ ಮೂಲಕ ತನ್ನ ಹಿಂಬಾಲಕರಿಗೆ ಚುನಾವಣೆ ಸಂದರ್ಭದಲ್ಲಿ ಟಿಕೆಟ್ ನೀಡಿ ಮತ್ತೆ ಅಧಿಕಾರದ ಗದ್ದುಗೆ ಹಿಡಿಯುವ ಯಡ್ಡಿಯ ಯೋಜನೆ ಭಗ್ನವಾಗಿದೆ.

ಮೊದಲ ಬಾರಿಗೆ ಸದಾನಂದ ಗೌಡರನ್ನು, ಆ ನಂತರ ಅವರ ಸ್ಥಾನದಲ್ಲಿ ಜಗದೀಶ್ ಶೆಟ್ಟರ್ ಅವರನ್ನು ಹೈಕಮಾಂಡ್ ಆಶಯಕ್ಕೆ ವಿರುದ್ಧವಾಗಿ ಮುಖ್ಯಮಂತ್ರಿ ಮಾಡಿ, ದೆಹಲಿ ನಾಯಕರ ವಿರುದ್ಧ ಜಯಗಳಿಸಿ, ಯಶಸ್ವಿ ಭಿನ್ನಮತೀಯ ನಾಯಕ ಎಂದೆನಿಸಿಕೊಂಡ ಯಡ್ಡಿ ಪಾಲಿಗೆ ಇದು ದೊಡ್ಡ ಸೋಲು ಎಂದೇ ಪಕ್ಷದ ವಲಯದಲ್ಲಿ ತರ್ಕಿಸಲಾಗುತ್ತಿದೆ.

ಮುಂದಿನ ಚುನಾವಣೆಯಲ್ಲಿ ದೆಹಲಿ ಗದ್ದುಗೆಯನ್ನು ಏರುವ ಬಗ್ಗೆಯೇ ಬಿಜೆಪಿ ನಾಯಕರು ಜಪಮಾಡುತ್ತಿರುವಾಗ ಅವರಲ್ಲಿ ಯಾರಿಗೂ ಕರ್ನಾಟಕದ ಬಗ್ಗೆಯಾಗಲಿ, ಯಡ್ಡಿಯೂರಪ್ಪ ಬಗ್ಗೆಯಾಗಲಿ ಚಿಂತಿಸಲು ಪುರುಸೊತ್ತಿಲ್ಲ. ಸ್ವತಃ ಯಡ್ಡಿಯ ಹಿತೈಷಿಗಳು ಕೂಡಾ ಈ ಬಗ್ಗೆ ದೆಹಲಿಯ ದೊರೆಗಳೊಂದಿಗೆ ಮಾತನಾಡುವ ಗೊಡವೆಗೆ ಹೋಗದಿದ್ದದ್ದು ಯಡ್ಡಿಗೆ ಬೇಸರ ತಂದಿದೆ. ಕಳೆದ ಬಾರಿ ಯಡ್ಡಿ ದೆಹಲಿಗೆ ಹೋದಾಗ ಆತನನ್ನು ಯಾರೂ ಮಾತನಾಡಿಸದೇ ತಪ್ಪಿಸಿಕೊಂಡಿದ್ದರು. ಆಗಲೇ ಪಕ್ಷದಲ್ಲಿ ತನಗೆ ಯಾವ ಸ್ಥಾನಮಾನವೂ ಸಿಕ್ಕುವುದಿಲ್ಲ ಎಂದು ಸ್ಪಷ್ಟವಾಯಿತೋ ಆಗ ಕರ್ನಾಟಕದ ಈ ದಂಡನಾಯಕನಿಗೆ ಪರಿಸ್ಥಿತಿ ಅರ್ಥವಾಗಿತ್ತು. ಹಾಗಾಗಿಯೇ ದೆಹಲಿಯಿಂದ ಬಂದವರೇ ಪಕ್ಷ ಬಿಡುವ ಬಗ್ಗೆ ಬೆದರಿಕೆ ಹಾಕಿದ್ದರು.



ಈಗ ಯಡ್ಡಿಯ ಭಿನ್ನಮತೀಯ ನಾಟಕ ಕೊನೆಯ ಹಂತ ತಲುಪಿದೆ. ಅಂದರೆ ಕ್ಲೈಮಾಕ್ಸ್ ಮಾತ್ರ ಬಾಕಿಯಿದೆ. ಈ ನಾಟಕದ ಕೊನೆಯ ಅಧ್ಯಾಯವನ್ನು ದೆಹಲಿ ನಾಯಕರು ಬರೆಯುತ್ತಾರೋ ಅಥವಾ ಸ್ವತಃ ಯಡಿಯೂರಪ್ಪನವರೇ ಬರೆಯುತ್ತಾರೋ ಎಂಬ ಕುತೂಹಲವನ್ನು ಬಿಟ್ಟರೆ ಇನ್ನೇನೂ ಉಳಿದಿಲ್ಲ. ಯಡ್ಡಿಯನ್ನು ಪಕ್ಷದಿಂದ ಉಚ್ಚಾಟಿಸಿದರೆ ಆತ ಅನುಕಂಪದ ಆಧಾರದ ಮೇಲೆ ಹೀರೋ ಆಗಿ ಮತ್ತೆ ಜನಮಾನಸದಲ್ಲಿ ಮೂಡಿಬರುತ್ತಾರೆ ಎಂಬ ಕಾರಣಕ್ಕಾಗಿ ದೆಹಲಿ ನಾಯಕರು ಯಡ್ಡಿಯ ಆಟವನ್ನು ಸಹಿಸುತ್ತಾ ಕುಳಿತಿದ್ದಾರೆ. ಇದೇ ಹೊತ್ತಿಗೆ ದೆಹಲಿಯ ಚೆಡ್ಡಿ ನಾಯಕರೇ ತನ್ನನ್ನು ತೆಗೆದುಹಾಕಲಿ ಎಂಬ ಕಾರಣಕ್ಕಾಗಿ ಯಡ್ಡಿ ಆಗಾಗ್ಗೆ ಗುರುಗುಟ್ಟುತ್ತಾ ಇದ್ದಾರೆ. ಈಗ ಈ ಎಪಿಸೋಡ್ ಅನ್ನು ಹೇಗಾದರೂ ಮಾಡಿ ಮುಗಿಸಲೇಬೇಕಾದ ಅನಿವಾರ್ಯತೆ ಇಬ್ಬರಿಗೂ ಎದುರಾಗಿದೆ ಎಂದೇ ಹೇಳಬಹುದು.



ಮುಖ್ಯಮಂತ್ರಿ ಹುದ್ದೆಯನ್ನು ತನ್ನಿಂದ ಬಲವಂತವಾಗಿ ಕಸಿದುಕೊಂಡ ಮತ್ತು ಇದೀಗ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ಕೂಡಾ ಕೊಡಲು ಮೀನಾಮೇಷ ಎಣಿಸುತ್ತಿರುವ ದೆಹಲಿ ನಾಯಕರ ವರ್ತನೆ ವಿರುದ್ಧ ಒಳಗೊಳಗೆ ಕೊತಕೊತನೆ ಕುದಿಯುತ್ತಿರುವ ಯಡ್ಡಿ ಯಾವುದೇ ಸಂದರ್ಭದಲ್ಲಿ ಬಹಿರಂಗವಾಗಿ ಅಂತಿಮವಾದ ಬಂಡಾಯದ ಬಾವುಟ ಹಾರಿಸುವ ಸಾಧ್ಯತೆ ಇದೆ ಎಂದೇ ಅವರ ಶಿಷ್ಯರು ಹೇಳುತ್ತಿದ್ದಾರೆ.

ಮೊನ್ನೆ ಈಶ್ವರಪ್ಪನವರು ಯಡ್ಡಿಯ ರೆಕ್ಕೆಪುಕ್ಕ ಕತ್ತರಿಸಿದಾಗಲೇ ಹೈಕಮಾಂಡ್ ಭಿನ್ನಮತವನ್ನು ಮಟ್ಟಹಾಕಲು ದೃಢ ನಿರ್ಧಾರ ತೆಗೆದುಕೊಂಡಿದೆ ಎಂಬ ಸಿಗ್ನಲ್ ಪಕ್ಷದವರಿಗೆ ದೊರಕಿತ್ತು. ಇಲ್ಲದಿದ್ದರೆ ಯಡ್ಡಿಯ ಪರಮಾಪ್ತರಾದ ಧನಂಜಯ್ ಕುಮಾರ್ ಮತ್ತು ಆಯನೂರು ಮಂಜುನಾಥ್ ಅವರನ್ನು ಏಕಾಏಕಿ ಸಸ್ಪೆಂಡ್ ಮಾಡಲು ಈಶ್ವರಪ್ಪನವರಿಗೆ ಧೈರ್ಯ ಎಲ್ಲಿಂದ ತಾನೇ ಬರಬೇಕು? ಈ ತರಹ ಶಿಸ್ತಿನ ಕ್ರಮ ಕೈಗೊಳ್ಳುವ ಮುಖಾಂತರ ಬಿಜೆಪಿ ಪಕ್ಷಕ್ಕೆ ಹೋದ ಮಾನವನ್ನು ಮತ್ತೆ ತಂದುಕೊಡುವ ಯೋಜನೆ ಕೂಡಾ ಇದೆಯಂತೆ.

ಈ ಎಲ್ಲಾ ಬೆಳವಣಿಗೆಗಳು ಈಗ ಹಲವಾರು ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಯಡ್ಡಿ ಪಕ್ಷಕ್ಕೆ ಗುಡ್‌ಬೈ ಹೇಳಿದರೆ ಸರ್ಕಾರ ಪತನವಾಗುವುದು ಶತಸಿದ್ಧ. ಅಂತಹ ಅಪಾಯವನ್ನು ದೆಹಲಿ ನಾಯಕರು ಹೇಗೆ ಎದುರಿಸುತ್ತಾರೆ ಎಂಬುದು ಮುಖ್ಯವಾಗುತ್ತದೆ. ಅದೇರೀತಿ ಯಡ್ಡಿ ನಿರ್ಗಮನದ ನಂತರ ಉಂಟಾಗುವ ಶೂನ್ಯತೆಯನ್ನು ಹೇಗೆ ತುಂಬಿಸುತ್ತಾರೆ? ಮುಂದೆ ಅಧ್ಯಕ್ಷರಾಗಿ ಬರಬಹುದಾದ ಪ್ರಹ್ಲಾದ್ ಜೋಶಿಯಾಗಲಿ ಅಥವಾ ನವೀನ್ ಕುಮಾರ್ ಕಟೀಲ್ ಆಗಲಿ, ಇವರಿಬ್ಬರು ಆರೆಸ್ಸೆಸ್ ಮೂಲದವರಾಗಿರಬಹುದು ಆದರೆ ಅವರು ಯಾವ ಕಾರಣಕ್ಕೂ ಜನಪ್ರಿಯ ನಾಯಕರಂತೂ ಅಲ್ಲವೇ ಅಲ್ಲ. ಪಕ್ಷವನ್ನು ಮತ್ತೆ ಕಟ್ಟುವಂತಹ ಲೀಡರ್‌ಶಿಪ್ ಗುಣವೂ ಇವರಿಬ್ಬರಲ್ಲಿ ಇಲ್ಲವೇ ಇಲ್ಲ. ಜೊತೆಗೆ ಇವರಿಬ್ಬರಿಗೂ ಪ್ರಬಲವಾದ ಜನಾಂಗದ ಬೆಂಬಲವೂ ಇಲ್ಲ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕರ್ನಾಟಕ ಬಿಜೆಪಿ ಪಕ್ಷ ಸಿಲುಕಿಕೊಂಡಿದೆ. ಹೀಗಾಗಿ ಯಡ್ಡಿಯನ್ನು ಭ್ರಷ್ಟಾಚಾರದ ನೆಪ ಮುಂದಿಟ್ಟು ಮೂಲೆಗುಂಪು ಮಾಡುತ್ತಿರುವ ದೆಹಲಿ ನಾಯಕರು ಆ ಮೂಲಕ ಕರ್ನಾಟಕ ಬಿಜೆಪಿಯನ್ನೂ ಮೂಲೆಗುಂಪು ಮಾಡುತ್ತಿದ್ದಾರೆ ಎಂಬುದೂ ನಿಜ. ಅವರ ಮನಸ್ಸು ಈಗ ದೆಹಲಿ ಗದ್ದುಗೆಯ ಮೇಲಿದೆ. ಹೀಗಾಗಿ ಕರ್ನಾಟಕ ಮತ್ತು ಯಡ್ಡಿ ಅವರ ಪಾಲಿಗೆ ನಗಣ್ಯವಾಗಿದೆ.

ತಾನು ಕಳೆದ ಮೂರು ದಶಕಗಳಿಂದ ರಾಜ್ಯಾದ್ಯಂತ ಪ್ರವಾಸ ಮಾಡಿ ಅಧಿಕಾರಕ್ಕೆ ತಂದ ಪಕ್ಷವನ್ನು ಯಡ್ಡಿ ಈಗ ಸ್ವತಃ ತಾವೇ ಕತ್ತು ಹಿಸುಕುತ್ತಾರೋ ಅಥವಾ ರಾಜಕೀಯ ಮುತ್ಸದ್ದಿತನ ತೋರಿಸಿ ಸರಕಾರವನ್ನು ಉಳಿಸುತ್ತಾರೋ ನೋಡಬೇಕು.

● ಶೆಣೈ



# ದರ್ಶನ್ ಕೈವಾಡ ಎಷ್ಟು ನಿಜ?

# ಯಶ್! ಬುಸ್!! ಠುಸ್!!!

ರಾ. ಸೋಮನಾಥ್



"ಇಲಿಯೆಂದು ಗೊತ್ತಿದ್ದೂ ಹುಲಿ ಎಂದವನೊಬ್ಬ, ಇದು ಹುಲ್ಲು ತಿನ್ನೋ ಹುಲಿ ಎಂದವನು ಮತ್ತೊಬ್ಬ, ಹುಲಿ ವೇಷದ ಇಲಿ ಮೇಲೆ ಸವಾರಿಗೆ ಹೊಂಟವನು ಮಗದೊಬ್ಬ....!

ಯಶ್ ಎಂಬ 'ಘಮಂಡಿ' ನಟನ ವಂಚಕ ವೃತ್ತಾಂತದ ಕುರಿತಂತೆ ಕಳೆದ ಮೂರು ದಿನಗಳಿಂದ ಕನ್ನಡದ ನ್ಯೂಸ್ ಚಾನಲ್ಲುಗಳು ಬಿತ್ತರಿಸುತ್ತಿರುವ ವಾದ ಪ್ರತಿವಾದಗಳ 'ತನಿಖಾ' ವರದಿಯ ಕುರಿತಂತೆ ಮೇಲಿನ ಮಾತಿಗಿಂತ ಪ್ರತಿಕ್ರಿಯೆ ಸಾಧ್ಯವೆ?

ಲಕ್ಷ ಕೋಟಿ ಮೊತ್ತದ ಗಣಿ ಲೂಟಿ ಕುರಿತಂತೆ ಕನ್ನಡದ ಯಾವ ನ್ಯೂಸ್ ಚಾನಲ್ಲುಗಳೂ ಕನಿಷ್ಠ ಗಂಟೆಯರ್ಧದ ತನಿಖಾ ವರದಿ ಬಿತ್ತರಿಸಲಿಲ್ಲ, ಬೆಂಗಳೂರು ಸುತ್ತಮುತ್ತಲ ಭೂಕಬಳಿಕೆಯನ್ನು ಕೆದಕ ಹೊರಟರೆ ವರ್ಷ ಪೂರ್ತಿ ಪ್ರಸಾರ ಮಾಡುವಷ್ಟು ಸರಕಿದ್ದರೂ ಯಾವೊಂದು ವಾಹಿನಿಗೂ ಅದು ಬೇಕಿಲ್ಲ, ಬಿಬಿಎಂಪಿಯ ಭೋಗಸ್ ಕಾಮಗಾರಿ ಲೂಟಿ, ನಿರಾಣಿಯ ಕೆಐಎಡಿಬಿ ಕೊಳ್ಳೆ, ನೆರೆಸಂತ್ರಸ್ತರ ಪುನರ್ವಸತಿ ಧಕಾಯಿತಿ, ಕಳಪೆ ಅಕ್ಕಿ ಖರೀದಿ ಹಗರಣ; ಹೀಗೆ ಟೀವಿ ವಾಹಿನಿಗಳಿಗೆ ಯಥೇಚ್ಛ ಸರಕು ಅವರ ಕಾಲಬುಡದಲ್ಲೇ ಬಿದ್ದಿದ್ದರೂ ಯಾರೋ ನಟನೊಬ್ಬ ತನ್ನ ಬಾಲ್ಯದಲ್ಲಿ ಚಿಡ್ಡಿ ತೊಟ್ಟು ಸೈಕಲ್ಲೇರಿ ಚೀಟಿ ದುಡ್ಡು ತಂದು ತನ್ನ ತಾಯಿಗೆ ಕೊಟ್ಟ ತಪ್ಪಿಗೆ ಈಗ ದಿನಗಟ್ಟಲೇ ಟೀವಿ ಸ್ಟುಡಿಯೋಗಳಲ್ಲಿ ಕೂತು 'ಸಮಜಾಯಿಷಿ' ಕೊಡಬೇಕಾದ ದುರ್ಗತಿಗೆ ಏನೆನ್ನಬೇಕು?

ಎತ್ತಿಂದೆತ್ತ ನೋಡಿದರೂ ಯಶ್ ಎಂಬ ಯಕಶ್ಚಿತ್ ನಟನ 'ಚೀಟಿ ಫಜೀತಿ'ಯ ಹಿಂದಿರುವುದು ಬರಗೆಟ್ಟ ನ್ಯೂಸ್ ಚಾನಲ್ಲುಗಳ ಟಿಆರ್‌ಪಿ ದುರಾಶೆ ಮಾತ್ರ. ಇಡೀ ಪ್ರಕರಣ ಎಷ್ಟೊಂದು ಕ್ಷುಲ್ಲಕ ಮತ್ತು ಹಾಸ್ಯಾಸ್ಪದವೆಂದರೆ-ಇಲ್ಲಿ ಏನೊಂದಕ್ಕೂ ದಾಖಲೆಯಿಲ್ಲ, ಹೇಳಿಕೇಳಿ ಇದು ನಡೆದದ್ದು 10 ವರ್ಷಗಳ ಹಿಂದೆ. ಆಗಿನ್ನೂ ಯಶ್ ಎಂಬ ನಟ ಬುದ್ಧಿ ಬಲಿಯದ ಬಾಲಕ. ಆತನ ತಾಯಿ ಚೀಟಿ ನಡೆಸುತ್ತಿದ್ದದ್ದು, ತಾಯಿ ನಡೆಸುತ್ತಿದ್ದ ಚೀಟಿಗೆ ಬಾಲಕ ಯಶ್ ಹೋಗಿ ನಾನೂರೋ, ಐನೂರೋ ರೂಪಾಯಿಯ ಕಂತಿನ ಮೊತ್ತ ತರುತ್ತಿದ್ದದ್ದು, ಹಾಗೆ ಕಟ್ಟಿದ ಚೀಟಿ ಮೊತ್ತದ ಸಮೇತ ಯಶ್ ಕುಟುಂಬ ಮೈಸೂರು ತೊರೆದದ್ದು, ಇದಾಗಿ ಹತ್ತು ವರ್ಷಗಳ ನಂತರ ಕಂತು ಕಟ್ಟಿದವರಿಗೆ ಜ್ಞಾನೋದಯವಾಗಿ ವಸೂಲಿಗೆ ನಿಂತದ್ದು, ದುಡ್ಡು ಕಳೆಕೊಂಡವರ ಪರವಹಿಸಿ ಅರಸೀಕೆರೆಯ ಯಡವಟ್ಟು ಋಷಿಕುಮಾರ ಸ್ವಾಮಿ ಬೀದಿಗಿಳಿದದ್ದು ಮತ್ತು ಈ ಬಗ್ಗೆ ನ್ಯೂಸ್ ಚಾನಲ್ಲುಗಳಲ್ಲಿ ದಿನಗಟ್ಟಲೇ ಆರೋಪ-ಪ್ರತ್ಯಾರೋಪಗಳ ಹಂಗಾಮಾ ಶುರುವಾಗಿದ್ದು ಮೇಲುನೋಟಕ್ಕೆ ನಾಟಕೀಯ ಕುಚೋದ್ಯದಂತೆ ಕಂಡರೂ ಆಳದಲ್ಲಿ ಇನ್ನೇನೋ ಇರುವಂತಿದೆ.

ಸೆಪ್ಟೆಂಬರ್ 24 ರ ಬೆಳಗ್ಗೆ ಏಕಾಏಕಿ ಭಟ್ಟರ ಟೀವಿಯಲ್ಲಿ ಯಶ್ ಪುರಾಣದ ಬ್ರೇಕಿಂಗ್ ನ್ಯೂಸ್(!) ಶುರುವಾಗುತ್ತದೆ. ಪ್ರಕರಣದ ಸಾರಾಂಶವಿಷ್ಟೆ. ಯಶ್ ತಂದೆ ಮಣಿ ಅಲಿಯಾಸ್ ಅರುಣ್‌ಕುಮಾರ್ ಇಲ್ಲಿಗೆ ಹತ್ತು ವರ್ಷದ ಹಿಂದೆ ಕೆಎಸ್‌ಆರ್‌ಟಿಸಿ ಡ್ರೈವರ್ ಆಗಿದ್ದಾಗ ಮೈಸೂರಿನ ಪಡುವಾರಹಳ್ಳಿಯಲ್ಲಿ ಮನೆ ಮಾಡಿಕೊಂಡಿದ್ದರಂತೆ. ಯಶ್ ಆಗಿನ್ನೂ ಪುಟ್ಟ ಬಾಲಕ. ಶುರುವಿನಲ್ಲಿ



ಪಡುವಾರಹಳ್ಳಿಯ ಅರಳಿಮರದ ಸರ್ಕಲ್ಲಿನಲ್ಲಿ ಬಾಡಿಗೆಗೆ ಮನೆ ಹಿಡಿದ ಯಶ್ ತಂದೆ ಆನಂತರ ಕೆಲಕಾಲ ಹೆಬ್ಬಾಳದಲ್ಲಿ ವಾಸಿಸಿ ತದನಂತರ ಪಡುವಾರಹಳ್ಳಿಯ ಐದನೇ ಮೇನ್‌ನ ವಠಾರಕ್ಕೆ ಬಾಡಿಗೆಗೆ ಬರುತ್ತಾರೆ.

ಅಲ್ಲಿ ಯಶ್ ತಾಯಿ ಪುಷ್ಪಾ ದಿನಸಿ ಅಂಗಡಿಯೊಂದನ್ನು ತೆರೆಯುತ್ತಾರೆ. ದಿನಸಿ ಅಂಗಡಿಗೆ ಬರುವವರು, ಅದೇ ಏರಿಯಾದ ಕೆಲ ಮಹಿಳೆಯರನ್ನು ಸೇರಿಸಿಕೊಂಡ ಪುಷ್ಪಾ ಚೀಟಿ ಆರಂಭಿಸುತ್ತಾರೆ. ಈ ಮಧ್ಯೆ ಚೀಟಿ ಎತ್ತಿದ ಕೆಲವರು ದುಡ್ಡು ಕಟ್ಟದೇ ಪರಾರಿಯಾದ್ದರಿಂದ ಫಜೀತಿಗೆ ಬಿದ್ದ ಡ್ರೈವರ್ ಮಣಿ ಕುಟುಂಬ ಸಮೇತ ಪರಾರಿಯಾಗುತ್ತಾರೆ. ಇದಾಗಿ ಹತ್ತು ವರ್ಷದ ನಂತರ ಚೀಟಿ ಕಟ್ಟಿದ ಪಡುವಾರಹಳ್ಳಿಯವರಿಗೆ ಗೊತ್ತಾಗಿದ್ದು ಕನ್ನಡದ ಉದಯೋನ್ಮುಖ ಹೀರೋ ಯಶ್ ಬೇರೆ ಯಾರೂ ಅಲ್ಲ, ತಮ್ಮಿಂದ ಕಂತು ಕಲೆಕ್ಷನ್ನಿಗೆ ಬರುತ್ತಿದ್ದ ನವೀನ್‌ಕುಮಾರ್!

ತಾಯಿ ಪಡುವಾರಹಳ್ಳಿಯಲ್ಲಿ ಚೀಟಿ ನಡೆಸುತ್ತಿದ್ದಾಗ ಯಶ್ ಒಂಟಿಕೊಪ್ಪಲಿನ ಮಹಾಜನ ಶಾಲೆಯಲ್ಲಿ ಆರನೇ ಕ್ಲಾಸೋ ಏಳನೇ ಕ್ಲಾಸೋ ಓದುತ್ತಿದ್ದ ಬಾಲಕ. ಅದೇ ಶಾಲೆಯಲ್ಲಿ ಟೀಚರ್ ಆಗಿದ್ದದ್ದು ಹಾಸ್ಯನಟ ಮೈಸೂರು ಲೋಕೇಶ್ ಪತ್ನಿ ಪಾರ್ವತಿ ಲೋಕೇಶ್. ಆಕೆ ತಿಂಗಳಿಗೆ 400 ರೂಪಾಯಿಯಂತೆ ತಲಾ ಹನ್ನೆರಡೂವರೆ ಸಾವಿರ ಎರಡು ಚೀಟಿ ಕಟ್ಟಿದ್ದರಂತೆ. ಆ ಮೊತ್ತ 25 ಸಾವಿರವಷ್ಟೇ. ಇದಲ್ಲದೆ ಪಡುವಾರಹಳ್ಳಿಯಲ್ಲಿ ಟೈಲರಿಕೆ ಮಾಡಿಕೊಂಡಿದ್ದ ಗೋಪಾಲನ ಪತ್ನಿ ರಾಜೇಶ್ವರಿ ಕೈಸಾಲವಾಗಿ ಯಶ್ ತಾಯಿಗೆ ಕೊಟ್ಟಿದ್ದ 7 ಸಾವಿರ, ಟೈಲರ್ ಗೋಪಾಲ್ ಚೀಟಿಗೆಂದು ಕಟ್ಟಿದ್ದ 10 ಸಾವಿರ, ಕೃಷ್ಣೇಗೌಡನ ಪತ್ನಿ ಸರಸ್ವತಿಯ ಹನ್ನೆರಡೂವರೆ ಸಾವಿರ, ಸುಶೀಲ ಎಂಬಾಕೆ ತನ್ನ ತಮ್ಮ ಮತ್ತು ಮಗನ ಹೆಸರಲ್ಲಿ ಕಟ್ಟಿದ 30 ಸಾವಿರ; ಎಲ್ಲಾ ಸೇರಿದರೆ ಆ ಮೊತ್ತ 84.5 ಸಾವಿರವನ್ನು ದಾಟುವುದಿಲ್ಲ.

ಇನ್ನೂ ಹೆಚ್ಚೆಂದರೆ ಟೀವಿ ವರದಿಗಾರರಿಗೆ ಹೇಳಲಿಚ್ಛಿಸದವರು, ಬಹಿರಂಗವಾಗಿ ಹೇಳಿಕೊಳ್ಳಲಾಗ... ದವರೆಲ್ಲರ ಮೊತ್ತ ಸೇರಿದರೆ ಯಶ್ ತಾಯಿ ಪುಷ್ಪಾ ಕೊಡಬೇಕಾದ ಬಾಕಿ ಚೀಟಿ ದುಡ್ಡಿನ ಒಟ್ಟು ಮೊತ್ತ ಒಂದು ಲಕ್ಷವೋ ಅಥವಾ ಒಂದೂವರೆ ಲಕ್ಷವೋ ಇದ್ದೀತು. ಈ ಮೊತ್ತಕ್ಕೆ ಹತ್ತು ವರ್ಷದ ಬಡ್ಡಿ ಸೇರಿಸಿದರೂ ಅದು ಎರಡು ಲಕ್ಷದಷ್ಟಾದೀತು. ಮೈಸೂರು ಲೋಕೇಶ್ ಪತ್ನಿ ಪಾರ್ವತಿಗಿದು ದೊಡ್ಡ ಮೊತ್ತವಲ್ಲ, ಹಾಗೇ ಹೋಗಿ ಕೇಳಿದ್ದರೆ ಎರಡೋ ಮೂರೋ ಲಕ್ಷ ಕೊಡವುದು ನಟ ಯಶ್‌ಗೆ ದೊಡ್ಡ ಮಾತೇನಲ್ಲ. ಬಹುಶಃ ಈ ಪಾಟಿ ರಾದ್ಧಾಂತವಾಗುತ್ತದೆ ಎಂದು ಗೊತ್ತಿದ್ದರೆ ಯಶ್ ಯಾವತ್ತೋ ಕೊಟ್ಟು ಕೈತೊಳೆದು ಕೊಳ್ಳುತ್ತಿದ್ದನೇನೊ.

ಯಡವಟ್ಟಾಗಿದ್ದು ಟೈಲರ್ ಗೋಪಾಲನಿಂದ. ಇಲ್ಲಿಗೆ ... ತಿಂಗಳ ಹಿಂದೆ ಪಾಂಡವಪುರದ ಚಿಕ್ಕಾಡೆ ಬಳಿ ಶೂಟಿಂಗ್‌ನಲ್ಲಿದ್ದ ಯಶ್‌ನನ್ನು ಏಕಾಏಕಿ ಅಟಕಾಯಿಸಿ ಕೊಂಡ ಟೈಲರ್ ಗೋಪಾಲ ನೆರೆದ ಜನ, ಶೂಟಿಂಗ್ ಹುಡುಗರು ಮತ್ತು ಡೈರೆಕ್ಟರ್ ಎದುರಿಗೇ ವಾಚಾಮಗೋಚರ ಹೀಯಾಳಿಸಿ 'ಮಡಗಯ್ಯಾ.... ನನ್ನ ದುಡ್ಡು.....' ಎಂದು ರಾದ್ಧಾಂತ ಮಾಡಿಬಿಟ್ಟ. ಯಾವುದೋ ಕಾಲಕ್ಕೆ ಚೀಟಿ ನಡೆಸುತ್ತಿದ್ದ ತನ್ನ ತಾಯಿ ಯಾರ್‍ಯಾರಿಗೆ ಬಾಕಿ ಕೊಡಬೇಕೆಂಬುದು ಯಶ್‌ಗೆಲ್ಲಿ ಗೊತ್ತಾಗಬೇಕು? ತಿರುಗಿಬಿದ್ದ ಯಶ್ 'ನೀನ್ಯಾರೋ ಗೊತ್ತೇ ಇಲ್ಲ.. ಗೆಟ್‌ಔಟ್' ಎಂದು ದಬ್ಬಿಬಿಟ್ಟ. ಬಹುಶಃ ಟೈಲರ್ ಗೋಪಾಲ ಕುಡಿದು ಯಶ್‌ನನ್ನು ದಬಾಯಿಸಿದ್ದೇ ಆತನ ಸಿಟ್ಟಿಗೆ ಕಾರಣವಾಗಿರಬೇಕು. ಇದರಿಂದ ಇನ್ನಷ್ಟು ಜಿದ್ದಿಗೆ ಬಿದ್ದ ಗೋಪಾಲ ಪಡುವಾರಹಳ್ಳಿಗೆ ಬಂದಿದ್ದೇ ಹತ್ತು ವರ್ಷದ ಹಿಂದಿನ ಚೀಟಿದಾರರನ್ನು ಎತ್ತಿಕಟ್ಟಲಾರಂಭಿಸಿದ್ದಾನೆ. ಈ ಹಂತದಲ್ಲಿ ಆತನಿಗೆ ಸಿಕ್ಕವನು ಆದಿ ಲೋಕೇಶ್!

ಮರೆತೇಹೋಗಿದ್ದ ಚೀಟಿ ವೃತ್ತಾಂತಕ್ಕೆ ಜೀವ ಬಂದಿದೆ. ಆದಿ ಲೋಕೇಶ್ ತಾಯಿ ಪಾರ್ವತಿ ಲೋಕೇಶ್‌ಗೂ ಬಾಲಕ ನವೀನ್ ಕನ್ನಡದ ಹೀರೋ ಆಗಿರುವ ಬಗ್ಗೆ ವಿಲಕ್ಷಣ ಕುತೂಹಲ. ಮಗನನ್ನು ಮುಂದೆ ಬಿಟ್ಟು ಕೇಳಿಸಿದ್ದಾರೆ. ಯಶ್ ನನಗೇನೂ ಗೊತ್ತೇ ಇಲ್ಲ ಎಂದಿದ್ದಾನೆ.

▶12

## ಯಶ್ ಕಂಡರೆ ಎಲ್ಲರಿಗೂ ಏಕಿಷ್ಟು ದ್ವೇಷ?

ಗಾಂಧಿನಗರದ ಮಟ್ಟಿಗೆ ಸದ್ಯ ಹೆಚ್ಚು ದ್ವೇಷಿಸಲ್ಪಡುವ ಹೀರೋ ಯಾರು?

ಹೀಗೊಂದು ಪ್ರಶ್ನೆಯಿಟ್ಟರೆ ಮೊದಲು ಕೇಳಿಬರುವುದು ಯಶ್. ಏಕೆಂದರೆ ಯಶ್ ಬೆಳೆದುನಿಂತ ಬೇರೆಲ್ಲ ಹೀರೋಗಳಿಗೆ ಹೋಲಿಸಿದರೆ ಜ್ಯೂನಿಯರ್ ಮೋಸ್ಟ್ ಮತ್ತು ರೀಚೇಬಲ್. ದರ್ಶನ್ ಕಾಲ್‌ಶೀಟ್ ಸಿಗದವರು, ಸುದೀಪ್ ಕೈಗೆಟುಕದವರು, ಕಲ್ಪನೆಗೂ ಪುನೀತ್ ಸಿಲುಕದವರು, ದುನಿಯಾ ವಿಜಿ, ಯೋಗೀಶ್, ಅಜಯ್ ರಾವ್ ಇತ್ಯಾದಿಗಳ ರೇಟು ಭರಿಸದವರೆಲ್ಲ ಸಹಜವಾಗೇ ನೋಡುವುದು ಯಶ್‌ನತ್ತ.

ಆದರೆ ಯಶ್ ಈಗ ಹಿಂದಿನಂತಿಲ್ಲ. ಮೊದಲಿದ್ದ ವಿನಯ, ವಿನಮ್ರತೆ, ಸೌಜನ್ಯ ಯಾವುದೂ ಆತನಲ್ಲುಳಿದಿಲ್ಲ, ಪ್ರತಿಯೊಂದಕ್ಕೂ ತನ್ನದೇ ಷರತ್ತು ವಿಧಿಸುತ್ತಾನೆ. ಅದು ಯಾವ ಮಟ್ಟಕ್ಕೆಂದರೆ; ಪೋಸ್ಟರ್, ಜಾಹೀರಾತಿನಲ್ಲಿ ತಾನೇ ಮಿಂಚಬೇಕು, ಶೂಟಿಂಗ್ ವೇಳೆ ಇಂಥ ಹೋಟೆಲಿನದೇ ಊಟ ಬೇಕು, ತನ್ನ ಜೊತೆ ಬರುವ ಗೆಳೆಯರಿಗೂ ರಾಜಾತಿಥ್ಯ, ಇಂಥದ್ದೇ ಕಾರು ಮತ್ತು ಪ್ರಚಾರಕ್ಕೆಂದೇ ಪ್ರತ್ಯೇಕವಾಗಿ ಲಕ್ಷಗಟ್ಟಲೇ ಕೊಡಬೇಕು!

ಒಬ್ಬ ಹೀರೋ ತನ್ನ ಇಮೇಜಿನ ಗುಣಮಟ್ಟ ಕಾಯ್ದುಕೊಳ್ಳಲು ನಡೆಸುವ ವ್ಯವಸ್ಥೆಯಂತೆ ಇದೆಲ್ಲ ಕಂಡುಬಂದರೂ ಸದ್ಯ ಕನ್ನಡದ ಚಿತ್ರ ನಿರ್ಮಾಪಕರಿಗಿದು ಒಗ್ಗುತ್ತಿಲ್ಲ, ಶುರುವಿನಲ್ಲಿ ವಿನುಬಳಂಜನ ಪ್ರೀತಿ ಇಲ್ಲದ ಮೇಲೆ ಸೀರಿಯಲ್ಲಿನಲ್ಲಿ ಅನಂತ್‌ನಾಗ್ ಮಗನಾಗಿ ಈಟೀವಿಯಲ್ಲಿ ಗಮನ ಸೆಳೆದ ಯಶ್‌ನನ್ನು ಹೀರೋ ಪಟ್ಟಕ್ಕೇರಿಸಿದ್ದು ಜಂಬದ ಹುಡುಗಿ ಪ್ರಿಯಾಹಾಸನ್. ಮೂಲತಃ ಹಾಸನದ ಯಶ್ ಜಾತಿಯಲ್ಲಿ ಒಕ್ಕಲಿಗನಾದ್ದರಿಂದ ಜಾತಿ ಮತ್ತು ಊರಿನ ಅಭಿಮಾನದ ಮೇಲೆ ಪ್ರಿಯಾಹಾಸನ್ ಅವಕಾಶ ಕೊಟ್ಟಿದ್ದರೂ ಅದಕ್ಕೆ ಯಶ್ ಋಣಿಯಾಗಿರಬೇಕಿತ್ತು.

ಆದರೆ ಅಪ್ಪಿತಪ್ಪಿಯೂ ಯಶ್ ತನ್ನನ್ನು ಹೀರೋ ಮಾಡಿದ ಪ್ರಿಯಾ ಹಾಸನ್ ಬಗ್ಗೆ ಕೃತಜ್ಞತೆಯ ಮಾತಾಡಿಲ್ಲ, ಜಂಬದ ಹುಡುಗಿ ನಂತರ ಬಿಬಿಎಂಪಿಯ ಪೀಣ್ಯದ ಕೌನ್ಸಿಲರ್ ಕೆ.ಎಲ್. ತಿಮ್ಮನಂಜಯ್ಯ ಕರೆದು 'ರಾಖಿ' ಚಿತ್ರಕ್ಕೆ ಹೀರೋ ಮಾಡಿದರೆ ಯಶ್ ಅವರಿಗೂ ಕೈಕೊಟ್ಟ, ರಾಖಿಯಿಂದಾಗಿ ಸರಿಸುಮಾರು ಒಂದೂವರೆ ಕೋಟಿ ಕಳಕೊಂಡಿದ್ದಕ್ಕೆ ಪ್ರತಿಯಾಗಿ 10 ಲಕ್ಷ ಪಡೆದು ಇನ್ನೊಂದು ಕಾಲ್‌ಶೀಟ್ ಕೊಟ್ಟು ಮುಂಗಾರು ಮಳೆ ಕೃಷ್ಣಪ್ಪನ 'ಮೊಗ್ಗಿನ ಮನಸ್ಸು' ಚಿತ್ರದಲ್ಲಿ ಬಿಜಿಯಾದ. ಆನಂತರವಾದರೂ ಶೂಟಿಂಗಿಗೆ ಬಾ ಎಂದರೆ ಈಗ ನನ್ನ ಸ್ಟಾರ್‌ವ್ಯಾಲ್ಯೂ ಹೆಚ್ಚಾಗಿದೆ 20 ಲಕ್ಷ ಕೊಡಿ ಎಂದ. ಇದರ ವಿರುದ್ಧ ತಿಮ್ಮನಂಜಯ್ಯ 2011 ರ ನವೆಂಬರ್‌ನಲ್ಲೇ ನಿರ್ಮಾಪಕರ ಸಂಘಕ್ಕೆ ದೂರು ಕೊಟ್ಟರು.

ಇದಾದನಂತರ ಖ್ಯಾತ ನಿರ್ದೇಶಕ ಕೆ.ವಿ. ರಾಜು 'ರಾಜಧಾನಿ'ಗೆಂದು ಯಶ್‌ನನ್ನು ಹಾಕಿಕೊಂಡರೆ ಅಲ್ಲೂ ಯಶ್ ಕ್ಯಾತೆ ತೆಗೆದ. ಪ್ರಚಾರದಲ್ಲಿ ತನ್ನ ಫೋಟೋ ಅನ್ನೇ ಹೈಲೈಟ್ ಮಾಡಬೇಕೆಂದು ಕೊಂಕು ತೆಗೆದ. ಅದು ಯಾವ ಮಟ್ಟಕ್ಕೆಂದರೆ ಚಿತ್ರದ ಪ್ರೊಮೋಷನ್‌ಗೇ ಚಕ್ಕರ್ ಹಾಕಿ ರಾಜಧಾನಿ ಇನ್ನೂ ಥೇಟರಿನಲ್ಲಿದ್ದಾಗಲೇ ತನ್ನದೇ ಮತ್ತೊಂದು ಚಿತ್ರ ಕಿರಾತಕವನ್ನು ರಿಲೀಸ್ ಮಾಡಿಸಿಬಿಟ್ಟ. ಇದರ ಫಲವಾಗಿ ಚೆನ್ನಾಗೇ ಓಡುತ್ತಿದ್ದ ರಾಜಧಾನಿಯ ಗಳಿಕೆ ಕುಸಿಯಿತು. ನೊಂದ ಕೆ.ವಿ. ರಾಜು ಕಣ್ಣೀರಿಟ್ಟರು.

ನಂತರ 'ಲಕ್ಕಿ' ಚಿತ್ರದಲ್ಲೂ ಯಶ್‌ನ ಇದೇ ಚಾಳಿ ಮುಂದುವರಿಯಿತು. ಶೂಟಿಂಗ್‌ಗೆ ಚಕ್ಕರ್, ಜೊತೆ ಬಂದ ಗೆಳೆಯರ ಮೋಜು, ಪ್ರಚಾರಕ್ಕೆಂದು ಹೆಚ್ಚುವರಿ ದುಡ್ಡು ಇತ್ಯಾದಿಯಿಂದ ಹೈರಾಣಾದ ನಿರ್ಮಾಪಕಿ ರಾಧಿಕಾ ರೋಸತ್ತು ಕುಮಾರಸ್ವಾಮಿಯೆದುರು ಕಣ್ಣೀರಿಟ್ಟರು. ಕೊನೆಗೆ ಕುಮಾರಸ್ವಾಮಿ ತಾಳ್ಮೆಗೆಟ್ಟು ಮೊಂಡು ಬಿದ್ದ ಯಶ್‌ನನ್ನು







ಎಳೆದೊಯ್ದು ತಪರಾಕಿ ಕೊಟ್ಟಿದ್ದೂ ಸುದ್ದಿಯಾಯಿತು. ಇಷ್ಟೆಲ್ಲ ಗೊತ್ತಿದ್ದೂ ನಿರ್ಮಾಪಕ ಜಯಣ್ಣ ತನ್ನ 'ಡ್ರಾಮಾ'ಕ್ಕೆ ಯಶ್‌ನನ್ನೇ ಹಾಕಿಕೊಂಡರೆ ಅಲ್ಲಿ ಡೈರೆಕ್ಟರ್ ಯೋಗರಾಜ್ ಭಟ್‌ಗೂ ಯಶ್ ಕಾಟ ಕೊಟ್ಟ ಪುಕಾರೆದ್ದಿತು.

ಕೊನೆಗೆ ವಿಧಿಯಿಲ್ಲದೇ ಯೋಗರಾಜ್ ಭಟ್ ಚಿತ್ರದ ಕತೆಯನ್ನೇ ಬದಲಾಯಿಸಿ ಯಶ್‌ಗೆ ಪ್ರತಿಯಾಗಿ ನೀನಾಸಮ್ ಸತೀಶನ ಪಾತ್ರ ಸೃಷ್ಟಿಸಿ ಪಾಠ ಕಲಿಸಿದ್ದಾರೆಂಬುದೂ ಯಶ್ ವಿರುದ್ಧ ಆರೋಪ. ಯಶ್ ವಿಷಯದಲ್ಲೇ ಏಕೆ ಹೀಗಾಗುತ್ತಿದೆ? ಬೇರೆಲ್ಲ ಹೀರೋಗಳಿಗಿಂತಲೂ ಭಿನ್ನವಾಗಿ ಈತನಿಂದ ನಿರ್ಮಾಪಕರು ವಿಧೇಯತೆಯನ್ನು ನಿರೀಕ್ಷಿಸುತ್ತಿದ್ದಾರಾ? ಅದಕ್ಕೆ ಯಶ್ ಜಗ್ಗದೇ ಮೊಂಡು ಹಿಡಿಯುತ್ತಿದ್ದಾನಾ? ತನ್ನನ್ನು ಚೀಪ್ ಅಂಡ್ ಬೆಸ್ಟ್ ಎಂದು ಪರಿಗಣಿಸುವ ನಿರ್ಮಾಪಕರ ಜೊತೆ ಆತನಿಗೆ ಹೊಂದಾಣಿಕೆ ಸಾಧ್ಯವಾಗುತ್ತಿಲ್ಲವಾ? ಅಥವಾ ರಾತ್ರೋರಾತ್ರಿ ದಕ್ಕಿದ ಯಶಸ್ಸಿನ ಪಿತ್ಥ ನೆತ್ತಿಗೇರಿದೆಯಾ?

ಯಶ್ ಇನ್ನಾದರೂ ಬದಲಾಗಬೇಕು. ಆತನಿಗೆ ಟ್ಯಾಲೆಂಟ್ ಇದೆ, ಲುಕ್ ಇದೆ, ಜನರೂ ಇಷ್ಟಪಡುತ್ತಿದ್ದಾರೆ. ಆದರೆ ವಿನಾಕಾರಣ ಕಿರಿಕ್ ಮಾಡಿಕೊಂಡ ಯಾವೊಬ್ಬ ಹೀರೋ ಕೂಡ ಉದ್ಧಾರವಾಗಿಲ್ಲ, ಯಶಸ್ಸೆಂಬುದು ಸದಾ ಕಾಲಕ್ಕೂ ಜೊತೆಗಿರುವುದಿಲ್ಲ.

# ಳೆ ಬರುವವರೆಗೂ ಪರಿಹಾರವಾಗದ ಕಾವೇರಿ ಸಮಸ್ಯೆ

ಕಾವೇರಿ ವಿವಾದವೆಂಬ ಧಾರಾವಾಹಿಯ ಈ ಸಾರಿಯ ಕಂತು ಎಷ್ಟು ವಾಗಬಹುದು ಎಂಬುದನ್ನು ತೀರ್ಮಾನ ಮಾಡುವ ಒಂದೇ ಅಂಶ ಬೇಗ, ಎಷ್ಟು ಪ್ರಮಾಣದ ಮಳೆ ಬರುತ್ತದೆಂಬುದು ಮಾತ್ರ. ಬಹುಶಃ ನಿಮ್ಮ ಕೈಗೆ ತಲುಪಿರುವ ಈ ದಿನ (ಶುಕ್ರವಾರ) ಸುಪ್ರೀಂಕೋರ್ಟ್ ಳುನಾಡಿನ ಮನವಿಯ ಕುರಿತು ಏನಾದರೂ ತೀರ್ಪು ಪ್ರಕಟಿಸಬಹುದು. ಇಡೀ ಸಮಸ್ಯೆಗೆ ಇನ್ನೊಂದು ತಿರುವನ್ನು ನೀಡುತ್ತದೆಯೇ ಹೊರತು, ಹರಿಸುವುದು ಸಾಧ್ಯವೇ ಇಲ್ಲ. ಕಳೆದ 38 ವರ್ಷಗಳಲ್ಲಿ (1924ರ ದ ಕೊನೆಗೊಂಡ 1974ರಿಂದ) ಎಂದೂ ಸುಪ್ರೀಂಕೋರ್ಟ್ ಆಗಲೀ,



ನ ಮಂತ್ರಿಯ ಅಧ್ಯಕ್ಷತೆಯ ಕಾವೇರಿ ನದಿ ಪ್ರಾಧಿಕಾರವಾಗಲೀ, ಕೇಂದ್ರ ಸಂಪನ್ಮೂಲ ಇಲಾಖೆ ಕಾರ್ಯದರ್ಶಿಯ ನೇತೃತ್ವದ ಅಧಿಕಾರಿಗಳೇ ಇರುವ ೇರಿ ಉಸ್ತುವಾರಿ ಸಮಿತಿಯಾಗಲೀ, ಕಾವೇರಿ ನ್ಯಾಯಾಧೀಕರಣ ಬ್ಯುನಲ್)ವಾಗಲೀ ಈ ಸಮಸ್ಯೆಯನ್ನು ಬಗೆಹರಿಸಿಲ್ಲ.

ಸರಾಸರಿ 3-4 ವರ್ಷಗಳಿಗೊಮ್ಮೆ ಕಾವೇರಿ ಕಣಿವೆಯಲ್ಲಿ ನೀರಿನ ಕೊರತೆ ಟಾಗುತ್ತದೆ. ಹಾಗೆ ಕೊರತೆ ಉಂಟಾದ ಪ್ರತಿ ಬಾರಿಯೂ ಇದು ರಿಂದಲೂ ಬಗೆಹರಿಸಲಾಗದ ಕಗ್ಗಂಟಾಗಿಯೇ ತಲೆದೋರಿದೆ. ಆ ಆಷ್ಟೋ ಇಷ್ಟೋ ಮಳೆ ಬಂದರೆ ಮಾತ್ರ ವಿವಾದ ತಣ್ಣಗಾಗಿದೆ. ದರಾಜ ಅರಸರು ಮುಖ್ಯಮಂತ್ರಿಯಾಗಿದ್ದಾಗ ರೂಪಿತವಾದ 'ಮಾಸ್ಟರ್ ನ್' ಇನ್ನೇನು ಪರಿಹಾರ ಸೂತ್ರ ಸಿಕ್ಕೇ ಬಿಟ್ಟಿತು ಎಂಬಲ್ಲಿಗೆ ತಂದು ಸಿತ್ತು. ಆದರೆ ಅದು ಯಾವ್ಯಾವುದೋ ಕಾರಣಕ್ಕೆ ಒಪ್ಪಿಗೆಯಾಗಲಿಲ್ಲ. ನಂತರ ಕರ್ನಾಟಕದಲ್ಲಿ ಜೆ.ಎಚ್.ಪಟೇಲ್ ಮತ್ತು ತಮಿಳುನಾಡಿನಲ್ಲಿ ಕರುಣಾನಿಧಿ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇನ್ನೊಮ್ಮೆ ಎರಡೂ ಜ್ಯ ಸರ್ಕಾರಗಳು ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳುವ ಯತ್ನ ನಡೆದಿತ್ತು. ಆದರೆ ಇದ್ದುದರಲ್ಲಿ 'ಲಿಬರಲ್' ಆಗಿದ್ದ ಈ ಬ್ಬರು ಬಗೆಹರಿಸಿಬಿಡಬಹುದಾದಷ್ಟು ಸುಲಭಕ್ಕೆ ಕಣಿವೆಯ ವಾತಾವರಣ ದುಕೊಂಡಿರಲಿಲ್ಲ. ಅಂತಹ ವಾತಾವರಣ ನಿರ್ಮಿಸಬಹುದಾದಷ್ಟು ಅವರುಗಳು ಅಧಿಕಾರದಲ್ಲೂ ಇರಲಿಲ್ಲ. ಅವರಿಬ್ಬರ ಮುಂದಿನ ವಧಿಯಲ್ಲೇ (ಇಲ್ಲಿ ಎಸ್.ಎಂ.ಕೃಷ್ಣ ಅಲ್ಲಿ ಜಯಲಲಿತಾ) ಸಮಸ್ಯೆ ಮತ್ತೆ ರಕ್ಕೇರಿತು. ಆ ಅವಧಿಯಲ್ಲಿ 2001ರಿಂದ 2004ರವರೆಗೆ ಪ್ರತೀ ರ್ಷವೂ ಸಮಸ್ಯೆಯೇ.


ಕೃಷ್ಣಾ ನದಿ ನೀರಿನ ವಿಚಾರದಲ್ಲಿ ವಿವಾದವಿರುವುದು, ಇನ್ನೂ ಕೆಯಾಗಿರದ, ವ್ಯರ್ಥವಾಗಿ ಸಮುದ್ರಕ್ಕೆ ಪ್ರತೀ ವರ್ಷ ರಿದುಹೋಗುತ್ತಿರುವ 'ಹೆಚ್ಚುವರಿ' ನೀರನ್ನು ಹೇಗೆ ಹಂಚಿಕೊಳ್ಳಬೇಕೆಂಬುದರಲ್ಲಿ. ಕಾವೇರಿ ವಿಚಾರದಲ್ಲಿ ಸಮಸ್ಯೆಯಿರುವುದು ಸಂಪೂರ್ಣ ಬೇರೆ ರೀತಿಯಲ್ಲಿ. ಇಲ್ಲಿ 'ಸಾಮಾನ್ಯ' ವರ್ಷಗಳಲ್ಲಿ ಲಭ್ಯವಿರುವಷ್ಟು ನೀರಿಗೆ ಬೇಕಾದಷ್ಟು ಯೋಜನೆಗಳು ಈಗಾಗಲೇ ಬಿಟ್ಟಿವೆ. ಐತಿಹಾಸಿಕವಾಗಿ ವಸಾಹತುಶಾಹಿಗಳ ಕಾಲದಲ್ಲಿ ಆದ ನ್ಯಾಯದ ಕಾರಣದಿಂದ ತಮಿಳುನಾಡು ಮೇಲುಗೈ ಸಾಧಿಸಿ ಹೆಚ್ಚಿನ ಪ್ರಮಾಣದ ನೀರಾವರಿ ಮಾಡಿಕೊಂಡಿದೆ. ಇದಕ್ಕೆ ಪ್ರತಿಯಾಗಿ ಕರ್ನಾಟಕವು ರ ದಶಕದಲ್ಲಿ ಒಂದಷ್ಟು ಮತ್ತು 1974ರ ನಂತರ ಇನ್ನೂ ಒಂದಷ್ಟು ಗವನ್ನು ನೀರಾವರಿ ಮಾಡಿಕೊಂಡಿದೆ. ಆದರೂ ಸರಿಯಾದ ರೀತಿಯಲ್ಲಿ ನಿಕಾಗಿದ್ದರೆ' ಎಷ್ಟು ಪ್ರಮಾಣದ ನೀರನ್ನು ಕರ್ನಾಟಕವು ಪಡೆದುಕೊಳ್ಳಬಹುದಾಗಿತ್ತೋ, ಅಷ್ಟನ್ನು ಪಡೆದುಕೊಂಡಿಲ್ಲ. ಇರುವ ನಷ್ಟೇ ಯೋಜನೆಗಳನ್ನೂ ಸೀಮಿತಗೊಳಿಸಿಕೊಂಡಿಲ್ಲ. ಈಗಲೂ ಟೇಲೆಂಡ್ (ಟೈಲ್ ಎಂಡ್- ಕಾಲುವೆಗಳ ಕೊನೆ)ನ ರೈತರಿಗೆ ಸಾಮಾನ್ಯ ರ್ಷಗಳಲ್ಲೂ ನೀರು ಸಿಗುವುದಿಲ್ಲ. ಹೇಮಾವತಿ ಅಣೆಕಟ್ಟೆನಿಂದ ಆರ್.ಪೇಟೆ ಮತ್ತು ನಾಗಮಂಗಲ ತಾಲೂಕುಗಳಲ್ಲಿ ತೋಡಿರುವ ಲುವೆಗಳಲ್ಲಿ ನೀರು ಹರಿದು ಎಷ್ಟು ವರ್ಷಗಳಾದುವೋ? ಇಷ್ಟರ ೕಲೆ ಅವೈಜ್ಞಾನಿಕ ಬಳಕೆಯಿಂದ ಪೋಲಾಗುತ್ತಿರುವ ನೀರಿನ ಪ್ರಮಾಣ ಪ್ಪಷ್ಟು.


ಹೀಗಾಗಿ ಇಲ್ಲಿ ಸಮಸ್ಯೆಯಿರುವುದು ಲಭ್ಯವಿರುವ ನೀರಿನ ಪುನರ್‌ಹಂಚಿಕೆಯದ್ದು. ಈ ಪುನರ್‌ಹಂಚಿಕೆಗೆ ಸೂತ್ರವನ್ನು ರೂಪಿಸುವುದರಲ್ಲಿ ಎಲ್ಲಾ ಸರ್ಕಾರಗಳೂ ವಿಫಲವಾದ ಮೇಲೆ ಅಂತಿಮವಾಗಿ ಕೇಂದ್ರ ಸರ್ಕಾರದ ನಿರ್ದೇಶನದ ಮೇಲೆ ರಚಿತವಾದ ಕಾವೇರಿ ನ್ಯಾಯಾಧೀಕರಣದ ಮಧ್ಯಂತರ ತೀರ್ಪಿನ ಪ್ರಕಾರ ಕರ್ನಾಟಕವು ವರ್ಷದಲ್ಲಿ 10 ಟಿಎಂಸಿ ನೀರು ಬಿಡಬೇಕಾಗಿತ್ತು, ಅಂತಿಮ ತೀರ್ಪಿನಲ್ಲಿ ಷ್ಟನ್ನು 192 ಟಿಎಂಸಿಗಳಿಗೆ ಇಳಿಸಲಾಯಿತಾದರೂ, ಆದರಾಗಿ ಬಳಸಲಾಗಿರುವ ಮಾನದಂಡಗಳಲ್ಲಿ ಹಲವು ಸಮಸ್ಯಾತ್ಮಕವಾಗಿರುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತಿದೆ. ಐತಿಹಾಸಿಕವಾಗಿ ಹೆಚ್ಚು ಅನ್ಯಾಯಕ್ಕೊಳಗಾಗಿರುವ ಕರ್ನಾಟಕದ ಪರ ಸಕಾರಾತ್ಮಕ ತಾರತಮ್ಯದ

ನಿಯಮವನ್ನು ಪಾಲಿಸದೇ ಇರುವುದರ ಜೊತೆಗೆ, ಕೇರಳದ ಪಾಲಿನ ನೀರು ಮತ್ತು ಪರಿಸರದ ಸಮತೋಲನಕ್ಕಾಗಿ ನೀರನ್ನು ತಮಿಳುನಾಡಿನ ಪಾಲಾಗಿಸಿರುವುದು, ಬೆಂಗಳೂರಿಗೆ ಕುಡಿಯುವ ನೀರನ್ನು ಒದಗಿಸಲು ಅಳವಡಿಸಲಾದ ತಪ್ಪು ಮಾನದಂಡ ಇತ್ಯಾದಿಗಳ ಕಾರಣಗಳಿಂದ ಅಂತಿಮ ತೀರ್ಪನ್ನು ಸರಿ ಎಂದು ಒಪ್ಪಲಾಗದು. ಆದರೆ ಹೇಗೆ ಅಳೆದು ಸುರಿದರೂ ಇದರಲ್ಲಿ ಕರ್ನಾಟಕಕ್ಕೆ ದಕ್ಕಬಹುದಾದ್ದು ಅತ್ಯಂತ ಹೆಚ್ಚೆಂದರೆ 30 ಟಿಎಂಸಿ.

ಇಷ್ಟನ್ನೂ ಪಡೆದುಕೊಳ್ಳಲಾಗದ ಕರ್ನಾಟಕ ಸರ್ಕಾರಕ್ಕಿಂತ ಮೊದಲೇ, ಇಷ್ಟನ್ನು ಮಾತ್ರ ನಮಗೆ ಕೊಟ್ಟಿದ್ದೀರಿ ಎಂದು ತಮಿಳುನಾಡು ಸುಪ್ರೀಂಕೋರ್ಟಿನ ಮೆಟ್ಟಿಲೇರಿತು. ಅಲ್ಲಿಗೆ ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪು ಗೆಜೆಟ್‌ನಲ್ಲಿ ಪ್ರಕಟಗೊಳ್ಳುವ ವಿಚಾರ ನೆನೆಗುದಿಗೆ ಬಿದ್ದಿತು.

ಅದಕ್ಕಿಂತ ಮುಖ್ಯವಾಗಿ ಸಮಸ್ಯೆ ತಲೆದೋರಲು ಕಾರಣವಾಗಿರುವುದು 'ಮಳೆ ಕಡಿಮೆ ಇರುವ ವರ್ಷಗಳಲ್ಲಿ ಹೇಗೆ ಹಂಚಿಕೊಳ್ಳಬೇಕು' ಎಂಬುದರಲ್ಲಿ. ಶೇಕಡಾವಾರು ಪ್ರಮಾಣವನ್ನು ಕಡಿಮೆ ಮಾಡಿಕೊಂಡು ಹಂಚಿಕೊಂಡು ಬಿಡಿ ಎನ್ನುವ ರೀತಿಯಲ್ಲಿ ಅಂತಿಮ ತೀರ್ಪಿನಲ್ಲಿ ಕಾಣಿಸಲಾಗಿದೆ. ಆದರೆ ಇದು ಇಡೀ ವರ್ಷ ಬರುವ ಮಳೆಯ ನೀರನ್ನು ಸಂಪೂರ್ಣ ಸಂಗ್ರಹಿಸಿಕೊಂಡು ನಂತರ ಇಬ್ಬರೂ ಹಂಚಿಕೊಳ್ಳುವ ವಿಚಾರವಲ್ಲ. ಒಂದೊಂದು ಪ್ರದೇಶಕ್ಕೆ ಒಮ್ಮೊಮ್ಮೆ ಮಳೆ ಬರುತ್ತದೆ. ಈಗಾಗಲೇ ನಮ್ಮ ಮಳೆಗಾಲ (ನೈರುತ್ಯ ಮಾರುತ ಪ್ರಧಾನವಾದ್ದರಿಂದ) ಮುಗಿದುಹೋಗಿದ್ದರೆ, ತಮಿಳುನಾಡಿನ ಮಳೆ (ಈಶಾನ್ಯ ಮಾರುತ ಪ್ರಧಾನ) ಇನ್ನೂ ಶುರುವಾಗಬೇಕಿದೆ.





ಆಗಲೂ ಮಳೆ ಬಾರದೇ ಹೋದರೆ, ಈಗಾಗಲೇ ಕೊರತೆ ಎಂದು ಹೇಳುತ್ತಿರುವ ಕರ್ನಾಟಕವು ನೀರು ಬಿಡುವುದಿಲ್ಲ ಎಂಬ 'ಮುಂದಾಲೋಚನೆ'ಯಿಂದ ತಮಿಳುನಾಡು ಈಗಲೇ ನೀರು ಬಿಡಿ ಎಂದು ಹೇಳುತ್ತಿದೆ. ಅದರ ಕುರುವೈ ಬೆಳೆ ಈ ವರ್ಷ ಹಾಳಾಗಿದ್ದು ಸಾಂಬಾ ಬೆಳೆಗೆ ನೀರು ಬೇಕು ಎಂಬುದು ಅವರ ಕೂಗು.

ನಮ್ಮ ಬೆಳೆಗಳಿಗೇ ನೀರು ಕಡಿಮೆಯಾಗಿದೆ ಎಂಬುದು ಇಲ್ಲಿನ ರೈತರ ಆತಂಕ. ಅಕ್ಟೋಬರ್‌ನಲ್ಲಿ ಮಳೆ ಎಷ್ಟು ಬರುತ್ತದೆ ಎಂಬುದನ್ನು ಈಗಲೇ ಅಂದಾಜು ಮಾಡುವುದೂ ಕಷ್ಟ. ಇದನ್ನೂ ಗಣನೆಗೆ ತೆಗೆದುಕೊಳ್ಳುವ ಸಂಕಷ್ಟ ಸೂತ್ರ ರೂಪಿಸಲು ಯಾರೂ ಇದುವರೆಗೆ ತಲೆಕೆಡಿಸಿಕೊಂಡಿಲ್ಲ.


ಒಂದು ವೇಳೆ ಅಂತಹ ಸಂಕಷ್ಟ ಸೂತ್ರ ಸಿದ್ಧವಾದರೆ ಅದನ್ನು ಎರಡೂ ರಾಜ್ಯಗಳ ಜನರನ್ನು ಒಪ್ಪಿಸಲು ಸಾಧ್ಯವೇ ಎಂಬ ಪ್ರಶ್ನೆಯೂ ಮುಖ್ಯವೇ. ಏಕೆಂದರೆ ಸಮಸ್ಯೆ ಇದ್ದಷ್ಟು ಕಾಲವೂ ಅದನ್ನು ತಮ್ಮ ಹಿತಾಸಕ್ತಿಗೆ ದಾಳ ಮಾಡಿಕೊಳ್ಳಲು ಸಿದ್ಧರಾಗಿರುವ ಪಡೆಗಳು ಎರಡೂ ಕಡೆ ಇವೆ. ಅದರಲ್ಲೂ ಮಂಡ್ಯದ ಮಗಳು ಜಯಲಲಿತಾ ತಮಿಳುನಾಡಿಗೆ ಹೆಚ್ಚಿನ ನಿಷ್ಠೆ ತೋರಿಸಲು ಯಾವಾಗಲೂ ಒಂದು ಕೈ ಮುಂದಾಗಿರುತ್ತಾರೆ. ಮೊದಲು ಎರಡೂ ರಾಜ್ಯಗಳ ಜನರಿಗೆ ವಾಸ್ತವಾಂಶ ತಿಳಿಸಿ, ಅಂತಿಮ ಪರಿಹಾರದತ್ತ ಗಮನ ಹರಿಸುವುದು ಏಕೆ ಅಗತ್ಯ ಎಂದು ಮನವರಿಕೆ ಮಾಡುವ ಕೆಲಸ ಆಗಬೇಕು. ಆಗ ಕಾವೇರಿ ವಿವಾದವಿದ್ದರೇ ನಮಗೆ ಒಳ್ಳೆಯದು ಎಂದು ಬಗೆಯುವವರು ಪಕ್ಕಕ್ಕೆ ಸರಿಯುತ್ತಾರೆ. ಇದು ಬಹಳ ಮುಖ್ಯವಾದ ಸಂಗತಿ. ಇಲ್ಲದಿದ್ದರೆ ಎಂತಹ ಪರಿಹಾರ ಸೂತ್ರವನ್ನು ಮುಂದಿಟ್ಟರೂ, ನಮಗೆ ಅನ್ಯಾಯವಾಗಿದೆ ಎಂದು ಎರಡೂ ಕಡೆಯವರು ಹೇಳಲು ಸಾಧ್ಯವಾಗುವ ರೀತಿಯಲ್ಲಿ ಕಾವೇರಿ ಸಮಸ್ಯೆಯಿದೆ.

ಇದ್ದುದರಲ್ಲಿ ಈ ಸಮಸ್ಯೆಯನ್ನು ಪರಿಹರಿಸುವ ದೃಷ್ಟಿಯಿಂದ ಅತ್ಯಂತ ಶ್ಲಾಘನೀಯ ಕೆಲಸ ಆಗಿರುವುದು 'ಕಾವೇರಿ ಕುಟುಂಬ'ದಿಂದ. ರಾಜಕಾರಣಿಗಳನ್ನು ಹೊರಗಿಟ್ಟು ಎರಡೂ ರಾಜ್ಯಗಳ ರೈತ ಪ್ರತಿನಿಧಿಗಳು ಮತ್ತು ಕೆಲವು ಗಣ್ಯರನ್ನು ಹೊಂದಿರುವ ಕಾವೇರಿ ಕುಟುಂಬವು ಮೊಟ್ಟಮೊದಲ ಬಾರಿಗೆ ಎರಡೂ ರಾಜ್ಯಗಳ ದೃಷ್ಟಿಯಿಂದ ಸಮಸ್ಯೆಯನ್ನು ನೋಡುವ ಪ್ರಯತ್ನ ಆರಂಭಿಸಿತು. ಕರ್ನಾಟಕದ ಪ್ರತಿನಿಧಿಗಳನ್ನು ತಮಿಳುನಾಡಿಗೂ, ತಮಿಳುನಾಡಿನ ರೈತರನ್ನು ಕರ್ನಾಟಕಕ್ಕೂ ಕರೆದುಕೊಂಡು ಹೋಗಿ ಅಣೆಕಟ್ಟುಗಳ, ರೈತರ, ಬೆಳೆಗಳ ಪರಿಸ್ಥಿತಿಯನ್ನು ಕಣ್ಣಾರೆ ಕಾಣುವ ಮತ್ತು ಸತ್ಯಶೋಧನೆ ನಡೆಸುವ ಅವಕಾಶ ಕಲ್ಪಿಸಿಕೊಡಲಾಯಿತು. ಅಲ್ಲಿಂದ ಮುಂದಕ್ಕೆ ಕರ್ನಾಟಕದಲ್ಲಿ ಕಾವೇರಿ ಅಚ್ಚುಕಟ್ಟು ಪ್ರದೇಶದೊಳಗೇ ಅರ್ಧದಷ್ಟು ಒಣಭೂಮಿಯಿರುವುದನ್ನು ತಮಿಳುನಾಡಿನವರು ಕಂಡರು. ಅದೇ ರೀತಿ ತಮಿಳುನಾಡಿನ ರೈತರು ಮೂರು ಬೆಳೆಗಳನ್ನು ಬೆಳೆಯುತ್ತಾರೆ ಎಂಬ, ಕರ್ನಾಟಕದಲ್ಲಿ ಸಾಕಷ್ಟು ಪ್ರಚಲಿತವಿರುವ, ಸುದ್ದಿಯು ಕೇವಲ ವದಂತಿ ಎಂಬುದನ್ನು ಕರ್ನಾಟಕದವರು ಕಂಡುಕೊಂಡರು.

ಆದರೂ ಕಳೆದ 15 ದಿನಗಳಿಂದ ಟಿವಿಯಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲಿ ಹಲವರು ತಮಿಳುನಾಡಿನ ರೈತರು 3 ಬೆಳೆ ಬೆಳೆಯುತ್ತಾರೆ ಎಂದು ಹೇಳುತ್ತಲೇ ಇದ್ದಾರೆ. ಎರಡೂ ಕಡೆ ವಾಸ್ತವ ಸಂಗತಿಗಳ ಆಧಾರದ ಮೇಲೆ ಚರ್ಚೆ ನಡೆದರೆ ಮಾತ್ರ ಈ ವಿವಾದದ ಧಾರಾವಾಹಿ ಮುಕ್ತಾಯಗೊಳ್ಳುವುದು ಸಾಧ್ಯ. ಈ ರೈತರ ಮತ್ತು ಕುಡಿಯುವ ನೀರಿಗಾಗಿ ಕಾವೇರಿಯನ್ನು ಆಧರಿಸಿರುವ ಜನರ ಒಳಿತು ಇರುವುದು ಸರಿಯಾದ ಸಂಕಷ್ಟ ಸೂತ್ರವನ್ನೊಳಗೊಂಡ ಅಂತಿಮ ಪರಿಹಾರ ರೂಪುಗೊಳ್ಳುವುದರಲ್ಲೇ ಆಗಿದೆ. ಆ ನಂತರ ತಮಿಳುನಾಡಿಗೆ ಸಾಮಾನ್ಯ ವರ್ಷದಲ್ಲಿ ಬಿಡಬೇಕಾದ ನೀರನ್ನು ಬಿಟ್ಟು ಉಳಿದ ಎಲ್ಲಾ ನೀರಿನ ಬಳಕೆಗೆ ಯೋಜನೆ ರೂಪಿಸುವುದು; ವೈಜ್ಞಾನಿಕ ಕೃಷಿಯ ಮೂಲಕ ನೀರಿನ ಬಳಕೆಯನ್ನೇ ಕಡಿಮೆ ಮಾಡಿ, ಈ ಭಾಗದಲ್ಲಿ ಇನ್ನೂ ಒಣಭೂಮಿಯಾಗಿಯೇ ಉಳಿದುಕೊಂಡಿರುವ ಪ್ರದೇಶಕ್ಕೆ ನೀರುಣಿಸುವುದು; ಸಂಕಷ್ಟದ ಸಂದರ್ಭಕ್ಕೆಂದು ಸಂಗ್ರಹ ಮಾಡಿಕೊಳ್ಳಲು ಬೇಕಾದ ವ್ಯವಸ್ಥೆ ಮಾಡಿಕೊಳ್ಳುವುದು ಇವೆಲ್ಲಾ ಸಾಧ್ಯ.

ರೈತರನ್ನು ಕೃಷಿಯಿಂದ ಓಡಿಸಲು ಸಾಧ್ಯವಿರುವುದನ್ನೆಲ್ಲಾ ಮಾಡುತ್ತಿರುವ ಸರ್ಕಾರಗಳು (ಇದರಲ್ಲಿ ಕರ್ನಾಟಕ, ತಮಿಳುನಾಡು ಹಾಗೂ ಕೇಂದ್ರ ಸರ್ಕಾರಗಳ ನಡುವೆ ಭೇದಭಾವವಿಲ್ಲ; ಬದಲಿಗೆ ಯಾರು ಎಷ್ಟು ದಕ್ಷತೆಯಿಂದ ರೈತರನ್ನು ಓಡಿಸುತ್ತಾರೆ ಎಂಬ ವಿಚಾರದಲ್ಲಿ ಪೈಪೋಟಿಯಿದೆ) ಇವನ್ನೆಲ್ಲಾ ಮಾಡುತ್ತಾರೆಂದು ನಂಬುವಷ್ಟು ಮೂರ್ಖರು ನಾವಾಗಬಾರದು. ಕಾವೇರಿ ಕುಟುಂಬದಂತಹ ಪ್ರಯತ್ನಗಳಿಗೆ ಎಲ್ಲಾ ಪ್ರಜ್ಞಾವಂತರೂ ಒತ್ತಾಸೆಯಾಗಿ ನಿಲ್ಲುವ ಮೂಲಕ ಮಾತ್ರ ಅದು ಸಾಧ್ಯವಿದೆ. 'ಕಾವೇರಿ ಕುಟುಂಬ'ವೂ ಸಹ ಆದಷ್ಟು ಬೇಗ ಎರಡೂ ಭಾಗಗಳ ಇನ್ನೂ ಹಲವು ಜನವಿಭಾಗಗಳನ್ನು ಜೊತೆಗೆ ಕರೆದುಕೊಂಡು ಹೋಗುವ ಪ್ರಯತ್ನವನ್ನು ನಡೆಸದೇ ಇದ್ದರೆ, ಅದು ಕೇವಲ ಅಕ್ಯಾಡೆಮಿಕ್ ಕಸರತ್ತು ಮಾತ್ರವೇ ಆಗಿಬಿಡುತ್ತದೆ.

ಶಾಶ್ವತ ಪರಿಹಾರದ ಪ್ರಯತ್ನವನ್ನು ಎಲ್ಲರೂ ನಡೆಸೋಣ. ಈ ಸಾರಿಯ ಸಮಸ್ಯೆಯ ಪರಿಹಾರ ಮಾಡುವ ಮಂತ್ರವಾದ ಮಳೆ ಆದಷ್ಟು ಬೇಗ ಸುರಿಯಲೆಂದು ಆಶಿಸಿ ಕಾಯೋಣ.











# ಹುಬ್ಬಳ್ಳಿ: ಕಾರ್ಮಿಕರ ಕ್ಯಾಂಟೀನ್ ಹೋಗಿ ಬ್ಯಾಡ್ಮಿಂಟನ್ ಕೋರ್ಟ್ ಬಂತು

ಕರ್ನಾಟಕ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಾದೇಶಿಕ ಕಾರ್ಯಾಗಾರದಲ್ಲಿ ಕ್ಯಾಂಟೀನ್‌ನನ್ನು ತೆರವುಗೊಳಿಸಿ ಅಲ್ಲಿ ಬ್ಯಾಡ್ಮಿಂಟನ್ ಕೋರ್ಟ್ ನಿರ್ಮಿಸಿರುವ ಅಧ್ಯಕ್ಷರ ಕ್ರಮವನ್ನು ನಗರದ ಹಲವಾರು ಕಾರ್ಮಿಕ ಸಂಘಟನೆಗಳು ವಿರೋಧಿಸಿವೆ. ಸಂಸ್ಥೆಯ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಸಾವಕಾರರ ಈ ಕ್ರಮದ ವಿರುದ್ಧ ಕಾನೂನು ಹೋರಾಟಕ್ಕೆ ಟ್ರೇಡ್ ಯೂನಿಯನ್‌ಗಳು ಕರೆಕೊಟ್ಟಿರುವುದು ಸಂಸ್ಥೆಯ ಕಾರ್ಮಿಕರಲ್ಲಿ ಚೈತನ್ಯ ಮೂಡಿಸಿದೆ.



1960ರಲ್ಲಿ ಹುಬ್ಬಳ್ಳಿಯಲ್ಲಿ ವಾಯುವ್ಯ ಸಾರಿಗೆ ಸಂಸ್ಥೆಯ ಪ್ರಾದೇಶಿಕ ಕಾರ್ಯಾಗಾರವನ್ನು ಸ್ಥಾಪಿಸಲಾಗಿತ್ತು. ಇಲ್ಲಿ ಸಂಸ್ಥೆಯ ಬಸ್‌ಗಳನ್ನು ನವೀಕರಿಸುವ ಕಾರ್ಯ ನಡೆಯುತ್ತದೆ. ಸ್ಥಾಪನೆಯಾದಾಗ 1800 ರಷ್ಟಿದ್ದ ಕಾರ್ಮಿಕರ ಸಂಖ್ಯೆ ಈಗ 350ಕ್ಕೆ ಇಳಿದಿದೆ. ಕಾರ್ಯಾಗಾರದಲ್ಲಿ ಈಗ ಹೆಚ್ಚಿನ ಕೆಲಸಗಳಿಲ್ಲದ ಕಾರಣ, ಈಗ ಕೇವಲ ಕಾಯಂ ಕೆಲಸಗಾರರಷ್ಟೇ ಉಳಿದಿದ್ದಾರೆ. ಕಾರ್ಮಿಕರ ಅನುಕೂಲಕ್ಕಾಗಿ 1988ರಲ್ಲಿ ಸಹಕಾರಿ ತತ್ವದಡಿಯಲ್ಲಿ ಕ್ಯಾಂಟೀನ್ ಸ್ಥಾಪಿಸಲಾಗಿತ್ತು. ಹೀಗೆ ಕಾರ್ಖಾನೆಗಳಲ್ಲಿರುವ ಉಪಾಹಾರಗೃಹಗಳು ಊಟ-ತಿಂಡಿಗಳನ್ನು ಒದಗಿಸುವುದಷ್ಟೇ ಅಲ್ಲದೆ, ಕೆಲಸದ ನಡುವೆ ವಿರಾಮದ ಸಮಯದಲ್ಲಿ ಕಾರ್ಮಿಕರಿಗೆ ರಿಲೀಫ್ ನೀಡುವ ಜಾಗಗಳೂ ಆಗಿರುತ್ತವೆ. ಕಾರ್ಮಿಕರು ಮತ್ತೆ ಹೊಸ ಹುರುಪಿನಿಂದ ಕೆಲಸದಲ್ಲಿ ತೊಡಗಲು ಕ್ಯಾಂಟೀನ್‌ಗಳು ಚೈತನ್ಯ ತುಂಬುವಂಥ ಜಾಗಗಳು ಎಂದರೆ ಉತ್ಪ್ರೇಕ್ಷೆಯೇನಲ್ಲ. ಒತ್ತಡದ ಕೆಲಸಗಳ ನಡುವೆಯೂ ತಮ್ಮ ಜೀವಂತಿಕೆ ಉಳಿಸಿಕೊಳ್ಳಲು ಇರುವ ಇಂಥಾ ಜಾಗವನ್ನೇ ತೆರವುಗೊಳಿಸಿ, ಅದನ್ನು ಆಟದ ಅಂಕಣವಾಗಿಸಿರುವುದು ಕಾನೂನು ಉಲ್ಲಂಘನೆಯೂ ಆಗಿದೆ. ಕಾರ್ಮಿಕರಿಗೆ ಎಕ್ಸ್‌ಗ್ರೇಷಿಯಾ, ಬೋನಸ್ ನೀಡಲು ಸಂಸ್ಥೆಯಲ್ಲಿ ಹಣವಿಲ್ಲ ಅನ್ನುವ ಕಾರಣ ನೀಡುವ ಅಧ್ಯಕ್ಷರು, ಸಂಸ್ಥೆಯ ಐದು ಲಕ್ಷ ರೂಪಾಯಿಗಳನ್ನು ಬ್ಯಾಡ್ಮಿಂಟನ್ ಕೋರ್ಟ್ ನಿರ್ಮಾಣಕ್ಕೆ ವಿನಿಯೋಗಿಸಿರುವುದು ಕಾರ್ಮಿಕ ದ್ರೋಹಿ ನೀತಿಯಲ್ಲದೆ ಮತ್ತೇನು?

ಕಾರ್ಯಾಗಾರದ ಸುಸಜ್ಜಿತವಾದ ಕಟ್ಟಡದಲ್ಲಿದ್ದ ಕ್ಯಾಂಟೀನ್ ಈಗ ಅಂಗಳಕ್ಕೆ ಬಂದಿದೆ. ಕಟ್ಟಡದ ಒಳಗೆ ಕೋರ್ಟ್ ನಿರ್ಮಾಣಗೊಂಡಿದೆ. ಹೊರಗಿನ ಧೂಳಿನಲ್ಲಿ ನಿಂತು ಕಾರ್ಮಿಕರು ತಿಂಡಿ ಸೇವಿಸುವ ಅನಿವಾರ್ಯತೆ ಒದಗಿದೆ. 250ಕ್ಕೂ ಹೆಚ್ಚಿನ ಕಾರ್ಮಿಕರಿದ್ದರೆ, ಅಂಥ ಕಾರ್ಖಾನೆಗಳಲ್ಲಿ ಕ್ಯಾಂಟೀನ್ ಇರಬೇಕಾದುದು ಕಡ್ಡಾಯ ಎಂಬುದು ಕಾರ್ಮಿಕ ಇಲಾಖೆಯ ಕಾನೂನಾಗಿದೆ. ಅಧ್ಯಕ್ಷ ಮಹೋದಯರು ಅದನ್ನು ಗಾಳಿಮಳೆಗೆ ಒಡ್ಡಿ ಕ್ಯಾಂಟೀನ್ ಅಂಗಳಕ್ಕೆಸೆದಿದ್ದಾರೆ.

ರಾಜ್ಯದ ಮುಖ್ಯಮಂತ್ರಿಗಳು ಇತ್ತ ಗಮನಹರಿಸಬೇಕಾದುದು ಅಗತ್ಯ. ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಆಪ್ತನಾಗಿರುವ ಈ ಮಲ್ಲಿಕಾರ್ಜುನ ಸಾವಕಾರ ಸಾರಿಗೆ ಸಂಸ್ಥೆಗೆ ಅಧ್ಯಕ್ಷನಾಗಿ ಬಂದಾಗಿನಿಂದಲೂ ತನ್ನ ವಿರುದ್ಧ ದನಿಯೆತ್ತುವವರನ್ನು ನಾನಾರೀತಿಯಲ್ಲಿ ಶಿಕ್ಷಿಸಿದ್ದಾನೆ. ವಿನಾಕಾರಣದ ವರ್ಗಾವಣೆ, ಅನಗತ್ಯ ಕಿರುಕುಳ ನೀಡಿ ಕಾರ್ಮಿಕರ ಪ್ರಶ್ನೆ ಮಾಡುವ ಹಕ್ಕನ್ನೇ ಕಸಿದುಕೊಂಡಿದ್ದಾನೆ.

ಹಿಂದೆ, ಹುಬ್ಬಳ್ಳಿಯುದ್ದಕ್ಕೂ ಅಲೆದಾಡಿ ಹರಿದಿರುವ ಗೋಣಿತಾಟುಗಳನ್ನು ಹೊಲಿದು, ರಿಪೇರಿ ಮಾಡಿಕೊಟ್ಟು ಹೊಟ್ಟೆ ಹೊರೆಯುತ್ತಿದ್ದ ಮಲ್ಲಿಕಾರ್ಜುನ ಸಾವಕಾರ ಹೆಸರಿಗೆ ಮಾತ್ರ ಸಾವಕಾರನಾಗಿದ್ದ. ಜಗದೀಶ್ ಶೆಟ್ಟರ ಮನೆ ಹೊಕ್ಕ ನಂತರ ಈತ ನಿಜಕ್ಕೂ ಸಾವಕಾರನಾಗಿಬಿಟ್ಟ. ಇಂದು ಕೋಟಿ ಕೋಟಿ ತೂಗುತ್ತಾನೆ. ಶೆಟ್ಟರ್ ಮುಖ್ಯಮಂತ್ರಿಯಾದ ನಂತರ, ಹುಬ್ಬಳ್ಳಿಯನ್ನು ತನ್ನ ಸ್ವಂತ ಜಾಗೀರನ್ನಾಗಿ ಮಾಡಿಕೊಂಡಿರುವ ಮಲ್ಲಿಕಾರ್ಜುನ ಸಾವಕಾರ ಹುಬ್ಬಳ್ಳಿಯುದ್ದಕ್ಕೂ ಕೈಯಿಟ್ಟಿದ್ದಾನೆ. ಕಾರ್ಮಿಕ ಸಂಘಟನೆಗಳು ಹಾಗೂ ಟ್ರೇಡ್ ಯೂನಿಯನ್‌ಗಳ ಸಹಕಾರದೊಂದಿಗೆ ಪ್ರತಿಭಟನೆ, ಕಾನೂನು ಹೋರಾಟಗಳಿಗೆ ಸಂಸ್ಥೆಯ ಕಾರ್ಮಿಕರು ಸಜ್ಜಾಗಿದ್ದಾರೆ. ಮುಖ್ಯಮಂತ್ರಿಯವರ ಪರಮಾಪ್ತರಲ್ಲಿ ಒಬ್ಬನಾದ ಈ ಸಾವಕಾರನ ಆನೆ ಕಿವಿಗಳಿಗೆ ಅಂಕುಶ ತಿವಿಯುವವರಾರು?

ಜಗದೀಶ್ ಶೆಟ್ಟರ್ ಎಚ್ಚೆತ್ತುಕೊಳ್ಳದಿದ್ದರೆ, ಮುಂದೆ ಹೆಜ್ಜೆ-ಹೆಜ್ಜೆಗೂ ಎಡವಿ ಬೀಳಲಿದ್ದಾರೆ. ಶೆಟ್ಟರ್ ತಮ್ಮ ಪ್ರದೀಪ್ ಶೆಟ್ಟರ್, ಈ ಮಲ್ಲಿಕಾರ್ಜುನ ಸಾವಕಾರ, ಮತ್ತು ಮಹೇಶ ತೆಂಗಿನಕಾಯಿಯಂತಹ ಆಸಾಮಿಗಳು ಹುಬ್ಬಳ್ಳಿಯ ಹೂಬಳ್ಳಿಗಳನ್ನು ಬಿಡದೆ ಮುಕ್ಕುತ್ತಿರುವುದು ಜಗದೀಶ್ ಶೆಟ್ಟರ್‌ರವರಿಗೆ ಮುಂದಿನ ಚುನಾವಣೆಯಲ್ಲಿ ಪರಾಜಯದ ಮಾಲೆ ಕಟ್ಟುತ್ತಿರುವುದಕ್ಕೆ



ಮುನ್ನುಡಿಯಾಗಲಿದೆ. ತಮ್ಮವರು ಮಾಡುತ್ತಿರುವ ಇಂಥಾ ಕೆಲಸಗಳಲ್ಲಿ ಅವರ ಪಾಲಿಲ್ಲದಿದ್ದರೂ ಅವರನ್ನು ತಡೆಯದೆ ಸುಮ್ಮನಿರುವುದು ಇವರನ್ನು ಆ ಪಾಶಕ್ಕೆ ಸಿಕ್ಕಿಸಲಿದೆ. ಲೋಕಾಯುಕ್ತರೆ ಇಲ್ಲದ ಕರ್ನಾಟಕದಲ್ಲಿ ಮಂತ್ರಿಗಳು, ಮುಖ್ಯಮಂತ್ರಿಗಳು, ಮತ್ತವರ ಆಪ್ತರು, ಅಧಿಕಾರಸ್ಥರ ವಿರುದ್ಧ ಯಾರಲ್ಲಿ ದೂರುವುದು?

● ಹುಬ್ಬಳ್ಳಿಯಾಂವ

# ಯಶ್..ಬುಸ್!!

▶10

ಪಾರ್ವತಿ ಲೋಕೇಶ್ ಕೇಳಿದ್ದಕ್ಕೂ 'ಸಹಾಯ ಬೇಕಿದ್ರೆ ಕೇಳಿ ಕೊಟ್ಟು ಬಿಡ್ತೀನಿ, ಆದರೆ ನನ್ನ ತಾಯಿ ಮೋಸ ಮಾಡಿದ್ದಾರೆ ಅಂತ ಮಾತ್ರ ಹೇಳ್ಬೇಡಿ....' ಎಂದಿದ್ದಾನೆ. ಇದೇ ಹೊತ್ತಿಗೆ ಟೈಲರ್ ಗೋಪಾಲ ಬೆಂಗಳೂರಿನ ಕತ್ರಿಗುಪ್ಪೆಯ ತನ್ನ ಮಗಳ ಮನೆಗೆ ಬಂದವನು ಬನಶಂಕರಿಯಲ್ಲಿದ್ದ ಯಶ್‌ನ ಬಾಡಿಗೆ ಮನೆಗೆ ಲಗ್ಗೆಯಿಟ್ಟಿದ್ದೇ ಮತ್ತೆ ರಾದ್ಧಾಂತ ಮಾಡಿಬಿಟ್ಟ.

ಇಲ್ಲಿ ಪ್ರಮಾದವಾಗಿದ್ದು ಯಶ್ ತಾಯಿ ಪುಷ್ಪಾರಿಂದ. ಆಕೆ ತನ್ನ ಚೀಟಿ ರಂಪವನ್ನು ಮಗನಿಗೆ ಹೇಳಬೇಕಿತ್ತು. ಬದಲಿಗೆ ಅಂಥಾದ್ದೇನೂ ಇಲ್ಲ, ಇವರೆಲ್ಲ ವಿನಾಕಾರಣ ತರಲೆ ಹುಟ್ಟುಹಾಕುತ್ತಿದ್ದಾರೆಂದು ಹೇಳಿರಬೇಕು. ತಾನು ಖ್ಯಾತ ನಟನಾಗಿರುವುದರಿಂದಲೇ ಕೆಟ್ಟ ಹೆಸರು ತರಲೆಂದು ತನಾಗದವರು ಎತ್ತಿಕಟ್ಟುತ್ತಿದ್ದಾರೆಂದು ಲೆಕ್ಕ ಹಾಕಿದ ಯಶ್ ಮೊಂಡುಬಿದ್ದು ಯಾರ‍್ಯಾರು ಬಾಕಿ ಕೇಳಿ ಫೋನ್ ಮಾಡುತ್ತಾರೋ ಅವರಿಗೆಲ್ಲ ದಬಾಯಿಸಿದ್ದಾನೆ.

ಇನ್ನು ಟೀವಿ ಸುದ್ದಿಕೋರರಿಗೆ ಇಂಥಾದ್ದೊಂದು ಸುದ್ದಿಯ ಲಾಭ ಅರ್ಥವಾಗದಿದ್ದರೆ ಹೇಗೆ? ಇದರ ವಾಸನೆ ಹಿಡಿದು ಮೊದಲು ಪಡುವಾರಹಳ್ಳಿಗೆ ಕಾಲಿಟ್ಟದ್ದು ಸುವರ್ಣ ಟೀವಿಯ ಮೈಸೂರು ವರದಿಗಾರ ಸೋಮಶೇಖರ್. ಆತ ಪಡುವಾರಹಳ್ಳಿಯಲ್ಲಿ ಯಶ್ ಕುಟುಂಬ ಬಾಡಿಗೆಗಿದ್ದ ಮನೆಯ ಮಾಲೀಕನನ್ನು ಮಾತಾಡಿಸಿ ತನ್ನ ಮೊಬೈಲ್ ನಂಬರ್ ಕೊಟ್ಟು ಬಂದಿದ್ದೇ ತಡ ಮಾರನೇ ದಿನಕ್ಕೆ ಆ ಮನೆ ಮಾಲೀಕ ಮೂರ‍್ನಾಲ್ಕು ಮಂದಿ ಬಾಡಿಗೆದಾರರನ್ನು ಕಲೆಹಾಕಿಬಿಟ್ಟ. ಅಲ್ಲಿಗೆ ಇಡೀ ಪ್ರಕರಣವೇ ಹೊಸ ತಿರುವು ಪಡೆದಾಗಿತ್ತು. ಯಶ್ ವಂಚಿಸಿದ್ದಾನೆಂದು ಒಂದು ಟೀವಿ, ವಂಚಿಸಿಲ್ಲವೆಂದು ಮತ್ತೊಂದು ಟೀವಿ. ನಿಜವಾ ಎಂದು ಮಗದೊಂದು ಟೀವಿ. ಹೀಗೆ ಸತತ ಮೂರು ದಿನಗಳ ಕಾಲ ಯಶ್ ವಂಚನೆಯದ್ದೇ ಸುದ್ದಿ, ಪ್ರತಿಸುದ್ದಿ, ಆರೋಪ, ಪ್ರತ್ಯಾರೋಪಗಳ ದೊಂಬರಾಟ ಶುರುವಾಗಿತ್ತು.

ವಿಷಯ ಹತ್ತು ವರ್ಷಗಳ ಹಿಂದಿನದ್ದು. ಮೊತ್ತ ಹೆಚ್ಚೆಂದರೆ ಒಂದೋ ಎರಡೋ ಲಕ್ಷದ್ದು. ಚೀಟಿ ನಡೆಸಿದ್ದು ಯಶ್‌ನ ತಾಯಿ. ಆಗಿನ್ನೂ ಬಾಲಕನಾಗಿದ್ದ ಯಶ್ ಇದಕ್ಕೆ ಹೇಗೆ ಜವಾಬ್ದಾರ? ಸರಿ, ತಾಯಿ ಮಾಡಿದ ಸಾಲಕ್ಕೆ ಮಗ ಜವಾಬ್ದಾರನಾಗಬೇಕೆಂಬುದು ಧರ್ಮವಾದರೂ ಇದಕ್ಕೆ ಆತನನ್ನೇ ಕಾರಣ ಪುರುಷನನ್ನಾಗಿ ಬಿಂಬಿಸುವುದು ಎಷ್ಟು ಸರಿ?

ನಟನೊಬ್ಬನ ಖ್ಯಾತಿ ಹಸಿದು ಕೂತ ನ್ಯೂಸ್ ಚಾನಲ್ಲುಗಳಿಗೆ ಆಹಾರವಾದಾಗ ಏನೆಲ್ಲಾ ಹುಚ್ಚಾಟಗಳಾಗುತ್ತೋ ಯಶ್ ವಿಷಯದಲ್ಲಾದದ್ದೂ ಅದೇ. ಅದಕ್ಕೆ ಕನ್ನಡ ಚಿತ್ರರಂಗದ ಗುಂಪುಗಾರಿಕೆ, ಯಶ್ ವಿರುದ್ಧ ನಿರ್ಮಾಪಕರಿಗಿದ್ದ ಸಿಟ್ಟು, ಸಿನಿಮಾ ಪತ್ರಕರ್ತರ ಹಿತಾಸಕ್ತಿ ಎಲ್ಲವೂ ಸೇರಿಕೊಂಡು ಇಡೀ ಪ್ರಕರಣ ದಿನಕ್ಕೊಂದು ತಿರುವು ಪಡೆಯಿತು. ಇಷ್ಟರಲ್ಲೇ ಯಶ್ ನಟಿಸಿದ ಯೋಗರಾಜ್ ಭಟ್ ನಿರ್ದೇಶನದ 'ಡ್ರಾಮಾ' ಚಿತ್ರ ಬಿಡುಗಡೆಯಾಗುವುದರಿಂದ ಈ ಹಿಂದೆ ದರ್ಶನ್ ಜೈಲಿಗೆ ಹೋಗಿ ಗಳಿಸಿದ ಕುಖ್ಯಾತಿಯಿಂದಾಗಿ 'ಸಾರಥಿ'. ಚಿತ್ರ ಗೆದ್ದಂತೆ ಯಶ್ ಕೂಡ ಇಂಥದ್ದೇ ತಂತ್ರ ಹೂಡಿದ್ದಾನೆಂಬುದು ಒಂದು ಸುದ್ದಿ. ಯಶ್ ಕೊಟ್ಟ ಕಾಟದಿಂದಾಗಿ ಜಿದ್ದಿಗೆ ಬಿದ್ದ ನಿರ್ಮಾಪಕ ಜಯಣ್ಣನೇ ತನ್ನ ಸಂಬಂಧಿ ಋಷಿಕುಮಾರ ಸ್ವಾಮಿಯನ್ನು ಎತ್ತಿಕಟ್ಟಿ ಯಶ್ ವಿರುದ್ಧ ಕೆಸರೆರಚುತ್ತಿದ್ದಾನೆಂಬುದು ಮತ್ತೊಂದು ಸುದ್ದಿ. ಸದ್ಯ ಇಮೇಜಿನಲ್ಲಿ ತನಗೆ ಎದುರಾಳಿಯಾದ ಯಶ್‌ನನ್ನು ಮುಗಿಸಲು ದರ್ಶನ್ ಟೀವಿಯವರನ್ನು ಎತ್ತಿಕಟ್ಟಿ ಕಾರ್ಯ ಸಾಧಿಸುತ್ತಿದ್ದಾನೆಂಬುದು ಮಗದೊಂದು ಸುದ್ದಿ.

ಸದ್ಯ ಕನ್ನಡ ಚಿತ್ರರಂಗದಲ್ಲಿ ದರ್ಶನ್‌ಗೆ ಪ್ರತಿಸ್ಪರ್ಧಿ ಅಂತಿದ್ದರೆ ಅದು ಯಶ್. ಆಕ್ಷನ್ ಪಾತ್ರ ಮತ್ತು ರೋಮ್ಯಾಂಟಿಕ್ ಎರಡಕ್ಕೂ ಹೊಂದಿಕೊಳ್ಳುವ ಯಶ್ ದುರಹಂಕಾರಿ ನಿಜ. ಕೆಲ ನಿರ್ಮಾಪಕರಿಗೆ ಯಶ್ ಕಂಡರೇನೇ ಸಿಟ್ಟೇರುವುದೂ ಅಷ್ಟೇ ಸತ್ಯ. ದರ್ಶನ್‌ಗಾಗಿ ಮಾಡಿದ ಕತೆಗೆ ಕಾಲ್‌ಶೀಟ್ ಸಿಗಲಿಲ್ಲವೆಂದು ಒಂದೆರಡು ಚಿತ್ರಗಳಲ್ಲಿ ಯಶ್ ಅವಕಾಶ ಗಿಟ್ಟಿಸಿದ್ದೂ ಉಂಟು. ಇಡೀ ಗಾಂಧಿನಗರದ ಹೀರೋಗಳಲ್ಲೇ ಎರಡು ಬಣಗಳಾಗಿ ಸುದೀಪ್ ನೇತೃತ್ವದಲ್ಲಿ ದರ್ಶನ್, ದುನಿಯಾ ವಿಜಿ ಹೆಡ್ಡಾಫೀಸಿಗೆ ಸೆಡ್ಡು ಹೊಡೆದರೆ ಯಶ್‌ಗೆ ಪುನೀತ್‌ನ ನೆರಳಿದೆ. ಆ ಮೂಲಕ ಶಿವಣ್ಣನಿಗೂ ಯಶ್ ಅಚ್ಚುಮೆಚ್ಚು. ಇದೇ ಕಾರಣಕ್ಕೆ ದರ್ಶನ್ ಈ ಸಂದರ್ಭ ಬಳಸಿಕೊಂಡು ಯಶ್‌ನನ್ನು ಮುಗಿಸಲು ಕತ್ತಿ ಮಸೆಯುತ್ತಿರಬಹುದೆ? ಅಥವಾ ಯಶ್ ಶಿಷ್ಯರೇ ಇಂಥಾದ್ದೊಂದು ವದಂತಿ ಹಬ್ಬಿಸುತ್ತಿದ್ದಾರೆಯೇ?

ಈಗ ಯಶ್ ವಿರುದ್ಧ ವಂಚನೆ ಆರೋಪ ಹೊರಿಸುತ್ತಿರುವ ಆದಿ ಲೋಕೇಶ್‌ಗೂ ದರ್ಶನ್‌ಗೂ ಬಾಲ್ಯದ ಗೆಳೆತನವಿದೆ. ಹಾಗೇ ಆದಿ ಲೋಕೇಶನ ತಾಯಿ ಪಾರ್ವತಿ ಲೋಕೇಶ್ ಮತ್ತು ದರ್ಶನ್ ತಾಯಿ ಮೀನಾ ತೂಗುದೀಪರಿಗೆ ಹಳೇ ಆತ್ಮೀಯತೆಯಿದೆ. ಇದನ್ನು ಬಳಸಿಕೊಂಡು ಆದಿ ಲೋಕೇಶನ ಮೂಲಕ ದರ್ಶನ್ ಸಾಲಗಾರರನ್ನು ಎತ್ತಿಕಟ್ಟಿ ತನ್ನ ಗೆಳೆಯ ದುನಿಯಾ ವಿಜಿಗೆ ಆಪ್ತರಾದ ಟೀವಿ ಮುಖ್ಯಸ್ಥರನ್ನು ಯಶ್ ವಿರುದ್ಧ ಛೂಬಿಟ್ಟಿದ್ದಾನೆಂಬುದು ಕೆಲವರ ಲೆಕ್ಕಾಚಾರ.

ಮೇಲುನೋಟಕ್ಕಿದು ನಂಬಬಹುದಾದ ಲೆಕ್ಕಾಚಾರವಾದರೂ ವಾಸ್ತವ ಹಾಗಿದೆಯೇ? ದರ್ಶನ್ ಈಗ ಕನ್ನಡದ ಬೇರೆಲ್ಲ ಹೀರೋಗಳಿಗಿಂತಲೂ ಬ್ಯುಸಿ ನಟ. ಯಶ್‌ನನ್ನು ಈ ರೀತಿ ಪೀಡಿಸುವ ಮೂಲಕ ತಾನು ಲಾಭ ಮಾಡಿಕೊಳ್ಳಬಹುದೆಂದು ಭಾವಿಸುವಷ್ಟು ಮೂರ್ಖನಲ್ಲ. ಹಾಗೊಮ್ಮೆ ಯಶ್ ಕಳಂಕಿತನಾದರೆ ಅಷ್ಟಕ್ಕೇ ಆತನ ಕತೆ ಮುಗಿಯುತ್ತದೆಯೆಂದು ನಂಬಲು ದಡ್ಡನೂ ಅಲ್ಲ. ಎಲ್ಲಕ್ಕೂ ಮಿಗಿಲಾಗಿ ಇಂಥದ್ದಕ್ಕೆಲ್ಲ ತಲೆ ಕೆಡಿಸಿಕೊಳ್ಳಲು ಆತನಿಗೆ ಟೈಮೂ ಇಲ್ಲ. ಹಾಗಿದ್ದರೆ ಮೈಸೂರಿನಲ್ಲಿ ವಿಪರೀತ ಪ್ರಾಬಲ್ಯವುಳ್ಳ ದರ್ಶನ್ ಅಭಿಮಾನಿಗಳು ಈ ಒಂದೇ ಕಾರಣಕ್ಕೆ ವಂಚಿತರ ಪರ ನಿಲ್ಲಬೇಕಿತ್ತು. ಅಥವಾ ತನ್ನ ಕೈವಾಡವನ್ನು ರಹಸ್ಯವಾಗಿಟ್ಟು ಯಶ್ ವಿರುದ್ಧ ಕತ್ತಿ ಮಸೆಯಬೇಕೆಂದರೂ ದರ್ಶನ್‌ಗೆ ಬೇರೆ ಸಾಧ್ಯತೆಗಳಿದ್ದವು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಈ ಪ್ರಕರಣದಲ್ಲಿ ದರ್ಶನ್‌ನ ಯಾವುದೇ ಹಿತಾಸಕ್ತಿ ಕಾಣಿಸುತ್ತಿಲ್ಲ.


ಇನ್ನು ನಿರ್ಮಾಪಕ ಜಯಣ್ಣ ಆಗಲಿ, ಯೋಗರಾಜ್ ಭಟ್ಟರಾಗಲಿ ಯಶ್ ವಿರುದ್ಧ ಪಿತೂರಿ ಮಾಡಿ ತಮ್ಮದೇ ಚಿತ್ರಕ್ಕೆ ಹಾನಿ ಮಾಡಿಕೊಳ್ಳುವಷ್ಟು ಸಣ್ಣವರಲ್ಲ. ಇಲ್ಲಿ ಯಡವಟ್ಟಾಗಿರುವುದು ಯಶ್ ತಾಯಿಯ ವಿಪರೀತ ಪ್ರತಿಷ್ಠೆ ಮತ್ತು ಚೀಟಿಗೆ ದುಡ್ಡು ಕಟ್ಟಿದವರ ದುಡುಕಿನಿಂದ. ಯಾರಾದರೂ ಜವಾಬ್ದಾರಿಯುತ ಆಸಾಮಿಯನ್ನು ಕರೆದೊಯ್ದು ಯಶ್‌ನನ್ನು ಕೂರಿಸಿ ಮಾತಾಡಿದ್ದರೆ ಮುಗಿದೇಹೋಗುತ್ತಿತ್ತು. ಅಷ್ಟು ಕಾಯುವಷ್ಟು ತಾಳ್ಮೆ ದುಡ್ಡು ಕಳಕೊಂಡವರಿಗಿರಲಿಲ್ಲ. ಒಬ್ಬನಿಗೆ ದುಡ್ಡು ಕೊಟ್ಟರೆ ಅದು ಇಡೀ ಪಡವಾರಹಳ್ಳಿಗೆ ಪ್ರಚಾರವಾಗಿ ಇನ್ನು ಯಾರ‍್ಯಾರು ಬಂದು ದುಡ್ಡಿಗಾಗಿ ಪೀಡಿಸಬಹುದೋ ಎಂಬ ಆತಂಕಕ್ಕೆ ಬಿದ್ದು ಯಶ್ ತಾಯಿ ಅದನ್ನು ಮಗನಿಂದ ಮುಚ್ಚಿಟ್ಟರು.

ಯಶ್ ತಾಯಿಯ ಮರ್ಜಿಗೆ ಬಿದ್ದು 'ಬೇಕಿದ್ದರೆ ಸಹಾಯ ಕೇಳಿಕೊಡ್ತೀನಿ ಆದರೆ ತಾಯಿಯ ಮೇಲೆ ಆರೋಪ ಮಾಡ್ಬೇಡಿ' ಎಂದು ಮೊಂಡು ಹಿಡಿದ. ಇದನ್ನೇ ಕಾಯುತ್ತಿದ್ದ ಟೀವಿಗಳಿಗೆ ಅನ್ಯಾಯವಾಗಿ ಯಶ್ ಆಹಾರವಾದ. ಈಗಲೂ ಅಷ್ಟೇ ಕಾಲ ಮಿಂಚಿಲ್ಲ. ತಾವೇ ನೇರವಾಗಿ ಹೋಗಿ ಬಾಕಿ ತೀರಿಸಲಾಗದೇ ಹೋದರೂ ಕೊಬ್ರಿ ಮಂಜುವೋ, ಜಯಣ್ಣನನ್ನೋ ಬಿಟ್ಟು ಚೀಟಿದಾರರ ಬಾಕಿ ಚುಕ್ತಾ ಮಾಡಬಹುದು. ಎರಡು ಲಕ್ಷ ಯಶ್‌ಗೆ ದೊಡ್ಡ ಮೊತ್ತವೇನಲ್ಲ. ಕಳಕೊಂಡವರಿಗೂ ಇದರಿಂದ ಬದುಕೇನೂ ಮುಳುಗಿಲ್ಲ.


ನಟನೊಬ್ಬನ ಖ್ಯಾತಿಯಿಂದಾಗಿ ಕ್ಷುಲ್ಲಕ ವಿಷಯ ಕೂಡ ಟಿಆರ್‌ಪಿ ದಾಹಿ ಚಾನಲ್ಲುಗಳ ಪಾಲಿಗೆ ಬಿಟ್ಟಿ ಮನರಂಜನೆಯಾಗುತ್ತದೆ. ವಿಷಯ ಮುಚ್ಚಿಟ್ಟದ್ದು ತಾಯಿಯ ತಪ್ಪು. ಅದನ್ನು ಪ್ರತಿಷ್ಠೆಯಾಗಿ ಭಾವಿಸಿದ್ದು ಮಗನ ತಪ್ಪು. ಈ ಬಗ್ಗೆ ದಿನಗಟ್ಟಲೆ ಚರ್ಚೆ, ಹರಟೆ ಹೊಡೆದು ಜನರನ್ನು ಮಂಕುದಿಣ್ಣೆಗಳನ್ನಾಗಿಸಿದ ಮೀಡಿಯಾ ಹುಚ್ಚಾಟಕ್ಕೆ ಯಾರಾದರೂ ತಲೆದೂಗಿದ್ದರೆ ಅದು ಯಾರ ತಪ್ಪು? ●



ಯಶ್ ವಾಸಿಸುತ್ತಿರುವ ಮನೆ..



ಮೋಸಕ್ಕೊಳಗಾದವರು....




ತಾಯಿ ಪುಷ್ಪರವರೊಂದಿಗೆ ಯಶ್

# ...ತ್ತನಗೆರೆ ಹೆಸರಲ್ಲಿ ರಿಯಲ್ ಎಸ್ಟೇಟ್ ರೌಡಿಸಂ! ...ರಸು ಆಸ್ತಿಗೆ ಅಂಡರ್‌ವರ್ಲ್ಡ್ ಎಂಟ್ರಿ?



ದೇವರಾಜ್ ಅರಸರು ಬಾಳಿ ಬದುಕಿದ ...ವನಗರದ ಶಕ್ತಿ ಬಂಗಲೆಯ ಆಸ್ತಿ ವಿವಾದವೀಗ ...ತ ಪಾತಕಿಗಳ ಅಂಗಳಕ್ಕೆ ಬಂದು ನಿಂತಿದೆ.

...ಮೊನ್ನೆಯಷ್ಟೇ ಅರಸರ ಮಗಳು ...ಪ್ರಭಾ ಸದಾಶಿವನಗರದ 8 ನೇ ... ಒಂದನೇ ಕ್ರಾಸಿನ ನಂ. 10 ...130x85 ಅಳತೆಯ ಬಂಗಲೆ ...ನಿವೇಶನವನ್ನು ಶಾಮನೂರು ...ಮಲ್ಲಿಕಾರ್ಜುನರ ಪತ್ನಿ ಪ್ರಭಾ ...ಗೆ ವರ್ಗಾಯಿಸಿಹೋಗಿದ್ದಾರೆ. ...ಕ್ಕೂ ಮೊದಲೇ ಸೆಂಟರ್ ಫಾರ್ ...ಯಲ್ ಜಸ್ಟೀಸ್ ಅರ್ಥಾತ್ ...ಯ ಸಾಮಾಜಿಕ ನ್ಯಾಯಮಂಡಳಿ ...ಷ್ಟ್ರೀಯ ಪ್ರಧಾನ ಕಾರ್ಯದರ್ಶಿ ...ನಾರಾಯಣ್ ಮತ್ತು ರೈತನಾಯಕ ...ರಾಜ್ ಸೇರಿಕೊಂಡು ಅರಸು ಬಂಗಲೆ ಪರಭಾರೆ ...ದಂತೆ ಹೈಕೋರ್ಟ್‌ನಿಂದ ತಡೆ ತಂದಿದ್ದಾರೆ.



ದೇವರಾಜ್ ಅರಸು

...ತ ನಾಯಕ ನಾಗರಾಜ್ ಮತ್ತು ಸಾಮಾಜಿಕ ...ಮಂಡಳಿಯ ಲಕ್ಷ್ಮೀನಾರಾಯಣ್, ಅರಸು ಬಂಗಲೆ ...ರೆಯಾಗದಂತೆ ಕೋರ್ಟ್ ಮೊರೆ ಹೋಗಿದ್ದಕ್ಕೂ ...ವಿದೆ. ಅದು ದೇವರಾಜ ಅರಸರು ...ಮಂತ್ರಿಗಳಾಗಿದ್ದಾಗ ಪತ್ನಿ, ...ರ ಹೆಸರಲ್ಲಿ ಆಗಿದ್ದ ಸಿಐಟಿಬಿ ...ದ ಒಂದೇ ಕುಟುಂಬಕ್ಕೆ ನಾಲ್ಕು ... ಮಂಜೂರು ಮಾಡಿದ್ದು!



...ದಾಶಿವನಗರ 8 ನೇ ಮೇನ್‌ನ ... ಕ್ರಾಸಿನಲ್ಲಿ ನಂ. 10 ಮತ್ತು ...ರ 130x85 ಅಳತೆಯ 2 ...ಗಳು ಇದಕ್ಕೆ ಹೊಂದಿಕೊಂಡಂತೆ ... ಕ್ರಾಸಿನಲ್ಲಿ ನಂ. 15 ಮತ್ತು ...ದಲ್ಲಿ ಇದೇ ಅಳತೆಯ ಇನ್ನೆರಡು ಸೈಟುಗಳನ್ನು ಪತ್ನಿ ...ಮ್ಮಣ್ಣಿಗೆ ಪುತ್ರಿ ನಾಗರತ್ನ, ಭಾರತಿ ಮತ್ತು ಚಂದ್ರಪ್ರಭಾರ ...ಲ್ಲಿ ಅರಸು ಪಡೆದದ್ದೇ ಕಾನೂನುಬಾಹಿರವೆಂದೂ ...ನಾಲ್ಕೂ ಸೈಟುಗಳನ್ನು ಸರ್ಕಾರ ವಶಪಡಿಸಿಕೊಂಡು ...ಅರಸು ಸ್ಮಾರಕ ನಿರ್ಮಿಸಬೇಕೆಂದೂ ಜೊತೆಗೆ ಹಿಂದುಳಿದ ವಿದ್ಯಾರ್ಥಿಗಳಿಗೆಂದೇ ಅಲ್ಲೊಂದು ವಿದ್ಯಾರ್ಥಿನಿಲಯ ಸ್ಥಾಪಿಸಬೇಕೆಂದು ಹಾಕಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಮನ್ನಿಸಿ ಕೋರ್ಟು ಪರಭಾರೆ ಮಾಡದಂತೆ ತಡೆ ನೀಡಿದೆ.

ಆದರೆ ಅರಸು ಪುತ್ರಿ ಚಂದ್ರಪ್ರಭಾಗಿದು ಯಾವ ಲೆಕ್ಕ?

ಜೊತೆಗೆ ಸಾಲಕೊಟ್ಟ ಶಾಮನೂರು ಮಲ್ಲಿಯ ದಬ್ಬಾಳಿಕೆ ಬೇರೆ. ಆತುರಾತುರವಾಗಿ ಅರಸು ಬಂಗಲೆ ಪರಭಾರೆ ಮಾಡಿದ ಚಂದ್ರಪ್ರಭಾ ಮೈಸೂರು ಸೇರಿಕೊಂಡಿದ್ದೇ ತಡ ಮೊಕದ್ದಮೆ ಹಾಕಿದ ಲಕ್ಷ್ಮೀನಾರಾಯಣ್ ಮತ್ತು ರೈತನಾಯಕ ನಾಗರಾಜ್ ಅದನ್ನು ಕೋರ್ಟ್ ಗಮನಕ್ಕೆ ತಂದಿದ್ದಾರೆ. ಅರಸು ಬಂಗಲೆಗೆ ನುಗ್ಗಿ ಖಾಲಿ ಮಾಡಿಸುತ್ತಿದ್ದ ವೀಡಿಯೋ ತೆಗೆದಿದ್ದಾರೆ. ಇಲ್ಲಿಗೆ ತಿಂಗಳ ಹಿಂದಿನಿಂದಲೇ ಇವರಿಬ್ಬರಿಗೆ ಬೆತ್ತನಗೆರೆ ಸೀನನ ಹೆಸರಲ್ಲಿ ಬೆದರಿಕೆ ಕರೆ ಶುರುವಾಗಿತ್ತು.

ಇದ್ಯಾವುದನ್ನೂ ಲೆಕ್ಕಿಸದ ಲಕ್ಷ್ಮೀನಾರಾಯಣ್ ಮೊನ್ನೆ ಅಂದರೆ ಸೆಪ್ಟೆಂಬರ್ 24ರ ಬುಧವಾರ ರಾತ್ರಿ 8.30 ರ ಹೊತ್ತಿಗೆ ಸದಾಶಿವನಗರದ 1ನೇ ಕ್ರಾಸಿಗೆ ಬಂದು ಇನ್ನೇನು ಅರಸು ಬಂಗಲೆಯೆದುರು ತಮ್ಮ ಬೈಕ್ ನಿಲ್ಲಿಸಬೇಕೆನ್ನುವಷ್ಟರಲ್ಲಿ ಇಡೀ ಏರಿಯಾದ ಕರೆಂಟು ಹೋಗಿದೆ. ಏಕಾಏಕಿ ಅವರ ಬೈಕ್‌ನತ್ತ ಇನ್ನೋವಾ ಗಾಡಿಯೊಂದು ನುಗ್ಗಿದ್ದೇ ಅದರಿಂದ ನಾಲ್ವರು ದಾಂಡಿಗರು ಇಳಿದು ಲಕ್ಷ್ಮಿನಾರಾಯಣ್‌ರನ್ನು ಸುತ್ತುವರಿದಿದ್ದಾರೆ. ಅವರಲ್ಲೊಬ್ಬ ದಾಂಡಿಗ ಲಕ್ಷ್ಮೀನಾರಾಯಣ್‌ರ ಕೊರಳಪಟ್ಟಿ ಹಿಡಿದು ಅವಾಚ್ಯವಾಗಿ ಬೈದಿದ್ದಾನೆ. 'ನೀನು ಯಾರ ಬುಡಕ್ಕೆ ಕೈಹಾಕಿದಿಯಾ ಗೊತ್ತಾ? ..... ಮುಚ್ಕೊಂಡು ಕೇಸ್ ವಾಪಸ್ ತಗೊಂಡ್ರೆ ಸರಿ. ಇದು ನಮ್ಮ ಪ್ರಾಪರ್ಟಿ ಆದರ ವಿಷಯಕ್ಕೆ ಬಂದರೆ ನಿನ್ನ ಡೆಡ್ ಬಾಡಿ ಮಾತ್ರಾನೇ ಸಿಗೋದು....!' ಎಂದು ಬೆದರಿಸಿದ್ದೇ ಇನ್ನೋವಾ ಗ್ಯಾಂಗ್ ನಾಪತ್ತೆಯಾಗಿದೆ.

"ಯಾರ್ರೀ ನೀವು ಎಂದು ಲಕ್ಷ್ಮೀನಾರಾಯಣ್ ಕೇಳಿದ್ದಕ್ಕೆ ಬಯ್ಯುತ್ತಿದ್ದ ಆ ಧಾಂಡಿಗ ತಾನು ಬೆತ್ತನಗೆರೆ ಸೀನನ ಶಿಷ್ಯ ರಮೇಶ ಎಂದಿದ್ದಾನೆ. ನನ್ನ ಬಾಸ್ ಎನ್‌ಕೌಂಟರ್ ಆಗಿರಬಹುದು. ಆದರೆ ನಾವು ಬದುಕಿದ್ದೀವಿ. ನಮ್ದೂ ಸೀನನ ಸ್ಟೈಲೇ.....!' ಎಂದು ಡೈಲಾಗ್ ಬೇರೆ ಆ ದೈತ್ಯ ಹೊಡೆದಿದ್ದಾನೆ. ನಿಜಕ್ಕೂ ಇದು ಬೆತ್ತನಗೆರೆ ಸೀನನ ಗ್ಯಾಂಗ್ ಮಾಡುತ್ತಿದೆಯಾ ಅಥವಾ ಆತನ ಹೆಸರ ಬೇರೆ ಯಾವುದಾದರೂ ರಿಯಲ್ ಎಸ್ಟೇಟ್ ಗ್ಯಾಂಗ್ ಹಾವಳಿಗಿಳಿದಿದೆಯಾ ಗೊತ್ತಿಲ್ಲ.

ಅರಸರ ನಾಲ್ಕೂ ಸೈಟಿನ ಪೈಕಿ ಒಂದು ಶಾಮನೂರು ಮಲ್ಲಿಯದಾದರೆ ಮತ್ತೊಂದು ಗೋಯಂಕಾ ಕೈ ಸೇರಿದೆ. ಇನ್ನೊಂದು ತಮಿಳುನಾಡಿನ ಕುಬೇರ ಚೆಟ್ಟಿಯಾರ್ ಹೆಸರಲ್ಲಿದೆ. ಉಳಿದೊಂದು ಸೈಟಿನಲ್ಲಿ ಆಂಧ್ರದ ಕುಖ್ಯಾತ



ಅರಸು ಬಂಗಲೆ

ಕಂಟ್ರಾಕ್ಟರುಗಳು ಮತ್ತು ಏಟ್ರಿಯಾ ಧಣಿಗಳಾದ ಚಿನ್ನಸ್ವಾಮಿ ರಾಜು ಮತ್ತು ಕುಪ್ಪರಾಜು ಎರಡು ಭಾಗ ಮಾಡಿಕೊಂಡಿದ್ದಾರೆ. ಅರಸರ ನಾಲ್ಕೂ ಸೈಟುಗಳನ್ನು ಸರ್ಕಾರ ವಶಪಡಿಸಿಕೊಂಡರೆ ಇವರೆಲ್ಲರ ಆಸ್ತಿಯೂ ಕೈತಪ್ಪುತ್ತದೆ.

ಈ ಪೈಕಿ ಏಟ್ರಿಯಾ ಖದೀಮರಾದ ಚಿನ್ನಸ್ವಾಮಿ ರಾಜು ಮತ್ತು ಕುಪ್ಪರಾಜು ಆ ಕಾಲದಿಂದಲೂ ಗೂಂಡಾಗಿರಿ, ರಿಯಲ್ ಎಸ್ಟೇಟ್‌ನಲ್ಲಿದ್ದವರೆ. ಇವರಲ್ಲಿ ಯಾರು ಅರಸು ಸ್ಮಾರಕದ ವಿರುದ್ಧ ರಕ್ತ ಹರಿಸಲು ನಿಂತಿರಬಹುದು?

ಹಿಂದಿಯ ನಟ ರಾಜೇಶ್ ಖನ್ನಾರ ಬಂಗಲೆಯನ್ನು ಅವರ ಮಕ್ಕಳು ಸ್ಮಾರಕ ಮಾಡಿ ಆದರ್ಶ ಮೆರೆದರೆ ಅರಸು ಪುತ್ರಿಯರು ಅದನ್ನು ಐಷಾರಾಮಕ್ಕೆ ಮಾರಿಕೊಂಡಿದ್ದಾರೆ. ಕನಿಷ್ಠ ಸರ್ಕಾರವಾದರೂ ಅರಸು ಆಸ್ತಿಯನ್ನು ಉಳಿಸಲಿ. ಅಲ್ಲೊಂದು ಹಿಂದುಳಿದ ವಿದ್ಯಾರ್ಥಿಗಳ ಹಾಸ್ಟೆಲ್ ಜೊತೆಗೆ ಅರಸು ಸ್ಮಾರಕವೂ ಎದ್ದು ನಿಲ್ಲಲಿ. ಕಂಡೋರ ಪಾಲಾದ ಅರಸು ಆಸ್ತಿ ಶಾಶ್ವತವಾಗಿ ಕನ್ನಡಿಗರ ಕೈಯಲ್ಲೇ ಉಳಿಯುವಂತಾಗಲಿ. ●

# ಕನಕನ ಮರುದರ್ಶನ

...ರಾಜ್‌ಕುಮಾರ್ ನಿರ್ವಹಿಸಿದ್ದ ಸಿನಿಮಾ ಪಾತ್ರದಂತೆ ...ಮಾನಸದ ದೃಷ್ಟಿಯಲ್ಲಿ ಕಲ್ಪಿತಗೊಂಡಿರುವ ಸಂತಕವಿ ...ನನ್ನು ಹಲವು ಆಯಾಮಗಳ ಹಿನ್ನೆಲೆಯಲ್ಲಿ ಮತ್ತೆ ...ಧಿಸುವ ಪ್ರಯತ್ನ ನಡೆಯುತ್ತಿದೆ. "ಕನಕ : ಮರುದರ್ಶನದ ...ಯಾಮಗಳು" ಕುರಿತ ಸಂವಾದವೊಂದು ಸೆಪ್ಟೆಂಬರ್ ...ರಂದು ನಾಟಕ ಅಕಾಡೆಮಿಯ ಚಾವಡಿಯಲ್ಲಿ ಜರುಗಿತು. ...ೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ...ಶೋಧನಾ ಕೇಂದ್ರ ಈ ಸಂವಾದವನ್ನು ಆಯೋಜಿಸಿತ್ತು. ...ಜನಪದ ಮೂಲಗಳಿಂದಲೇ ಹೆಚ್ಚು ಚಿರಪರಿಚಿತ ...ರುವ ಕನಕನನ್ನು ಕೆಲವು ಜಾತಿ-ವರ್ಗಗಳು ತಮ್ಮ ...ತ್ಮಿಕ ನಾಯಕನನ್ನಾಗಿ ಮಾಡಿಕೊಂಡುಬಿಟ್ಟಿರುವ ಈ ...ಸಂದರ್ಭದಲ್ಲಿ ಸಂತಕವಿ ಕನಕನನ್ನು ಆತನ ಸಾಮಾಜಿಕ, ...ಕೀಯ ಹಾಗೂ ತಾತ್ವಿಕ ಆಯಾಮಗಳ ಹಿನ್ನೆಲೆಯಲ್ಲಿ ... ನೋಡುವ ತುರ್ತಿದೆ. ಪ್ರಸ್ತುತ, ಕರ್ನಾಟಕದ ...ಸಮುದಾಯಗಳು ಎದುರಿಸುತ್ತಿರುವ ಹಲಬಗೆಯ ...ಟ್ಟುಗಳನ್ನು ಕನಕನ ಮರುದರ್ಶನದ ಹೊಸ ಅರಿವಿನಿಂದ ... ಮಾಡಿಕೊಳ್ಳುವ ಅಗತ್ಯವೂ ಇದೆ.

...ಭಕ್ತಿಪಂಥ ಎರಡನೇ ಸಹಸ್ರಮಾನದಲ್ಲಿ ಊಳಿಗಮಾನ್ಯ ...ಜಮಾನಿಕೆಯನ್ನ, ಪುರೋಹಿತಶಾಹಿತ್ವ ಹಾಗೂ ...ಕಾರಕೇಂದ್ರಗಳನ್ನು ನಿರಾಕರಿಸುವ ಮೂಲಕ ಜನಪದರ ...ರ್ಯಾಯ ಶಕ್ತಿಯಂತೆಯೂ ರೂಪುಗೊಂಡಿತ್ತು, ಭಕ್ತಿಪಂಥ, ...ರೋಧಿಸುವ ಎದುರಾಳಿ ಶಕ್ತಿಗಳನ್ನು ಕಟ್ಟುವಂಥ ...ಮಾಜಿಕ ಪಲ್ಲಟಗಳಿಗೆ ಚಲನಶೀಲವಾದ ವೇದಿಕೆಯಾಗಿತ್ತು. ... ಪರಂಪರೆ ಕೂಡಾ ಭೌತಿಕ ರೂಪದ ಅಧಿಕಾರ ...ಗಳನ್ನು ನಿರಾಕರಿಸಿ ಆಧ್ಯಾತ್ಮಿಕ ನೆಲೆಯ ಅಧಿಕಾರಗಳನ್ನು ...ಕೊಂಡಿತ್ತು, ಕನಕನನ್ನು ಆತನ ಚಾರಿತ್ರಿಕ ನೆಲೆ, ಜನಪದ ... ಭೌತಿಕ ರಚನೆ ಮತ್ತು ಬರವಣಿಗೆಗಳ ಮೂಲಕ ...ನೋಡುವಂತಹ ಮೂರು ದಿಕ್ಕುಗಳನ್ನು ...ವಾಗಿ ವಿವರಿಸಿ ವಿಸ್ತರಿಸುವ ಕೆ.ವಿ. ನಾರಾಯಣರವರು ... ಎನ್ನುವ ಹೆಸರು ವ್ಯಕ್ತಿಸೂಚಕ ದ್ರಾವಿಡ ...ಲದ್ದಾಗಿರಬಹುದು. ಸಂಸ್ಕೃತ ಮೂಲದ್ದಾಗಿರಲಾರದು ...ದು ಗುರ್ತಿಸಿದ್ದಾರೆ. ಕನಕ ಎನ್ನುವ ಹೆಸರು ಕನಕದಾಸ ...ದಾಗಿದ್ದರ ಬಗ್ಗೆಯೂ ಗುಮಾನಿಗಳಿವೆ. ಎರಡನೇ ...ಸಹಸ್ರಮಾನದಲ್ಲಿ ಬಂದಿರುವ ಬಹಳಷ್ಟು ಜನ ಸಂತಕವಿಗಳನ್ನು ... ಪರಂಪರೆಗೆ ಸೇರಿಸಿ ಕಟ್ಟಿ ಹಾಕಿರುವುದರಿಂದ ಹೀಗಾಗಿರಲೂಬಹುದು. ಕನಕ 'ತಮ್ಮವ' ಎಂದು ಕ್ಲೈಮ್ ಮಾಡಿಕೊಂಡಿರುವ ಕೆಲವು ಜಾತಿ-ವರ್ಗಗಳ ಕುರಿತಂತೆಯೂ ಜಿಜ್ಞಾಸೆಗಳಿವೆ. ಎರಡನೆ ಸಹಸ್ರಮಾನದಲ್ಲಿ ಕನ್ನಡ ಮಾತನಾಡುವ ಪಶುಗಾಹಿಗಳೊಂದಿಗೆ ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಯಿಂದ ವಲಸೆ ಬಂದಂತಹ ಪ್ರಾಕೃತ ಮಾತನಾಡುವ ಪಶುಗಾಹಿ ಗಳು ಸೇರಿಕೊಳ್ಳುತ್ತಾರೆ. ಕಾಲಕ್ರಮೇಣ, ಇವರಿಬ್ಬರ ನಂಟು ಬಿಡಿಸಲಾಗದ ಹಾಗೆ ಬೆಸೆದುಕೊಂಡಿದೆ. ಆಗ ಕರ್ನಾಟಕದ ಬೇಡ, ಕುರುಬ ಹಾಗೂ ಗೊಲ್ಲ ಸಮುದಾ ಯಗಳ ನಡುವಿನ ಭೇದ ಅಳಿಸಿ ಹೋಗಿದೆ. ಬೇಡ, ಗೊಲ್ಲ ಕುರುಬ ಜನಾಂಗಗಳ ನಡುವಿನ ಗೆರೆಗಳ ಕುರಿತು ಸ್ಪಷ್ಟಚಿತ್ರಣಗಳಿಲ್ಲದಿಲ್ಲ. ಕನಕನ ಜಾತಿಯನ್ನು ಈ ಎಲ್ಲಾ ಸಾಮಾಜಿಕ ಹಿನ್ನೆಲೆಗಳಿಂದ ಗ್ರಹಿಸಬೇಕು. ಭಾರತೀಯ ಭಕ್ತಿಪಂಥದ ನೆಲೆ ಯಾವತ್ತಿಗೂ ವಿದ್ರೋಹಾತ್ಮಕವಾದದ್ದೇ. ಊಳಿಗಮಾನ್ಯ ಯಜಮಾನಿಕೆಯ ಅಧಿಕಾರಕ್ಕೆ ಪ್ರತಿರೋಧ ಒಡ್ಡುವ ಮತ್ತು ಎಡಪಂಥೀಯ ನೆಲೆಯ ಸಾಮ್ರಾಜ್ಯ ರಚನೆಯ ಚಲನೆಗಳನ್ನು ಭಕ್ತಿಪಂಥದ ಉದ್ದಕ್ಕೂ ಕಾಣಬಹುದು. ಸಮಾಜದ ಒಳಗಡೆಯೇ ನಡೆಯುವ ಹಲವು ರೀತಿಯ ಇಂಥಾ ಚಲನೆಯನ್ನು ಗ್ರಹಿಸಲು ಭಕ್ತಿಪಂಥ ಮತ್ತು ಪರಂಪರೆಗಳು ಆಕರಗಳಾಗಿ ಒದಗಿಬಂದಿವೆ.



ಕನಕನನ್ನು ಆತನ ಒಟ್ಟು ರಚನೆಗಳ ಹಿನ್ನೆಲೆಯಿಂದ ಗ್ರಹಿಸಿದಾಗ ಆತನಲ್ಲಿ ವೈದಿಕ ಮತ್ತು ಅವೈದಿಕ ಚಿಂತನೆಗಳೆರಡನ್ನೂ ಕಾಣಬಹುದು.

ಸಂತಕವಿಗಳಲ್ಲಿ ಎರಡು ಬಗೆಯ ಹಾಡುಗಾರರಿದ್ದಾರೆ. ತಾವು ಕಂಡದ್ದನ್ನು ಕಂಡಹಾಗೆ ಹೇಳಿಬಿಡುವ ಹಾಡುಗಾರರು ಮೊದಲನೆಯವರಾದರೆ, ತಾವು ಕಂಡದ್ದನ್ನು ಕಾಣುವ ದಾರಿಗಳನ್ನು ತೋರಿಸುವ ಹಾಡುಗಾರರು ಎರಡನೆಯವರು. ಕನಕ ಈ ಎರಡನೆಯ ಬಗೆಯ ಹಾಡುಗಾರ. ಕೀರ್ತನೆಗಳ ಥರದ ರಚನೆಗಳು ಕನಕನಲ್ಲಿಲ್ಲ, ಸ್ತೋತ್ರದ ಭಾವವಿರುವ ರಚನೆಗಳು ಅವರವು. ಈ ರಚನೆಗಳಲ್ಲಿ ಆರ್ತನಾದವಿರುವುದಿಲ್ಲ, ನಂಬಿಕೆ, ಹಾಸುಹೊಕ್ಕಾಗಿದೆ. ಹಾಗಾಗಿ ಕನಕನ ರಚನೆಗಳನ್ನು ಕೀರ್ತನೆಗಳು ಎಂದು ಕರೆಯುವುದು ಸಮಂಜಸವಲ್ಲ, ಹಾಡುಗಳು ಎನ್ನುವುದು ಸೂಕ್ತ ಎಂದು ಹೇಳಿದ ಕೆ.ವಿ. ನಾರಾಯಣ, ತಮ್ಮ ಮಾತಿಗೆ ಪೂರಕವಾಗಿ ಕನಕನ ರಚನೆಗಳು ಭಾಷೆಯ ಲಯಗಾರಿಕೆಯನ್ನೂ ನಾದವನ್ನೂ ಹೀರಿಕೊಂಡು ನಳನಳಿಸುವ ಹಾಡುಗಳು ಎಂದು ಬೇಂದ್ರೆ ಹೇಳಿರುವ ಸಾಲುಗಳನ್ನು ಉಲ್ಲೇಖಿಸುತ್ತಾರೆ.

ಕನಕನ ತಿಳಿವಳಿಕೆಯ ಭಿನ್ನ ಆಯಾಮಗಳನ್ನು ಕುರಿತು ಶೋಧಿಸುವಾಗ ಆತನನ್ನು ನಾವು ಯಾವ ನೆಲೆಯಲ್ಲಿ ಇಟ್ಟು ನೋಡುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಕನಕನನ್ನು ಚಾರಿತ್ರಿಕವಾದ, ಸಾರ್ವತ್ರಿಕವಾದ ಅಥವಾ ಕುಲ-ಜಾತಿಗೆ ಸೀಮಿತವಾದ ನೆಲೆಗಳಲ್ಲಿಟ್ಟು ನೋಡಿದಾಗ, ಅಲ್ಲಿ ಭಿನ್ನ ಆಯಾಮಗಳನ್ನು ಕಾಣಬಹುದು. ಇಲ್ಲಿ, ನಂಬಿದ ಜಗತ್ತಿನ (ಜನಪದರ) ಕ್ರಮ ಹಾಗೂ ನಂಬಿಸಲ್ಪಡುವ ಜಗತ್ತಿನ ಕ್ರಮದ ಗ್ರಹಿಕೆಗಳನ್ನು ತೀವ್ರವಾಗಿ ಶೋಧಿಸುವ ಅಗತ್ಯವಿರುತ್ತದೆ.

ಕನಕರಲ್ಲಿ ಭಕ್ತಿಸಮರ್ಪಣಾ ಭಾವದ ಜತೆಜತೆಗೆ ತಾನು ನಂಬಿದ ದೈವವನ್ನು ಪ್ರಶ್ನಿಸಿಬಿಡುವ ಸಲಿಗೆ ಬೆರೆತ ತೀವ್ರತೆಯನ್ನೂ ಕಾಣಬಹುದು.

ಇಪ್ಪತ್ತೊಂದನೆ ಶತಮಾನದಲ್ಲಿ ಕರ್ನಾಟಕದ ಜನಸಮುದಾಯಗಳು ಎದುರಿಸುತ್ತಿರುವ ಹಲಬಗೆಯ ಬಿಕ್ಕಟ್ಟುಗಳಿಗೆ ಹೊಸ ಅರಿವನ್ನು ಪಡೆದುಕೊಳ್ಳುವ ಸಲುವಾಗಿ ಕನಕನ ಮರುದರ್ಶನದ ಅಗತ್ಯತೆಯಿದೆ. ಅಲೌಕಿಕದ ಶಕ್ತಿ ಇರುವುದೇ ಲೌಕಿಕ ಯಜಮಾನ್ಯವನ್ನು ನಿರಾಕರಿಸುವುದರಲ್ಲಿ, ಬಡವನೊಬ್ಬ ಫ್ಯೂಡಲ್ ನಾಯಕನೊಬ್ಬನನ್ನ ನೇರವಾಗಿ ಎದುರಿಸಲಾಗದೆ ನಿಸ್ಸಹಾಯಕನಾಗಿದ್ದಾಗ, ಆತನನ್ನು ಮೀರಿ ನಿಂತ ಆಧ್ಯಾತ್ಮಿಕ ಸಂತನನ್ನು ಒಪ್ಪಿಕೊಳ್ಳುವ ಮೂಲಕ ಫ್ಯೂಡಲ್ ನಾಯಕನನ್ನು ನಿರಾಕರಿಸುವ ಪ್ರತಿರೋಧದ ಪರಂಪರೆ ಭಕ್ತಿ ಪರಂಪರೆಯಲ್ಲಿದೆ. ನಳಚರಿತ್ರೆ, ಮೋಹನತರಂಗಿಣಿ, ರಾಮಧಾನ್ಯಚರಿತೆ, ಹರಿಭಕ್ತಿಸಾರದಂತಹ ಪ್ರಮುಖ ಕೃತಿಗಳನ್ನು ರಚಿಸಿದ ಕನಕ ಈ ತರದ ಚಿಂತನೆಗಳನ್ನು ಹೊಂದಿದ್ದ, ತನ್ನ ಹಾಡುಗಳ ಮೂಲಕ ಜನಪದರಲ್ಲಿ ಚಿರಪರಿಚಿತನಾದ ಕನಕನನ್ನು ಸಿದ್ಧಮಾದರಿಯ ಸಂತನಂತೆ ಚಿತ್ರಿಸಲಾಗಿದೆ. ಇದು, ಕನ್ನಡ ತಾಯಿ ಭುವನೇಶ್ವರಿಯ ಕಪೋಲಕಲ್ಪಿತ ಸುಂದರ ಚಿತ್ರದಷ್ಟೆ ಊಹಾತ್ಮಕವಾದ ನೆಲೆಯದ್ದು.

ಉಡುಪಿಯವರೆಗೂ ಸುದೀರ್ಘವಾದ ಪ್ರಯಾಣದಲ್ಲಿ ತೊಡಗಿದ್ದ ಕನಕ ಎಲ್ಲರಂತೆ ಇದ್ದವ. ಕತೆ-ಕಟ್ಟುಕತೆಗಳ ಮೂಲಕ ತಮ್ಮ ನಾಯಕನಿಗೆ ಸಂತತ್ವವನ್ನು ನಿಕಟಗೊಳಿಸುವ ಜನಪ್ರಿಯ ಮಾದರಿ ಇಲ್ಲೂ ಕೆಲಸ ಮಾಡಿರಬಹುದು.

ಏನೇ ಇದ್ದಾಗ್ಯೂ ಸಂತಕವಿ ಕನಕ ನಮ್ಮ ಕಾಲಕ್ಕೂ ಪ್ರಸ್ತುತ ಅನ್ನುವುದಂತೂ ಸತ್ಯ. ಚಾರಿತ್ರಿಕ ಸನ್ನಿವೇಶಗಳಿಗೆ ಸಾಕ್ಷಿಯಾಗಿದ್ದ ಸಂತಕವಿ ಕನಕನ ಮರುದರ್ಶನಗಳು ನಮಗೆ ಹೊಸ ಅರಿವು ನೀಡುವ ಸಾರ್ವಕಾಲಿಕ ಆಕರಗಳಾಗಿವೆ.

ಕೆ.ವಿ.ನಾರಾಯಣ, ಬಂಜಗೆರೆ ಜಯಪ್ರಕಾಶ್, ಕೆ.ವೈ.ನಾರಾಯಣ ಸ್ವಾಮಿ ಹಾಗೂ ಮಲ್ಲಿಕಾರ್ಜುನ ಮೇಟಿಯವರ ಟಿಪ್ಪಣಿಗಳೊಂದಿಗೆ ತೆರೆದುಕೊಂಡ "ಕನಕ: ಮರುದರ್ಶನದ ಆಯಾಮಗಳು" ಸಂವಾದ. ಮುಂದಿನ ದಿನಗಳಲ್ಲೂ ಮುಂದುವರೆಸುವ ಸೂಚನೆಗಳಿವೆ.

ಬಸವಲಿಂಗಯ್ಯ, ಆರ್.ಜಿ.ಹಳ್ಳಿ, ಡಾ.ವಸು, ಡಾಮ್ನಿಕ್, ಆರ್.ತಾರಿಣಿ ಶುಭದಾಯಿನಿ, ಬಿ.ಯು. ಸುಮಾ, ರವಿಕುಮಾರ್ ಬಾಗಿ, ಕುಂ.ವಿ.ಉಮೇಶ್ ಮೊದಲಾದವರು ಸಂವಾದದಲ್ಲಿ ವ್ಯಕ್ತಪಡಿಸಿದ ಕನಕನನ್ನು ನೋಡಬಹುದಾದ ಹಲವು ಆಯಾಮಗಳ ಸಂಕ್ಷಿಪ್ತ ನೋಟ ಇದು

● ನಾಸೆರ್ ಹುಸೇನ್

ಅಲ್ಲಿ ನೆಲದ ಮೇಲೆ ನಾಲ್ಕು-ಐದು ಮೇಕೆಗಳು ಕತ್ತು ಕತ್ತರಿಸಿಕೊಂಡು ಬಿದ್ದಿದ್ದವು. ಇನ್ನು ಎರಡು ಮೂರು ಮೇಕೆಗಳು ಕತ್ತು ಕತ್ತರಿಸಿಕೊಳ್ಳುವುದಕ್ಕೋಸ್ಕರ ಅಲ್ಲಿ ಕಟ್ಟಿ ಹಾಕಲ್ಪಟ್ಟಿದ್ದವು. ಉದ್ದನೆಯ ಹರಿತವಾದ ಚಾಕು ಹಿಡಿದುಕೊಂಡಿದ್ದ, ಬಿಳಿ ಲುಂಗಿ, ಬಿಳಿ ಶರ್ಟು ಮತ್ತು ಬಿಳಿ ಟೋಪಿ ಧರಿಸಿದ್ದ ಮೌಲ್ವಿ ಮೇಕೆಯ ಕತ್ತು ಕೊಯ್ಯುವಾಗಿನ ಕೆಂಪುರಕ್ತ ಎಲ್ಲಿ ತನ್ನ ಶ್ವೇತ ವಸ್ತ್ರಕ್ಕೆ ಹಾರುತ್ತದೋ ಎನ್ನುವಷ್ಟು ಜಾಗ್ರತೆಯಿಂದ ಅಲ್ಲಾಹು ಅಕ್ಬರ್ ಎನ್ನುತ್ತಾ ಅದೊಂದು ಸಲೀಸು ಕೆಲಸ ಎನ್ನುವಂತೆ ಮೇಕೆಯ ಕತ್ತನ್ನು ಕಚಕ್ಕೆಂದು ಕೊಯ್ದು ಬಿಸಾಡುತ್ತಿದ್ದರು. ಕತ್ತುಕೊಯ್ಯಿಸಿಕೊಂಡ ಮೇಕೆಗಳು ಪ್ರಾಣಕಳಕೊಳ್ಳುವ ಆ ಸಂದರ್ಭದಲ್ಲಿ ಯಾತನಾಮಯವಾಗಿ ಅರಚಿಕೊಳ್ಳುತ್ತಿದ್ದವು. ಪ್ರಾಣ ಕಳಕೊಂಡ ಮೇಕೆಗಳನ್ನು ಒಂದಿಬ್ಬರು ದರದರನೇ ಎಳೆದೊಯ್ದು ಅಲ್ಲಿ ಮರಕ್ಕೆ ಸಿಗಿಸಿದ್ದ ಹುಗ್ಗಗಳಿಗೆ ನೇತುಹಾಕಿ ಅದರ ಚರ್ಮ ಸುಲಿಯಲಾರಂಭಿಸಿದ್ದರು. ಹಾಗೆ ಚರ್ಮ ಸುಲಿಸಿಕೊಂಡ ಮೇಕೆಗಳು ಸಣ್ಣ ಸಣ್ಣ ಮಾಂಸದ ತುಂಡುಗಳಾಗಿ ಕೆಳಗಿನ ದೊಡ್ಡ ಪಾತ್ರೆಯನ್ನು ತುಂಬುತ್ತಿದ್ದವು. ಇನ್ನೊಂದು ಕ್ಷಣದಲ್ಲಿ ಅದು ಒಂದೊಂದು ಕಿಲೋಗಳ ಕಟ್ಟುಗಳಾಗಿ ಊರ ಎಲ್ಲಾ ಮುಸ್ಲಿಂರ ಮನೆಯನ್ನು ಸೇರಿ ಅದು ಅಲ್ಲಿನ ಒಲೆಗಳಲ್ಲಿ ಮೆಣಸು, ಉಪ್ಪು ಇನ್ನಿತರ ಮಸಾಲೆಗಳ ಜತೆ ಬೆಂದು ಅದು ಅವರ ಹೊಟ್ಟೆ ಸೇರುವುದರಲ್ಲಿತ್ತು.

ಏಳೆಂಟು ಮೇಕೆಗಳು ಹೀಗೆ ಕತ್ತು ಕೊಯ್ಯಿಸಿಕೊಂಡು ಮಾಂಸದ ತುಂಡುಗಳಾಗಿ ಹಲವರಿಗೆ ಮಾಂಸವನ್ನು ದಾನದ ರೂಪದಲ್ಲಿ ನೀಡಲು ಕಾರಣ ಆ ದೊಡ್ಡ ಮನೆಯ ಹಾಜಿ ಉಸ್ಮಾನ್ ಬ್ಯಾರಿಗಳು ಹೊತ್ತುಕೊಂಡ ಹರಕೆ. ಮದುವೆಯಾಗಿ ಹತ್ತು ವರ್ಷವಾದರೂ ತನ್ನ ಹೆಂಡತಿ ಕುಞ್ಞಾತುಮ್ಮಳ ಹೊಟ್ಟೆಯಲ್ಲಿ ಮಗುವೊಂದನ್ನು ಹುಟ್ಟಿಸಲಾಗದೇ ಸೋತು ಹೈರಾಣಾಗಿ ಕೊನೆಗೆ ತನಗೊಂದು ಮಗು ಹುಟ್ಟಿದರೆ ಮೇಕೆಯ ಮಾಂಸವನ್ನು ನೂರೆಂಟು ಮನೆಗಳಿಗೆ ದಾನ ಕೊಡುತ್ತೇನೆಂದು ಹರಕೆ ಹೊತ್ತುಕೊಂಡಿದ್ದರು. ಅವರು ಹೊತ್ತ ಹರಕೆಯ ಫಲವೋ ಹಲವು ವೈದ್ಯರನ್ನು ಕಂಡು ನಿರಂತರವಾಗಿ ಮಾಡಿದ ಚಿಕಿತ್ಸೆಯ ಫಲವೋ, ಏನೋ, ಕುಞ್ಞಾತುಮ್ಮ ಗರ್ಭಿಣಿಯಾಗಿ ಇದೀಗ ಒಂಬತ್ತು ತಿಂಗಳ ನಂತರ ಹೆಣ್ಣು ಮಗುವನ್ನು ಹೆತ್ತಿದ್ದಳು. ಆ ಕಾರಣದಿಂದ ಉಸ್ಮಾನ್ ಬ್ಯಾರಿಗಳು ಮೇಕೆಗಳ ಕತ್ತು ಕೊಯ್ಯಿಸಿ ಅದರ ಮಾಂಸವನ್ನು ಮನೆ-ಮನೆಗೂ ಕೊಡಿಸುವ ವ್ಯವಸ್ಥೆ ಮಾಡಿದ್ದರು.

ಅಲ್ಲಿ ಸಿರಿತನ ಬಿದ್ದು ಹೊರಳಾಡುತ್ತಿತ್ತು. ತಿಂದುಂಡು ಎಷ್ಟೇ ಮುಗಿಸಿದರೂ ಕರಗಲಾರದ ಆಸ್ತಿಯದು. ಆ ದೇವರು ಮತ್ತಷ್ಟು ಸುರಿದು-ಸುರಿದು ಕೊಡುತ್ತಿದ್ದ. ಅವರಿಗೆ ಗಣಿ ಉದ್ದಿಮೆ ಇದೆ. ಮರದ ವ್ಯಾಪಾರ ಇದೆ. ರಾಜಕಾರಣಿಗಳ ಕೃಪಾಕಟಾಕ್ಷ ಸದಾ ಅವರ ಮೇಲಿದೆ. ಎಲ್ಲಾ ರಾಜಕೀಯ ಪಕ್ಷದವರು ಅಲ್ಲಿ ಬಂದು ತಿಂದುಂಡು ಬೊಗಸೆ-ಬೊಗಸೆ ಬಾಚಿಕೊಂಡು ಹೋಗುತ್ತಿದ್ದಾರೆ. ಕುಞ್ಞಾತುಮ್ಮ ಮಗುವೊಂದನ್ನು ಹೆತ್ತ ಈ ಸಂದರ್ಭದಲ್ಲಿ ಕತ್ತು ಕೊಯ್ಯಿಸಿಕೊಂಡ ಮೇಕೆಗಳ ಮಾಂಸಗಳು ಕಟ್ಟುಗಳಾಗಿ ಹಲವು ಮನೆಗಳನ್ನು ಸೇರಿದರೆ, ಇಲ್ಲಿ ಹಾಜಿ ಉಸ್ಮಾನ್ ಬ್ಯಾರಿಯ ಮನೆಯಲ್ಲಿ ಭಾರೀ ಔತಣ ಏರ್ಪಾಡಾಗಿದೆ. ಆ ಔತಣ ಕೆಲವೇ ಮಂದಿ ವಿ.ಐ.ಪಿಗಳಿಗೆ ಮಾತ್ರ. ಮಾಂಸದ ಕಟ್ಟುಗಳು ತಲುಪಿದ ಮನೆಯವರಿಗೆ ಆ ಔತಣಕೂಟಕ್ಕೆ ಆಮಂತ್ರಣವಿರಲಿಲ್ಲ. ಅಂತಹ ದಾನ ಪಡೆದುಕೊಂಡವರು ಇಂತಹ ಔತಣಕೂಟಕ್ಕೆ ಬಂದರೆ ಹಾಜಿ ಉಸ್ಮಾನ್ ಬ್ಯಾರಿಯ ಗೌರವಕ್ಕೆ ಕುಂದುಂಟಾಗುತ್ತದೆ. ಆದಕಾರಣ ಅಂತವರು ಬರಬಾರದು. ಈ ಔತಣಕೂಟಕ್ಕೆ ಆಮಂತ್ರಣವಿದ್ದುದು ಜಮಾತಿನ ಕೆಲವು ಮಂದಿ ಶ್ರೀಮಂತಗಣ್ಯರಿಗೆ, ರಾಜಕಾರಣಿಗಳಿಗೆ, ಪೊಲೀಸ್ ಅಧಿಕಾರಿಗಳಿಗೆ ಮತ್ತು ಉಸ್ಮಾನ್ ಬ್ಯಾರಿ ಹಾಜಿಯ ಶ್ರೀಮಂತಿಕೆಗೆ ಸರಿಸಮಾನ ಸ್ಥಾನದಲ್ಲಿರುವವರಿಗೆ ಮಾತ್ರ. ಹಾಗಾಗಿ ಅಲ್ಲಿ ದೊಡ್ಡ ದೊಡ್ಡ ಕಾರುಗಳಲ್ಲಿ ವಂದಿಮಾಗಧರು ಆಗಮಿಸತೊಡಗಿದರು.

******

ಇತ್ತ ಅದೇ ಊರಿನ ಕೊನೆಯ ಒಂದು ಸಣ್ಣ ಮನೆಯಲ್ಲಿ ಹಾಜಿರಾ ಎನ್ನುವವಳು ತಲೆಯ ಮೇಲೆ ಕೈಹೊತ್ತು ಕುಳಿತಿದ್ದಾಳೆ. ಒಳಗೆ ಅವಳ ಗಂಡ ಕಾಲು ಮುರಿದುಕೊಂಡು ಬಿದ್ದಿದ್ದಾನೆ. ಇಬ್ಬರು ಮಕ್ಕಳು ಪ್ರೈಮರಿ ಶಾಲೆಗೆ ಹೋಗಿದ್ದಾರೆ. ಅವಳ ಗಂಡ ಇಬ್ರಾಹಿಂ ಕಾಲು ಮುರಿದು ಬಿದ್ದ ಮೇಲೆ ಅವಳ ಸಂಸಾರ ಸಾಗುವುದು ಕಷ್ಟವಾಗಿದೆ. ಗಂಡ ಗಾರೆ ಕೆಲಸ ಮಾಡಿಕೊಂಡು ಹೆಂಡತಿ-ಮಕ್ಕಳ ಹೊಟ್ಟೆ ಹೊರೆಯುತ್ತಿದ್ದ. ಹಾಜಿರಾ ಅಲ್ಪ ಸ್ವಲ್ಪ ಬೀಡಿ ಕಟ್ಟುತ್ತಿದ್ದಳು. ಅವನು ಗಾರೆ ಕೆಲಸ ಮಾಡುವಾಗ ಎತ್ತರದಿಂದ ಬಿದ್ದು ಒಂದಿಷ್ಟು ದಿನ ಆಸ್ಪತ್ರೆಯಲ್ಲಿ ಮಲಗಿದ. ಅಲ್ಲಿ ಆಪರೇಷನ್ ಮತ್ತು ಇನ್ನಿತರ ಚಿಕಿತ್ಸೆಗೆ ಇದ್ದ ಹಣವೆಲ್ಲಾ ಖರ್ಚಾಯಿತು. ಜತೆಗೆ ಮೈ ಮೇಲೆ ಇದ್ದ ಅಲ್ಪ ಸ್ವಲ್ಪ ಚಿನ್ನವನ್ನು ಮಾರಿ ಆಯಿತು. ಅವನು ಆಸ್ಪತ್ರೆಯಿಂದ ಬಂದು ಮನೆಯಲ್ಲಿಯೇ ಇರುವಂತಾದ ಮೇಲೆ ಅವನ ಚಾಕರಿ ಮತ್ತು ಮಕ್ಕಳ ಚಾಕರಿ ನಡುವೆ ಅವಳಿಗೆ ಬೀಡಿ ಕಟ್ಟುವುದಕ್ಕೂ ಸಮಯಾವಕಾಶ ಇರಲಿಲ್ಲ.

# ನತದೃಷ್ಟರು

ಅವಳು ತಲೆಯ ಮೇಲೆ ಕೈಹೊತ್ತು ಕುಳಿತಿದ್ದಾಳೆ. ಮನೆಯಲ್ಲಿನ ಎಲ್ಲವೂ ಬರಿದಾಗಿದೆ. ಅಡುಗೆ ಕೋಣೆಯಲ್ಲಿ ಒಂದು ಪಾವು ಅಕ್ಕಿ ಇಲ್ಲ. ಮೆಣಸು, ಸಕ್ಕರೆ, ಬೇಳೆ ಯಾವುದೂ ಇಲ್ಲ. ಎಲ್ಲಾ ಡಬ್ಬ ಖಾಲಿ ಖಾಲಿಯಾಗಿದೆ. ಇನ್ನೇನು ಮಕ್ಕಳು ಬರುತ್ತಾರೆ. ಉಮ್ಮಾ ಹಸಿವು ಎನ್ನುತ್ತಾರೆ. ಆಗ ತಾನು ಏನು ಬಡಿಸಿ ಹಾಕಲಿ ಅವರಿಗೆ. ಅವಳ ಕಣ್ಣಲ್ಲಿ ಕಂಬನಿ ಸುರಿಯಲಾರಂಭಿಸಿತು.



ಇದೀಗ ಅವಳು ತಲೆಯ ಮೇಲೆ ಕೈಹೊತ್ತು ಕುಳಿತಿದ್ದಾಳೆ. ಮನೆಯಲ್ಲಿನ ಎಲ್ಲವೂ ಬರಿದಾಗಿದೆ. ಅಡುಗೆ ಕೋಣೆಯಲ್ಲಿ ಒಂದು ಪಾವು ಅಕ್ಕಿ ಇಲ್ಲ, ಮೆಣಸು, ಸಕ್ಕರೆ, ಬೇಳೆ ಯಾವುದೂ ಇಲ್ಲ. ಎಲ್ಲಾ ಡಬ್ಬ ಖಾಲಿ ಖಾಲಿಯಾಗಿದೆ. ಇನ್ನೇನು ಮಕ್ಕಳು ಬರುತ್ತಾರೆ. ಉಮ್ಮಾ ಹಸಿವು ಎನ್ನುತ್ತಾರೆ. ಆಗ ತಾನು ಏನು ಬಡಿಸಿ ಹಾಕಲಿ ಅವರಿಗೆ, ಅವಳ ಕಣ್ಣಲ್ಲಿ ಕಂಬನಿ ಸುರಿಯಲಾರಂಭಿಸಿತು.

ಕತೆ

ಅಷ್ಟರಲ್ಲಿ ಅವಳ ಅಂಗಳದಲ್ಲಿ ಪ್ರತ್ಯಕ್ಷನಾದ ಹುಡುಗನೊಬ್ಬ ತಾನು ತಂದ ದೊಡ್ಡ ಚೀಲದಿಂದ ಒಂದು ಕಿಲೋದಷ್ಟಿರಬಹುದಾದ ಮೇಕೆಯ ಮಾಂಸದ ಕಟ್ಟನ್ನು ಕೊಟ್ಟು "ಇದು ಉಸ್ಮಾನ್ ಹಾಜಿಗೆ ಮಗು ಹುಟ್ಟಿದ ಕಾರಣಕ್ಕೆ ಮೇಕೆಯ ಮಾಂಸದ ದಾನ" ಎಂದು ಹೊರಟು ಹೋದ. ಅವಳು ಒಮ್ಮೆ ತನ್ನ ಕೈಯಲ್ಲಿರುವ ಆ ಮಾಂಸದ ಕಟ್ಟನ್ನೇ ನೋಡಿದಳು. ಇದನ್ನು ಬೇಯಿಸಿ ಸಾರು ಮಾಡಬೇಕೆಂದಾದರೆ ಮೆಣಸು, ಈರುಳ್ಳಿ, ಟೊಮೋಟೋ, ಶುಂಠಿ ಎಂದು ಎಲ್ಲಾ ಬೇಕು. ಬರಿ[...] ಪಾವು ಅಕ್ಕಿ ತರಲು ಕೈಯಲ್ಲಿ ದುಡ್ಡಿಲ್ಲದಿರುವಾಗ ಇದ[...] ಇಟ್ಟುಕೊಂಡು ಏನು ಮಾಡಲಿ ಎಂದು ತಲೆ ಕೆಡಿಸಿಕೊಂ[...] ಅದನ್ನು ಒಳಗೆ ಕೊಂಡೊಯ್ದು ಅಡುಗೆ ಕೋಣೆಯ[...] ಇರಿಸಿ ಬಂದಳು.

ಅಷ್ಟು ಹೊತ್ತಿಗೆ ಸ್ವಲ್ಪ ದೂರದ ಮನೆಯ ಬೀ[...] ಅಲ್ಲಿಗೆ ಬಂದಳು. "ಹಾಜಿರಾ, ನಿನ್ನ ಮಗ ಶಾಲೆಯಿಂ[...] ಬಂದನೇನು? ಮನೆಗೆ ನೆಂಟರು ಬಂದಿದ್ದಾರೆ. ರಾತ್ರಿ ಇ[...] ಇರುತ್ತಾರೆ. ಅಪರೂಪಕ್ಕೆ ಬಂದವರು. ಅವರಿ[...] ಸಾಮಾನ್ಯವಾದ ಊಟ ಹಾಕಲಾಗುತ್ತದೆಯೇ" ಎಂದವ[...] ಅವಳ ಕೈಗೆ ಇನ್ನೂರೈವತ್ತು ರೂಪಾಯಿ ನೀಡಿ, "ನಿ[...] ಮಗನನ್ನು ಮಟನ್ ಸಾಬಿಯಾ ಬಳಿ ಕಳುಹಿಸಿ ನನ[...] ಒಂದು ಕಿಲೋ ಆಡಿನ ಮಾಂಸ ತರಿಸಿ ನನ್ನ ಮನ[...] ತಲುಪಿಸಿ ಬಿಡು" ಎಂದು ಅವಳು ಹೊರಟು ಹೋದಳ[...]

ಬೀಬಿ ಹೋದಮೇಲೆ ಹಾಜಿರಾಗೆ ಒಂದು ಯೋಚ[...] ಬಂತು. ಆ ಇನ್ನೂರೈವತ್ತು ರೂಪಾಯಿಯಿಂದ ನಾಲ[...] ದಿನಕ್ಕಾಗುವಷ್ಟು ಅಕ್ಕಿ ಇನ್ನಿತರ ದಿನಸಿ ಸಾಮಾನುಗಳ[...] ತರಬಹುದು ಎಂಬ ಯೋಚನೆ ಮೂಡಿದಾಗ ಸ್ವ[...] ಗೆಲುವಾದಳು.


ಶಾಲೆಯಿಂದ ಮಕ್ಕಳಿಬ್ಬರೂ ಬಂದಮೇಲೆ ಮಗ[...] ಕೈಯಲ್ಲಿ ಮನೆಯೊಳಗಿದ್ದ ಮಾಂಸದ ಕಟ್ಟನ್ನು ಕೊಟ[...] "ಮೋನೇ ಇದನ್ನು ಬೀಬಿಯಮ್ಮನ ಮನೆಗೆ ಕೊಟ[...] ಬಾ" ಎಂದು ಅವನನ್ನು ಬೀಬಿಯ ಮನೆಗೆ ಕಳುಹಿಸಿದಳ[...]

ಬೀಬಿಯ ಮನೆಗೆಂದು ಕಟ್ಟನ್ನು ಹಿಡಿದುಕೊಂ[...] ರಸ್ತೆಯಲ್ಲಿ ನಡೆಯುತ್ತಾ ಹೋದ ಹುಡುಗನ ಹಿಂದೆ ಮಾಂಸ[...] ವಾಸನೆಗೆ ನಾಯಿಯೊಂದು ಅವನ ಹಿಂದೆಯೆ[...] ಬರತೊಡಗಿತು. ಹಿಂದೆ ನಾಯಿ ಬರುವುದನ್ನು ನೋ[...] ಹೆದರಿದ ಹುಡುಗ ಬೀಸು ಹೆಜ್ಜೆ ಹಾಕಲು ಹೋ[...] ಒಂದು ಕಡೆ ಎಡವಿ ಬಿದ್ದುಬಿಟ್ಟ. ಅವನು ಬಿದ್ದ ರಭಸ[...] ಅವನ ಕೈಯಲ್ಲಿದ್ದ ಮಾಂಸದ ಕಟ್ಟು ದೂರ ಚಿ[...] ಮಾಂಸವೆಲ್ಲಾ ಚೆಲ್ಲಾಪಿಲ್ಲಿಯಾಯಿತು. ಬಿದ್ದಲ್ಲಿಂದ ಎ[...] ನೋಡಿದರೆ ಚೆಲ್ಲಾಪಿಲ್ಲಿಯಾದ ಆ ಮಾಂಸ ನಾಯಿಂ[...] ಪಾಲಾಗಿತ್ತು.


ಬೀಬಿ ಕೊಟ್ಟ ಇನ್ನೂರೈವತ್ತು ರೂಪಾಯಿಯ[...] ಹಿಡಿದುಕೊಂಡು ಇನ್ನೇನು ರಹಮಾನ್ ಬ್ಯಾರಿಗಳ ದಿನ[...] ಅಂಗಡಿಗೆ ಹೋಗಬೇಕು ಅನ್ನುವಷ್ಟರ[...] ಅದು ಯಾವ ದಾರಿಯಿಂದಲೋ[...] ಹಿಂದಕ್ಕೆ ಬಂದ ಬೀಬಿ "ಹಾಜಿರ[...] ನನ್ನ ಮನೆಗೆ ಉಸ್ಮಾನ್ ಹಾಜಿಯ[...] ಮನೆಯಿಂದ ಆಡಿನ ಮಾಂಸದ ಕಟ[...] ಬಂದಿದೆ. ಇವತ್ತು ಮಾಂಸ ತರುವುದು[...] ಬೇಡ" ಎಂದು ಅವಳ ಕೈಯಲ್ಲಿದ್ದ ಇನ್ನೂರೈವ[...] ರೂಪಾಯಿಯನ್ನು ಕಸಿದುಕೊಂಡು ಹೋದಳು.

ಒಮ್ಮೆಲೆ ಗರ ಬಡಿದವಳಂತಾದ ಹಾಜಿರಾಳಿಗೆ ಕಣ[...] ಕತ್ತಲಿಟ್ಟು ಬಂದಂತಾಗಿ ಅಲ್ಲೇ ನೆಲಕ್ಕೆ ಕುಸಿದಳು.

● ಪಕ್ರುದ್ದೀನ್ ಇರುವೈಲ್[...]



# ಪ್ರಕಾಶ್‌ರವರ ಐನಕೈ ಮಲೆನಾಡು ಪ್ರಾಡಕ್ಟ್ಸ್



ತರೇವಾರಿ ರೈತರು

ಮಲೆನಾಡು ಪ್ರದೇಶದಲ್ಲಿ ಈಗ ತಲೆ ಎತ್ತುತ್ತಿರುವ ಒಂದು ವಿಶಿಷ್ಟ ಉದ್ದಿಮೆ ಎಂದರೆ ಅದು ಐನಕೈ ಮಲ್ನಾಡ್ ಪ್ರಾಡಕ್ಟ್ಸ್.

ಇದರ ಈಗಿನ ಸಾರಥಿ ಪ್ರಕಾಶ್ ದೇವಣ್ಣ ಸೇಟ್ ಎಂಬುವರು.

ನೀವೇನಾದರೂ ವಿಶ್ವಪ್ರಸಿದ್ಧ ಜೋಗ ಜಲಪಾತವನ್ನು ನೋಡಲು ಸಿದ್ದಾಪುರ ಅಥವಾ ಹೊನ್ನಾವರ ಮಾರ್ಗವಾಗಿ ಹೊರಟರೆ ಹಾದಿಯ ನಡುವೆ ಮಾವಿನಗುಂಡಿ ಎಂಬ ಪುಟ್ಟ ಗ್ರಾಮ ಸಿಗುತ್ತದೆ. ಅದೇರೀತಿ ಶಿವಮೊಗ್ಗ ಕಡೆಯಿಂದ ಸಾಗರ ಮಾರ್ಗವಾಗಿ ಜೋಗಕ್ಕೆ ಬಂದನಂತರ ಅಲ್ಲಿಂದ ಮುಂದಕ್ಕೆ 5.ಕಿ.ಮೀ. ಸಾಗಿದರೆ ಮಾವಿನಗುಂಡಿ ಇದೆ.

ಅಲ್ಲಿಯೇ ಮಲೆನಾಡಿನ ರೈತ ಪ್ರಕಾಶರ ಐನಕೈ ಮಲ್ನಾಡ್ ಪ್ರಾಡಕ್ಟ್ಸ್‌ನ ಪುಟ್ಟ ಕಾರ್ಖಾನೆ ಹಾಗೂ ಸೇಲ್ಸ್ ಕೌಂಟರ್ ಇರುವುದು ಅಲ್ಲೆ.

ಇಲ್ಲಿ ಪೈನಾಪಲ್ ಹಾಗೂ ಕೋಕಂ ಹಣ್ಣುಗಳ ತಿರುಳಿನ ರಸ ತಯಾರಿಸಿ ಮಾರಲಾಗುತ್ತಿದೆ. ಮಲೆನಾಡಿನಲ್ಲೀಗ ಅನಾನಸ್ ಹಣ್ಣನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಈ ಹಣ್ಣುಗಳನ್ನು ತಮಿಳುನಾಡು, ಮುಂಬೈ, ಕೊಲ್ಕತ್ತಾವರೆಗೂ ಸರಬರಾಜು ಮಾಡಲಾಗುತ್ತಿದೆ.

ಅದೇರೀತಿ ಕೋಕಂ ಹಣ್ಣು ಸಹ ಅನೇಕ ಶತಮಾನಗಳಿಂದಲೂ ಮಲೆನಾಡಿನ ಅಡುಗೆಮನೆಯಲ್ಲಿ ಸ್ಥಾನ ಪಡೆದುಕೊಂಡಿದೆ. ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಅಡುಗೆಯಲ್ಲಿ ಹುಣಸೇಹಣ್ಣನ್ನು ಹೇಗೆ ಹುಳಿಯ ವಸ್ತುವಾಗಿ ಬಳಸುತ್ತಾರೋ ಅದೇರೀತಿಯಲ್ಲಿ ಮಲೆನಾಡಿನಲ್ಲಿ ಕೋಕಂ ಹಣ್ಣಿನ ಹುಳಿಯನ್ನು ಅಡುಗೆಗೆ ಉಪಯೋಗಿಸುತ್ತಾರೆ.

ಈಗ ಪ್ರಕಾಶ್‌ರವರು ಈ ಕೋಕಂ ಹಣ್ಣನ್ನು ಸಂಸ್ಕರಿಸಿ ರಸ ತಯಾರಿಸಿ ಬಾಟಲ್‌ಗಳಲ್ಲಿ ತುಂಬಿ ಮಾರುತ್ತಿದ್ದಾರೆ. ಕೋಕಂ ಮೊದಲಿನಂತೆ ಸೀಜನಲ್ ಪ್ರಾಡಕ್ಟ್ ಅಲ್ಲ. ಈಗ ವರ್ಷವಿಡೀ ದ್ರವರೂಪದಲ್ಲಿ ಲಭ್ಯವಿದೆ. ಅದನ್ನು ಅಡುಗೆಗೂ ಬಳಸಬಹುದು. ಕೊಂಚ ನೀರು ಬೆರೆಸಿಕೊಂಡು ಜ್ಯೂಸ್ ಆಗಿಯೂ ಕುಡಿಯಬಹುದು.

ಐನಕೈ ಮಲ್ನಾಡ್ ಪ್ರಾಡಕ್ಟ್ ಸದ್ಯಕ್ಕೆ ಇವೆರಡು ಉತ್ಪನ್ನಗಳನ್ನು ತಯಾರಿಸುತ್ತಿದೆ. ಇದು ಹೇಗೆ ಶುರುವಾಯಿತೆಂಬುದು ಒಂದು ಸ್ವಾರಸ್ಯಕರ ಕತೆ.

ಈಗ್ಗೆ ಆರು ದಶಕಗಳ ಹಿಂದೆಯೇ ತ್ರ್ಯಂಬಕ ಹೆಗಡೆ ಎಂಬುವರು ಪೈನಾಪಲ್ ಹಾಗೂ ಕೋಕಂ ಹಣ್ಣುಗಳನ್ನು ಸಂಸ್ಕರಿಸಿ ಸಾಂದ್ರೀಕೃತ ಜ್ಯೂಸ್ ತಯಾರಿಸಿ ಬಯಸಿದವರಿಗೆ ನೀಡುತ್ತಿದ್ದರು. ನಂತರ ಅವರ ಮಗ ಅಶೋಕ ಹೆಗಡೆ ಎಂಬುವರು ಮೂವತ್ತು ವರ್ಷ ಇದೇ ಉದ್ಯಮ ನಡೆಸಿಕೊಂಡು ಬಂದರು. ಆದರೆ ಅವರಿಗೆ ನಿರೀಕ್ಷಿಸಿದಷ್ಟು ಯಶಸ್ಸು ಸಿಗದೆ ಹೋದಾಗ ಘಟಕ ನಿಲ್ಲಿಸುವ ಹಂತದಲ್ಲಿ ಪ್ರಕಾಶ್ ಕಾಣಿಸಿಕೊಂಡರು. ಲೀಸ್ ಆಧಾರದ ಮೇಲೆ ಅದೇ ಘಟಕವನ್ನು ಐದು ವರ್ಷ ನಡೆಸಿ ಇದರಿಂದ ಲಾಭ ಸಾಧ್ಯ ಎನಿಸಿದಾಗ ಈಗ ತಮ್ಮದೇ ಆದ ಐನಕೈ ಪ್ರಾಡಕ್ಟ್ ಎಂಬ ಚಿಕ್ಕ ಉದ್ಯಮ ಪ್ರಾರಂಭಿಸಿದ್ದಾರೆ.

ಬಹುತೇಕ ಕುಟುಂಬದ ಸದಸ್ಯರೇ ಕೆಲಸ ನಿರ್ವಹಿಸುತ್ತಾರೆ. ಸದ್ಯಕ್ಕೆ ಒಬ್ಬ ನೌಕರ ಕಾಯಂ ಕೆಲಸ ಮಾಡುತ್ತಾನೆ. 30x40 ಅಡಿ ವಿಸ್ತೀರ್ಣದ ಕಟ್ಟಡವೊಂದನ್ನು ಪ್ರಕಾಶ್ ನಿರ್ಮಿಸಿಕೊಂಡಿದ್ದಾರೆ. ಒಟ್ಟು 13 ಲಕ್ಷ ಬಂಡವಾಳ ಹಾಕಿದ್ದು 7 ಲಕ್ಷ ಬ್ಯಾಂಕ್ ಸಾಲವಾದರೆ, ಕೇಂದ್ರ ಸರ್ಕಾರ[...] ರಾಷ್ಟ್ರೀಯ ತೋಟಗಾರಿಕಾ ಮಿಶನ್ ವತಿಯಿಂದ ನಾ[...] ಲಕ್ಷ ರೂಪಾಯಿ ಸಬ್ಸಿಡಿ ಸಿಕ್ಕಿದೆ. ಶುರುವಾದ ಮೊದ[...] ವರ್ಷದಲ್ಲಿ ಎರಡು ಲಕ್ಷ ರೂಪಾಯಿಗಳಷ್ಟು ವಹಿವಾ[...] ನಡೆಸಿದ್ದಾರೆ. ಮುಲ್ಕಿಯಿಂದ ತರಿಸಿದ ಉತ್ತಮ ಕ್ವಾಲಿಟಿ[...] ಬಾಟಲ್‌ಗಳನ್ನು ಜ್ಯೂಸ್ ತುಂಬಲು ಬಳಸುತ್ತಿದ್ದಾರೆ.

ಈ ಉದ್ಯಮ ಯಶಸ್ವಿಯಾಗುವ ಆತ್ಮವಿಶ್ವಾ[...] ಪ್ರಕಾಶ್‌ರಿಗೆ ಇದೆ. ಏಕೆಂದರೆ ಮಲೆನಾಡಿನ ಲಕ್ಷಾಂತ[...] ಜನ ಈಗ ಕರ್ನಾಟಕದ ಎಲ್ಲೆಡೆ ನೆಲೆಸಿದ್ದಾರೆ. ಅವ[...] ತಮ್ಮ ಪರಂಪರಾಗತ ಅಡುಗೆಯ ವಸ್ತು ಕೋಕಂ ಹಿ[...] ರೆಡಿ ಪ್ಯಾಕ್‌ನಲ್ಲಿ ವರ್ಷವಿಡೀ ಸಿಗುತ್ತದೆಯೆಂದರೆ ಖಂಡಿ[...] ಖರೀದಿಸುತ್ತಾರೆಂಬ ನಂಬಿಕೆ ಪ್ರಕಾಶ್‌ರಿಗಿದೆ.

ಸರಳ ನಡವಳಿಕೆಯ, ಸದಾ ನಗುಮೊಗದ ಪ್ರಕಾ[...] ದೇವಣ್ಣ ಸೇಟ್‌ರ ಹೊಸ ಉದ್ಯಮಕ್ಕೆ ಯಶ ಸಿಗಲಿ.


ನೀವೆಂದಾದರೂ ಜೋಗ ನೋಡಲು ಹೋದ[...] ಮಾವಿನಗುಂಡಿಯಲ್ಲಿ ಪೈನಾಪಲ್ ಅಥವಾ ಕೋ[...] ಜ್ಯೂಸ್ ಸವಿದು ಬನ್ನಿ.

# ಮೀಸಲಾತಿ ವರ್ಗೀಕರಣ ಆಗಲೇಬೇಕು

ಬ್ರಿಟಿಷ್ ಸರಕಾರ 1911ರ ಜನಗಣತಿ ಸಂದರ್ಭದಲ್ಲಿ ಅಸ್ಪೃಶ್ಯರಿಗೆ ಮೀಸಲಾತಿ ಕಲ್ಪಿಸಲು ಈ 10 ಮಾನದಂಡಗಳ ಮೂಲಕ ಅವರನ್ನು ಗುರುತಿಸಿತು.

ಬ್ರಾಹ್ಮಣರ ಶ್ರೇಷ್ಠತೆಯನ್ನು ತಿರಸ್ಕರಿಸುವವರು.
ಬ್ರಾಹ್ಮಣರ ಅಥವಾ ಇನ್ನಾವುದೇ ಹಿಂದೂ ಗುರುಗಳಿಂದ ಮಂತ್ರ, ಸಂಸ್ಕಾರ ಸ್ವೀಕರಿಸದವರು.
ವೇದಗಳನ್ನು ಧಿಕ್ಕರಿಸುವವರು.
ಹಿಂದೂ ದೇವತೆಗಳನ್ನು ಪೂಜಿಸದವರು.
ಬ್ರಾಹ್ಮಣರಿಂದ ಸೇವೆ ಪಡೆಯಲಾರದವರು.
ಹಿಂದೂ ದೇವಾಲಯಗಳ ಒಳಗೆ ಪ್ರವೇಶ ಮಾಡಲಾರದವರು.
ಬ್ರಾಹ್ಮಣ ಪುರೋಹಿತರನ್ನು ಹೊಂದದವರು.
ಅಪವಿತ್ರತೆ ಮೈಲಿಗೆ ಕಾರಣರಾಗುವವರು.
ಶವವನ್ನು ಹೂಳುವವರು.
ದನ ತಿನ್ನುವವರು.

ಈ ಹತ್ತು ಅಂಶಗಳ ವ್ಯಾಪ್ತಿಗೆ ಬರುವ ಜಾತಿಗಳನ್ನು ಪ್ರಥಮವಾಗಿ 1911ರ ಜನಗಣತಿಯಲ್ಲಿ ಅಸ್ಪೃಶ್ಯರು ಎಂದು, 1921ರ ಜನಗಣತಿಯಲ್ಲಿ




ಬಹಿಷ್ಕೃತವರ್ಗ ಎಂದು, 1931ರ ಜನಗಣತಿಯಲ್ಲಿ ಪರಿಶಿಷ್ಟಜಾತಿ ಎಂದು ಗುರುತಿಸಿ ದಾಖಲಿಸಲಾಯಿತು (ಡಾ.ಎಚ್.ಟಿ.ಪೋತೆ: 2006; ಪು-253). ಈ ಮೇಲಿನ ಹತ್ತು ಅಂಶಗಳು ಅಸ್ಪೃಶ್ಯರ ಜ್ಞಾನ, ವಿದ್ಯಾರ್ಹತೆ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಿವೆ. ಹೀಗಾಗಿ ಅಂದಿನಿಂದ ಮೀಸಲಾತಿಗೆ ಅಸ್ಪೃಶ್ಯತೆಯೇ ಮಾನದಂಡವಾಗಿತ್ತು. ಆದರೆ ಇಂದು ನಮ್ಮನ್ನು ಆಳುವವರು ತಮ್ಮ ಓಟು ಬ್ಯಾಂಕ್ ರಾಜಕಾರಣಕ್ಕಾಗಿ ಅಸ್ಪೃಶ್ಯರಲ್ಲದ ಕೆಲವು ಸ್ಪೃಶ್ಯ (ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳನ್ನು ಪರಿಶಿಷ್ಟಜಾತಿ ಪಟ್ಟಿಯಲ್ಲಿ ಸೇರಿಸಿದ್ದಾರೆ. ಅಸ್ಪೃಶ್ಯರಿಗೆ ಸಿಗಬೇಕಾದ ಮೀಸಲಾತಿ ಸೌಲಭ್ಯಗಳು ಸ್ಪೃಶ್ಯ (ಬೋವಿ, ಲಂಬಾಣಿ ಇತ್ಯಾದಿ) ಜಾತಿಗಳು ಪಡೆದುಕೊಳ್ಳುತ್ತಿದ್ದಾರೆ.

ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಾತನಾಡುವುದಾದರೆ ಈ ಸ್ಪೃಶ್ಯ ಜಾತಿಗಳು ಮೀಸಲಾತಿ ಪಟ್ಟಿಯಲ್ಲಿರುವುದು ಅಸಂಗತ. ಹಾಗಂತ ಅವರಿಗೆ ಸಂವಿಧಾನದತ್ತ ಹಕ್ಕುಗಳು ದೊರೆಯಬಾರದು ಎಂದಾಗಲಿ, ಅವರು ಆರ್ಥಿಕವಾಗಿ ಪ್ರಬಲರೆಂದಾಗಲಿ ನಾನು ಹೇಳುತ್ತಿಲ್ಲ. ಬೋವಿ, ಲಂಬಾಣಿ ಮುಂತಾದ ಜಾತಿಗಳು ಸಹ ಸಾಮಾಜಿಕ ಮತ್ತು ಆರ್ಥಿಕ ಶೋಷಣೆಗೆ ಗುರಿಯಾಗಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಪಟ್ಟಭದ್ರ ಶಕ್ತಿಗಳ ಚಾರಿತ್ರಿಕ ಕುತಂತ್ರದ ಫಲವಾಗಿ ಸಾಮಾಜಿಕ ಜೀವನದಿಂದಲೇ ಬಹಿಷ್ಕೃತಗೊಂಡು, ಅಸ್ಪೃಶ್ಯತೆಯೆಂಬ ಅಮಾನವೀಯ ಕಳಂಕಕ್ಕೆ ಗುರಿಯಾದ ಜಾತಿಗಳನ್ನು ಯಾವ ಕಾರಣಕ್ಕೂ ಸ್ಪೃಶ್ಯ ಜಾತಿಗಳ ಪರಿಸ್ಥಿತಿಗೆ ಹೋಲಿಸಲಾಗುವುದಿಲ್ಲ.

ಅಸ್ಪೃಶ್ಯತೆಯ ಕಳಂಕವನ್ನು ನಿವಾರಣೆ ಮಾಡಿ ಸಾಮಾಜಿಕ ಸ್ವಾಸ್ಥವನ್ನು, ಸಮಾನತೆಯನ್ನು ಸಾಧಿಸಲಿಕ್ಕಾಗಿ ನಮ್ಮ ಸಂವಿಧಾನ ಮೀಸಲಾತಿಯೆಂಬ ಪರಿಹಾರವನ್ನು ಒದಗಿಸಿದೆ. ಹೀಗೆ ಮೀಸಲಾತಿ ಒದಗಿಸುವಾಗ ಪರಿಶಿಷ್ಟಜಾತಿ ಎಂಬ ಪ್ರತ್ಯೇಕ ವರ್ಗೀಕರಣ ಮಾಡಲು ಅಸ್ಪೃಶ್ಯತೆಯೆ ಮಾನದಂಡವಾಗಿತ್ತು. ಆದರೆ ಇಂದು ಆಳುವವರ ಓಟ್‌ಬ್ಯಾಂಕ್ ರಾಜಕಾರಣದ ದುಷ್ಪರಿಣಾಮವಾಗಿ ಪ.ಜಾತಿ ಎಂಬ ವರ್ಗ ಕಲಸುಮೇಲೋಗರವಾಗಿ ತುಳಿತಕ್ಕೊಳಗಾದ ಜಾತಿಗಳೇ ಪರಸ್ಪರ ವಿರುದ್ಧ ನೆಲೆಯಲ್ಲಿ ನಿಲ್ಲಬೇಕಾದ ದುಸ್ಥಿತಿ ಬಂದಿದೆ. ನಿರ್ದಿಷ್ಟವಾಗಿ ಉತ್ತರ ಕರ್ನಾಟಕ ಭಾಗದಲ್ಲಿ, ಪ.ಜಾತಿ ಮೀಸಲಾತಿಯ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳುತ್ತಿರುವವರು ಸ್ಪೃಶ್ಯ ಜಾತಿಗಳೇ ಎಂಬುದರಲ್ಲಿ ಅನುಮಾನವಿಲ್ಲ. ಹೀಗಾಗಿ ನಿಜವಾದ ಪರಿಶಿಷ್ಟರು ಅಂದರೆ ಅಸ್ಪೃಶ್ಯರು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ.

ತನ್ನ ಪಾಲಿನ ಅನ್ನವನ್ನು ತಾನೇ ತಿನ್ನುವುದು ನಿಸರ್ಗದ ನಿಯಮ ಮತ್ತು ಸಾಮಾಜಿಕ ನ್ಯಾಯ. ಇನ್ನೊಬ್ಬರು ತಿನ್ನುವುದು ಪ್ರಕೃತಿಗೆ ವಿರುದ್ಧ ಮತ್ತು ಅಮಾನವೀಯವಾದದ್ದು. ಇದು ಮತ್ತೊಮ್ಮೆ ಶೋಷಣೆಗೆ ರಹದಾರಿ ಒದಗಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆಗನುಸಾರವಾಗಿ ಅಧಿಕಾರದಲ್ಲಿ ಪಾಲು ಪಡೆಯುವುದು ಎಲ್ಲಾ ಶೋಷಿತ ಜಾತಿಗಳ ಹಕ್ಕು. ಇದೇ ಅಂಬೇಡ್ಕರ್ ಅವರ ಆಶಯವೂ ಆಗಿತ್ತು. ಒಟ್ಟಾರೆ ಎಲ್ಲಾ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಆರ್ಥಿಕ, ರಾಜಕೀಯ, ಶೈಕ್ಷಣಿಕ, ಆಡಳಿತ ರಂಗಗಳಲ್ಲಿ ಪ್ರಾತಿನಿಧ್ಯತೆ ಮತ್ತು ಪಾಲು ಪಡೆಯಬೇಕೆಂಬುದು ಅವರ ಸಮಗ್ರ ಆಲೋಚನೆಯ ತಿರುಳು. ಯಾವುದೇ ಜಾತಿಗೆ ಪ್ರಾತಿನಿಧಿತ್ವ ನಿಗದಿ ಮಾಡುವಾಗ ಜನಸಂಖ್ಯೆ ಪ್ರಮಾಣವು ಮಾನದಂಡವಾಗಬೇಕು. ಈಗ ಜಸ್ಟೀಸ್ ಸದಾಶಿವ ಆಯೋಗ ಮಾಡಿರುವುದೂ ಅದನ್ನೇ. ಆದ್ದರಿಂದ ಅದು ಅತ್ಯಂತ 'ವೈಜ್ಞಾನಿಕ' ಎನಿಸಿಕೊಳ್ಳುತ್ತದೆ.


ಮೀಸಲಾತಿ ಅಸಮರ್ಪಕ ವಿತರಣೆ, ಅಸಮಾನ ಹಂಚಿಕೆಯಿಂದ ದಲಿತ ಜಾತಿಗಳಲ್ಲಿ ಆಂತರಿಕ ಬಿಕ್ಕಟ್ಟು ಸೃಷ್ಟಿಯಾಗಿ ಸಂಬಂಧಗಳು ಹಳಸಿಕೊಂಡಿವೆ. ಒಳಮೀಸಲಾತಿ ಕುರಿತು ದಲಿತರೆಲ್ಲರೂ ಒಟ್ಟಾಗಿ ಕುಳಿತು ಚರ್ಚಿಸುವಂತಾಗಬೇಕು. ಇದನ್ನು ತಮ್ಮ ಸ್ವಂತ ಲಾಭ-ನಷ್ಟದ ದೃಷ್ಟಿಯಿಂದ ಪರಿಗಣಿಸದೇ, ತಾಂತ್ರಿಕ ಕಾರಣಗಳಿಂದ ನೋಡದೇ ಸಾಮಾಜಿಕ ನ್ಯಾಯ, ಮಾನವೀಯ ಮೌಲ್ಯಗಳ ದೃಷ್ಟಿಯಿಂದ ವಿಚಾರ ಮಾಡಬೇಕು. ಒಳ ಮೀಸಲಾತಿಯ ವಿಷಯದಲ್ಲಿ ದಲಿತರು ವಿಘಟನೆಗೊಳ್ಳದೇ, ಇಂದು ಉದ್ಯೋಗ ಕ್ಷೇತ್ರವನ್ನು ಆವರಿಸಿರುವ ಖಾಸಗಿ ವಲಯದಲ್ಲೂ ಮೀಸಲಾತಿಗಾಗಿ ಹೋರಾಟ ಮಾಡಬೇಕಾದ ತುರ್ತು ಅವಶ್ಯಕತೆ ಇದೆ. ಈ ದೇಶದಲ್ಲಿ ಅಸ್ಪೃಶ್ಯತೆ, ಜಾತಿವ್ಯವಸ್ಥೆಗಳು ಇರುವವರೆಗೂ ದಲಿತರು ಒಗ್ಗೂಡಿ ಹೋರಾಡಲೇಬೇಕಾದ ಅನಿವಾರ್ಯತೆಯನ್ನು ಎಲ್ಲರೂ ಮನಗಾಣಬೇಕು.

ಸರಕಾರ ಮೀನಮೇಷ ಎಣಿಸುವುದನ್ನು ನಿಲ್ಲಿಸಿ ಕೂಡಲೇ ಕಾರ್ಯಪ್ರವೃತ್ತವಾಗಬೇಕು. ಸ್ವಾತಂತ್ರ್ಯ, ಸಂವಿಧಾನಕ್ಕೆ ನಿಜವಾದ ಅರ್ಥ ಬರಬೇಕಾದರೆ ಸರಕಾರ ಈ ಕೂಡಲೇ ಸದಾಶಿವ ಆಯೋಗದ ವರದಿಯ ಶಿಫಾರಸ್ಸಿನಂತೆ ಪರಿಶಿಷ್ಟರ ಪಟ್ಟಿಯಲ್ಲಿನ ಜಾತಿಗಳ ಸಂಖ್ಯೆಗನುಗುಣವಾಗಿ ಮೀಸಲಾತಿ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಹೀಗೆ ಒಳಮೀಸಲಾತಿ ವರ್ಗೀಕರಣ ಮಾಡುವುದರಿಂದ ದಲಿತ ಜಾತಿಗಳಲ್ಲಿ ಕ್ರಮೇಣ ಸೌಹಾರ್ದತೆ ಬೆಳೆಯಲು ಅನುವಾಗುತ್ತದೆ.

● ನರಸಿಂಹ ಗುಂಜಹಳ್ಳಿ, ರಾಯಚೂರು

# ಪತ್ನಿಯರಿಗೆ ಪಗಾರ ಮಸೂದೆ

ಮನೆಯಲ್ಲಿ ಅಡುಗೆ, ಮನೆ, ಮಕ್ಕಳು ಸಂಭಾಳಿಸುವ ಪತ್ನಿಯರಿಗೆ ಪತಿಯ ಪಗಾರದಲ್ಲಿ ಶೇಕಡಾ 10 ರಿಂದ 20 ರವರೆಗೆ ಹಣವನ್ನು ನೀಡುವ ಬಗ್ಗೆ ಶಾಸನವೊಂದು ಸಿದ್ಧವಾಗುತ್ತಿದೆ. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಮಂತ್ರಾಲಯವು ಈ ಕುರಿತು ಕಾನೂನು ಮಾಡುವ ಬಗ್ಗೆ ಚರ್ಚಿಸುತ್ತಿದೆ. ಈ ಮಸೂದೆ ಜಾರಿಗೆ ಬಂದರೆ ಮನೆಯಲ್ಲಿ ಹೆಂಗಸು ಮಾಡುವ ಕೆಲಸಗಳೂ 'ನೌಕರಿ' ಎಂದು ಪರಿಗಣಿಸಲ್ಪಡುತ್ತವೆ. ಹೆಂಡತಿಗೆ ಪತಿ 'ಮಾಸಿಕ ವೇತನ' ನೀಡುವುದು ಕಡ್ಡಾಯವಾಗಲಿದೆ. ಬ್ಯಾಂಕಿನಲ್ಲಿ ಖಾತೆ ತೆರೆದು ಆ ಖಾತೆಗೆ ಪ್ರತಿ ತಿಂಗಳು ವೇತನ ಹಾಕಬೇಕು. ಹೆಂಡತಿಯಿಂದ ಮನೆಯಲ್ಲಿ ಮಾಡುವ ಕೆಲಸವನ್ನು ಬಿಟ್ಟಿಯಾಗಿ ಮಾಡಿಸಿಕೊಳ್ಳುವಂತಿಲ್ಲ. ಅದನ್ನು 'ನೌಕರಿ' ಎಂದು ಪರಿಗಣಿಸಬೇಕು. ಈ ಮಸೂದೆಯಿಂದಾಗಿ ಬಿಡಿಗಾಸಿಗಾಗಿ ಗಂಡನ ಮುಂದೆ ಹಲ್ಲು ಗಿಂಜುವ ಶಿಕ್ಷೆಯಿಂದ ಹೆಣ್ಣು ಮುಕ್ತಳಾಗುತ್ತಾಳೆ. ಅವಳು ಕೊಂಚವಾದರೂ ಆರ್ಥಿಕವಾಗಿ ಸದೃಢಳಾದರೆ, ಈ ಯೋಜನೆ ಕೊಂಚವಾದರೂ ಸಫಲವಾದಂತೆಯೇ ಸರಿ. ಕೇಂದ್ರ ಸಚಿವರಾದ ಕೃಷ್ಣಾ ತೀರಥ್ ಅವರು ಈ ಯೋಜನೆಯ ರೂವಾರಿಯಾಗಿದ್ದಾರೆ.



ಹೆಣ್ಣಿನ ಪರವಾದ ಕಾನೂನುಗಳು ಈಗಾಗಲೇ ಸಾಕಷ್ಟಿವೆ. ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ನೀಡುವ ಕುರಿತು ಕಾನೂನಿದೆ. ಆದರೆ ಮಗಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಕೇಳಿದಾಗ ಸೋದರರೊಂದಿಗೆ ಕದನಕ್ಕಿಳಿಯಬೇಕಾಗುತ್ತದೆ. ಅದು ಅಕ್ಕನ ಅಥವಾ ತಂಗಿಯ ಹಕ್ಕು ಎಂದು ತಿಳಿದು ಕೊಡುವವರು ಎಷ್ಟು ಜನರಿದ್ದಾರೆ? ಜಗಳ ಮಾಡಿಕೊಂಡು ತವರಿನ ಸಂಬಂಧ ಕಳೆದುಕೊಳ್ಳುವುದು ಒತ್ತಟ್ಟಿಗಿರಲಿ, ಅದು ಅವಳ ಜೀವಕ್ಕೆ ಕುತ್ತಾದರೂ ಆಗಬಹುದಲ್ಲ? ಎಂಬ ಆತಂಕವೂ ಇಲ್ಲದಿಲ್ಲ. ಮನೆತನ ನಡೆಸುವ ಜವಾಬ್ದಾರಿ ಬಹಳಷ್ಟು ಕುಟುಂಬಗಳಲ್ಲಿ ಮಹಿಳೆಯರೇ ಹೊತ್ತಿದ್ದಾರೆ. ಶೇ. 60 ರಷ್ಟು ಕುಟುಂಬಗಳು ಇಂದು ಮಹಿಳೆಯಿಂದಲೇ ನಡೆಯುತ್ತಿವೆ.

ಒಂದು ವೇಳೆ ಮಹಿಳೆ ಉದ್ಯೋಗಿಯಾಗಿದ್ದರೆ ಗಂಡ ಮನೆಗೆಲಸ ಮಾಡುತ್ತಿದ್ದಾನೆಯೇ? ಹಾಗಾದರೆ ಹೆಂಡತಿಯ ವೇತನದ ಶೇ. 10 ರಿಂದ 20 ರಷ್ಟು ವೇತನವನ್ನು ಅವಳು ಅವನ ಖಾತೆಗೆ ಹಾಕಬೇಕಾಗುತ್ತದೆ. ಒಂದು ವೇಳೆ ಮನೆತನವನ್ನು ಗಂಡಸು ನಡೆಸದೇ ಪುಂಡಾಟಿಕೆ ಮಾಡುತ್ತಿದ್ದರೆ, ಇಂತಹ ಸವಲತ್ತಿಗೆ ಅವನು ಬಾಧ್ಯಸ್ಥನಾಗಬಾರದು. ವ್ಯರ್ಥ ಕಾಲಹರಣ ಮಾಡುವ ಹೆಂಗಸಾಗಲಿ ಗಂಡಸಾಗಲಿ ಅದಕ್ಕೆ ಬಾಧ್ಯಸ್ಥರಾಗುವಂತಿಲ್ಲ. ಇಂದು ನಮ್ಮ ಸಮಾಜದಲ್ಲಿ ಅನೇಕ ಹೆಣ್ಣುಮಕ್ಕಳು ತಾವು ದುಡಿದು ತಂದ ಸಂಬಳವನ್ನೂ ಪತಿಯ ಕೈಗಿಟ್ಟು ನಿರುಮ್ಮಳವಾದಂತೆ, ಅನೇಕ ಗಂಡಸರೂ ತಾವು ತಂದ ಸಂಬಳವನ್ನು ಹೆಂಡತಿಯ ಕೈಗಿಟ್ಟು ನಿಶ್ಚಿಂತರಾಗುವವರೂ ಇದ್ದಾರೆ. ಆದರೆ ಅವರ ಸಂಖ್ಯೆ ತುಂಬಾ ವಿರಳ. ಗಂಡನ ವೇತನದಲ್ಲಿ ಪಾಲು ಪಡೆದ ಹೆಚ್ಚಿನ ಮಹಿಳೆಯರು ಅದನ್ನು ಕುಟುಂಬದ ಒಳಿತಿಗಾಗಿ ಬಳಸುತ್ತಾರೆ. ಅವಳು ಅದನ್ನು ವ್ಯರ್ಥ ಮಾಡುವುದಿಲ್ಲ. ಆದರೆ ಹೆಂಡತಿ ಕೊಟ್ಟ ಹಣವನ್ನು ಕುಡಿದು, ತಿಂದು, ಜೂಜಾಡಿ ಬಂದರೆ ಏನು ಮಾಡುವುದು? ತಾನು ದುಡಿದು ತರುವ ಪಗಾರವನ್ನು ಹೊರಗೇ ಉಡಾಯಿಸಿ, ಬರಿಗೈಯಲ್ಲಿ ಮನೆಗೆ ಬರುವ ಪುರುಷರನ್ನು ನಿಯಂತ್ರಿಸಲು ಈ ಕಾನೂನು ಬಹಳ ಉಪಯುಕ್ತವಾಗುತ್ತದೆ. 'ಪಗಾರ' ಇರುವುದು ಕುಟುಂಬದ ಸಂರಕ್ಷಣೆಗೆ. ಆದರೆ ಪ್ರೀತಿಯ ಆಧಾರದ ಮೇಲೆ ಕಟ್ಟಲಾದ ಕೌಟುಂಬಿಕ ಸಂಬಂಧಗಳು 'ವೇತನ' ಆಧಾರಿತವಲ್ಲವಾದರೂ ಆರ್ಥಿಕವಾಗಿ ಅಶಕ್ತಳಾದ ಮಹಿಳೆಗೆ ಈ ಮಸೂದೆ ಶಕ್ತಿ ನೀಡುತ್ತದೆ. ಶತಮಾನಗಳಿಂದ ಸಮಾಜದಲ್ಲಿ ಬೇರೂರಿರುವ ಅಸಮಾನತೆಯನ್ನು ಅಳಿಸುವಲ್ಲಿ ಪುಟ್ಟ ಹೆಜ್ಜೆಯಾಗಬಹುದು. ಕಾನೂನು ಸ್ತ್ರೀಪರವಾಗಿದ್ದರೂ ಅದನ್ನು ಜಾರಿ ಮಾಡಲು ವ್ಯವಸ್ಥೆಗೆ ಇಚ್ಛಾಶಕ್ತಿ ಬೇಕು. ಇದು ಹೆಣ್ಣಿನ ಸಬಲೀಕರಣಕ್ಕೆ ಸಾಧನವಾಗಬಹುದೇ ಎಂದು ಕಾದುನೋಡಬೇಕು.

ಏನೇ ಆಗಲಿ, ಮಹಿಳೆಯರಲ್ಲಿ 'ಪತ್ನಿಗೆ ಪಗಾರ' ಮಸೂದೆಯಿಂದ ಶಕ್ತಿ ಸಂಚಾರವಾಗಿದೆ. ಸಮಾನಾಧಿಕಾರದ ವ್ಯವಸ್ಥೆಯೊಂದು ನಿರ್ಮಾಣವಾಗುವುದಕ್ಕೆ ಇದು ಕಾರಣವಾಗಬಹುದು. ನಾರಿ ಸಬಲೀಕರಣದಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

● ಡಾ.ಕೆ.ಪರೀಕ್ಷಾ

# ಸರ್ಕಾರಿ ಕಚೇರಿಗಳಲ್ಲಿ ಧಾರ್ಮಿಕ ಆಚರಣೆ ಸಂವಿಧಾನದ ಆಶಯಕ್ಕೆ ವಿರುದ್ಧ

ಸರ್ಕಾರಿ ಕಚೇರಿಗಳಲ್ಲಿ ಧಾರ್ಮಿಕ ಆಚರಣೆ ಮಾಡುವುದು ದೇಶದ ಜಾತ್ಯತೀತ ನೀತಿಗೆ ಮಾತ್ರವಲ್ಲ ಭಾರತ ಸಂವಿಧಾನದ ಆಶಯಗಳಿಗೂ ವಿರುದ್ಧ. ಗಣಪತಿ ಹಬ್ಬದಲ್ಲಿ ಸರ್ಕಾರಿ ಕಚೇರಿಗಳಲ್ಲಿ ವೈದಿಕ ಹಿಂದೂ ದೇವತೆ ಗಣಪತಿ ಪ್ರತಿಷ್ಠಾಪಿಸುವುದು, ಹೋಮ-ಹವನ, ಆಯುಧ ಪೂಜೆ, ವಿಜಯದಶಮಿ, ಶಾಲಾ ವಿದ್ಯಾಲಯಗಳಲ್ಲಿ ಮಾಡುವ ಸರಸ್ವತಿ, ಲಕ್ಷ್ಮಿ, ಶುಕ್ರವಾರ ಪೂಜೆಗಳಾದಿಯಾಗಿ ಯಾವುದೇ ದೇವದೇವತೆಯ ಪೂಜೆಯನ್ನು ಯಾವುದೇ ಸರ್ಕಾರಿ ಕಚೇರಿಯಲ್ಲಿ ಯಾರೇ ಆಗಲಿ ಯಾವುದೇ ಸಂದರ್ಭದಲ್ಲಿ ಮಾಡುವುದು ಸಂವಿಧಾನಕ್ಕೆ ಅಪಚಾರ. ಇಂತಹ ಆಚರಣೆಗಳಿಂದ ಸ್ಫೂರ್ತಿಗೊಂಡು ಇತರ ಮತಧರ್ಮೀಯರು ಸಹ ತಮ್ಮ ತಮ್ಮ ಧರ್ಮದ ಆಚರಣೆಗಳನ್ನು ಅದೇ ಸರ್ಕಾರಿ ಕಚೇರಿಗಳಲ್ಲಿ ಮಾಡಲು ಶುರುಮಾಡಿದರೆ ಅವುಗಳಿಗೆ ಆಕ್ಷೇಪವೆತ್ತುವುದು ಸರಿಯಾಗುವುದೇ? ನಂಬಿಕೆಯುಳ್ಳವರು ಅಂಥ ಗಣಪತಿ ಪೂಜೆ ಅಥವಾ ಯಾವುದೇ ಧಾರ್ಮಿಕ ಸಂಪ್ರದಾಯಗಳನ್ನು ತಮ್ಮತಮ್ಮ ಮನೆಗಳಲ್ಲಿ ಆಚರಿಸಿಕೊಳ್ಳಬಹುದು.


ಸಂವಿಧಾನದಂತೆ ನಮ್ಮದು ಧರ್ಮನಿರಪೇಕ್ಷ ರಾಷ್ಟ್ರ. ಇಲ್ಲಿ ವಿವಿಧ ಜಾತಿ ಮತ ಪಂಥ ಧರ್ಮಗಳಿವೆ. ಬಹುದೇವತೋಪಾಸಕರಾದ ಹಿಂದೂಗಳು, ಏಕದೇವನಿಷ್ಠೆಯ ಕ್ರೈಸ್ತರು, ಮುಸಲ್ಮಾನರು, ಲಿಂಗಾಯತರು, ಸಿಖ್ಖರು, ನಿರೀಶ್ವರವಾದಿಗಳಾದ ಜೈನರು, ಬೌದ್ಧರು ಇನ್ನೂ ಮುಂತಾದವರು ಇದ್ದಾರೆ. ಭಾರತ ಎಲ್ಲ ಮತಧರ್ಮಗಳಿಗೆ ಸಮಾನ ಸ್ಥಾನ ನೀಡಿದೆ. ಅಂದರೆ ಇಲ್ಲಿ ಎಲ್ಲರಿಗೂ ಸಮಾನವಾಗಿ ಬದುಕುವ ಹಕ್ಕಿದೆ. ಸರ್ಕಾರ ಅಥವಾ ವಿಧಾನಸೌಧ ಸೇರಿದಂತೆ ಯಾವುದೇ ಸರ್ಕಾರಿ ಕಚೇರಿ ಯಾವುದೇ ವ್ಯಕ್ತಿ, ಪಕ್ಷ, ಜಾತಿ, ಧರ್ಮ, ದೈವಕ್ಕೆ ಸೇರಿದ್ದಲ್ಲ. ಅದು ಎಲ್ಲ ಧರ್ಮೀಯರಿಗೂ ಸೇರಿದ್ದು. ಪೂಜೆ, ನಂಬಿಕೆಗಳು ಖಾಸಗಿ. ಆದರಿಂದ ಕಚೇರಿಗಳಲ್ಲಿ ಯಾವುದೋ ಒಂದು ಜಾತಿಧರ್ಮದ ಆಚರಣೆ ಮಾಡಿಸಿದರೆ ಅದು ನಾಡಿನ ಪ್ರಜೆಗಳಿಗೆ ಅವಮಾನ. ನಮ್ಮ ಆಂತರಿಕ ರಾಜಕಾರಣದಲ್ಲಿ ಒಡಕು ಉಂಟಾಗಿ ದೇಶದ ಏಕತೆಗೆ ಧಕ್ಕೆಯಾಗಬಹುದು. ಈಗಾಗಲೇ ದೇಶ ನಾನಾ ಕಷ್ಟನಷ್ಟಗಳನ್ನು ಅನುಭವಿಸುತ್ತಿದೆ. 'ಸರ್ಕಾರದ ಕೆಲಸ ದೇವರ ಕೆಲಸ' ಎಂದರೆ ಜನಪ್ರತಿನಿಧಿಯಾಗಲಿ, ನೌಕರರಾಗಲಿ ಪ್ರಜೆಗಳ ಸೇವೆ ಮಾಡುವುದು ದೇವರಿಗೆ ಪೂಜೆ ಸಲ್ಲಿಸಿದ್ದಕ್ಕೆ ಸಮಾನ. ಜನರ ಸೇವೆಯೇ ದೇವರ ಸೇವೆ ಎಂದರ್ಥ.

ಹಿಂದು ಪತ್ರ

ಸಂವಿಧಾನದ 251 ನೆಯ ಅನುಚ್ಛೇದದಂತೆ ಎಲ್ಲ ವ್ಯಕ್ತಿಗಳಿಗೆ ಅಬಾಧಿತವಾಗಿ ಧರ್ಮವನ್ನು ಅವಲಂಬಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯದ ಹಕ್ಕಿದೆ ನಿಜ. ಆಂದಮಾತ್ರಕ್ಕೆ ಎಲ್ಲಿ ಅಂದರೆ ಅಲ್ಲಿ ಸರ್ಕಾರಿ ಕಚೇರಿಗಳಲ್ಲಿ ವಿಗ್ರಹವಿರಿಸಿ ತನ್ನ ಧಾರ್ಮಿಕ ನಂಬಿಕೆಯನ್ನು ಪೂಜೆಯ ರೂಪದಲ್ಲಿ ಬಹಿರಂಗವಾಗಿ ಪ್ರದರ್ಶಿಸುವುದು ಸರಿಯಲ್ಲ. ಅದು ಇತರರ ಮನಸ್ಸಿಗೆ ಘಾಸಿಯಾಗುತ್ತದೆ. 21 ನೆಯ ಶತಮಾನದಲ್ಲೂ ಅಂತಹ ಮೌಢ್ಯತೆ ಪ್ರದರ್ಶಿಸುವುದು ಘನತೆ ತರುವುದಿಲ್ಲ. ಸಂವಿಧಾನದ 51 ಕ(ಜ) ವಿಧಿಯು ವೈಜ್ಞಾನಿಕ ಮನೋಭಾವನೆ ಅಭಿವೃದ್ಧಿಗೊಳಿಸುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವೆನ್ನುತ್ತದೆ. ಧರ್ಮವು ಬೇರೆಯವರಿಗೆ ನೋವಾಗದಂತೆ ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆಯಾಗದಂತೆ ಆಚರಿಸಲ್ಪಡಬೇಕು. ದೇಶವನ್ನು ಮಾನವೀಯ-ರಾಷ್ಟ್ರೀಯ-ನೈತಿಕ ನೆಲೆಗಟ್ಟಿನ ಮೇಲೆ ಕಟ್ಟಿ ಜನರಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸಬೇಕು. ರಾಷ್ಟ್ರ ಮತ್ತು ಧರ್ಮದ ವಿಷಯ ಬಂದಾಗ ಮೊದಲ ಆದ್ಯತೆ ರಾಷ್ಟ್ರಕ್ಕೆ ಸಲ್ಲಬೇಕು. ಹೀಗಾಗಿ ಸರ್ಕಾರಿ ಕಚೇರಿಗಳು ಪೂಜಾ ಕೇಂದ್ರಗಳಾಗದೆ ಸಂವಿಧಾನಬದ್ಧ ಸರ್ಕಾರದ ಆದರ್ಶ ಕಾರ್ಯಾಲಯಗಳಾಗಬೇಕು.

ಆದ್ದರಿಂದ, ಧಾರ್ಮಿಕ ಅನ್ಯೋನ್ಯತೆ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಕಾಪಾಡಲು ಕರ್ನಾಟಕ ಸರ್ಕಾರದ ಎಲ್ಲ ಅಂಗಗಳು, ವಿಧಾನಸೌಧ ಸೇರಿದಂತೆ ಎಲ್ಲ ಸರ್ಕಾರಿ ಕಚೇರಿಗಳು, ವಸತಿಗೃಹಗಳು, ಶಾಲೆಗಳು, ಮಹಾವಿದ್ಯಾಲಯಗಳು, ಬ್ಯಾಂಕುಗಳು, ಖಾಸಗಿ ವಿದ್ಯಾಸಂಸ್ಥೆಗಳು, ಸಾರ್ವಜನಿಕ ಸ್ಥಳಗಳು ಮುಂತಾದವುಗಳು ಗಣಪತಿ ಮತ್ತಿತರ ಯಾವುದೇ ಧರ್ಮದ ಯಾವುದೇ ದೇವದೇವತೆಯ ದೇವಸ್ಥಾನಗಳಂತಾಗದಂತೆ ಕಟ್ಟುನಿಟ್ಟಾಗಿ ತಡೆಗಟ್ಟಿ, ಸಂವಿಧಾನದ ಮೂಲ ಆಶಯಗಳನ್ನು ಗೌರವಿಸುವುದು ರಾಜ್ಯದ ನಾಗರಿಕ ಬಂಧುಗಳ ಮತ್ತು ಸರ್ಕಾರಿ ಅಧಿಕಾರಿಗಳ ಕರ್ತವ್ಯ ಹಾಗೂ ಘನ ಸರ್ಕಾರದ ಜವಾಬ್ದಾರಿ.

ಸು. ಮಲ್ಲಿಕಾರ್ಜುನಪ್ಪ, ಹೊಳೆಗಾಲ




ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಕಾಡಿನ ತುಂಡುಗಾರಿಕೆಯಲ್ಲಿ ಚಾಣಾಕ್ಷನಾಗಿದ್ದ ಸಲಗ ಈ ಸಾರಿ ನಾವು ಹತ್ತಿರ ಬರುವವರೆಗೆ ಕಾದು ನಮ್ಮ ಮೇಲೆರಗಲು ತೀರ್ಮಾನಿಸಿತ್ತು. ನಮ್ಮ ಎಡಗಡೆಯಿದ್ದ ದೊಡ್ಡ ಬಂಡೆಯ ಹಿಂದೆ ತನ್ನ ದೈತ್ಯ ದೇಹವನ್ನು ಅಡಗಿಸಿ, ಕಾಡಿನ ರೀತಿರಿವಾಜುಗಳಲ್ಲಿ ತಲೆತಲಾಂತರಗಳ ಪ್ರಾವೀಣ್ಯತೆ ಪಡೆದಿದ್ದ ಭೈರನನ್ನೂ ವಂಚಿಸುವುದರಲ್ಲಿ ಅದು ಸಫಲವಾಗಿತ್ತು. ಇದಾವುದರ ಪರಿವೆ ಇಲ್ಲದೆ ನಾವು ನಮ್ಮ ಎಚ್ಚರಿಕೆಯಲ್ಲೇ ಹೆಜ್ಜೆ ಹಾಕುತ್ತಿದ್ದೆವು. ಪಕ್ಕದಲ್ಲಿನ ಬಂಡೆ, ಅದರ ಮೇಲೆ ಬೆಳೆದ ಗಿಡ, ಪಕ್ಕದ ಮರ ಎಲ್ಲವನ್ನೂ ನಿಧಾನವಾಗಿ ಗಮನಿಸುತ್ತಿದ್ದ ಭೈರ ಆನೆಯ ಸೂಚನೆ ಮಾತ್ರ ಹಿಡಿಯಲಿಲ್ಲ. ಹಾಗಾಗಿ ನಿಧಾನವಾಗಿ ಮುನ್ನಡೆದು ಬಂಡೆಯನ್ನು ದಾಟುವುದರಲ್ಲಿದ್ದೆವು. ಆನೆ ಇದೇ ಸರಿಯಾದ ಸಮಯವೆಂದು ಆಕ್ರಮಣ ಮಾಡಲು ನಿರ್ಧರಿಸಿಯೇಬಿಟ್ಟಿತು.

"ಟ್ರ..ಯಾಂ..ಕ್" ಎಂಬ ಕರ್ಣ ಭೇದಕ ಸದ್ದಿನೊಂದಿಗೆ ತನ್ನ ದೈತ್ಯ ದೇಹವನ್ನು ಬಂಡೆಯ ಮರೆಯಿಂದ ಆಚೆ ತಂದಿತು. ಎತ್ತಿದ ತಲೆ, ಅರೆತೆರೆದ ಬಾಯಿ, ಸಿಟ್ಟಿನಿಂದ ನಿಗುರಿದ ಕಿವಿಗಳು, ದೊಡ್ಡ ಹಾವಿನಂತೆ ಸುತ್ತಿಕೊಂಡಿದ್ದ ಸೊಂಡಿಲು - ಇದು ಯಮನ ಸಾನ್ನಿಧ್ಯವಲ್ಲದೇ ಮತ್ತೇನು?

# ಭೈರನ ಅಂತ್ಯ?

ನನ್ನ ಹಿಂದಿದ್ದ ಎರಿಕ್ ತಿರುಗಿ ನಿಂತು ಕಾಲಿಗೆ ಬುದ್ಧಿ ಹೇಳಿದ, ನಾನೂ ಅವನನ್ನೇ ಹಿಂಬಾಲಿಸಿದೆ. ಕೊನೆಯವನಾಗಿದ್ದ ಭೈರ ನಮ್ಮನ್ನು ಹಿಂಬಾಲಿಸಿದರೆ ಆನೆಗೆ ತುತ್ತಾಗುವುದು ಖಚಿತವೆಂದುಕೊಂಡು, ನಮ್ಮ ದಾರಿಗೆ ಸಮಾನಾಂತರವಾಗಿ ಹರಿಯುತ್ತಿದ್ದ ಹಳ್ಳವನ್ನು ದಾಟಿ ಬೆಟ್ಟದ ಇಳಿಜಾರಿನಲ್ಲಿ ಓಡಿದ. ಆದರೆ ಅವನಿಗೆ ತಪ್ಪಿಸಿಕೊಳ್ಳಲು ಅವಕಾಶವೆಲ್ಲಿತ್ತು? ಸಣ್ಣ ಕೂಗಿನೊಂದಿಗೆ ಆನೆ ಭೈರನನ್ನು ಹಿಡಿಯಿತು. ನಂತರ ಕೇಳಿದ್ದು-ಭೈರನ ನರಳಿಕೆ, ವೂಹ್ ಮತ್ತು ಧಡ್, ಕೊನೆಯದಾಗಿ ಪದೇಪದೇ ಆನೆಯ "ಟ್ರ..ಯಾಂ..ಕ್" ಎಂಬ ಕೆರಳಿದ ವಿಜಯ ಘೋಷ.

ನಾನು ಸಾಧ್ಯವಾದಷ್ಟು ವೇಗವಾಗಿ ಓಡುತ್ತಿದ್ದೆ. ನನಗಿಂತ ತೆಳ್ಳಗಿದ್ದ ಮತ್ತು ಚಿಕ್ಕವನಾಗಿದ್ದ ಎರಿಕ್ ಮುಂದೆಹೋಗಿದ್ದ. ಭೈರನನ್ನು ಅಪಾಯಕ್ಕೊಡ್ಡಿ ಪ್ರಾಣ ಉಳಿಸಿಕೊಳ್ಳಲು ಓಡುತ್ತಿದ್ದುದಕ್ಕೆ ನನಗೆ ಒಳಗೊಳಗೇ ಪಾಪಪ್ರಜ್ಞೆ ಕಾಡುತ್ತಿತ್ತು. ಆದರೆ ಅಲ್ಲೇ ನಿಂತಿದ್ದರೆ ನಾನೂ ಭೈರನ ಜೊತೆ ಯಮಲೋಕದ ಹಾದಿ ಹಿಡಿಯುತ್ತಿದ್ದೆ. ಹಿಂದಿನ ರಾತ್ರಿ ಕತ್ತಲಿನಲ್ಲಿ ವಂಚಿಸಿದಂತೆ ಈ ಬೆಳಕಿನಲ್ಲಿ ಆನೆಯನ್ನು ಯಾಮಾರಿಸುವುದು ಸಾಧ್ಯವಿರಲಿಲ್ಲ.

ಆನೆ ನಮ್ಮನ್ನು ಹಿಂಬಾಲಿಸಿರಲಿಲ್ಲ, ಆದರೆ ಆದರ ಕೂಗು ಮತ್ತೆ ಮತ್ತೆ ಕೇಳುತ್ತಿತ್ತು. ಪಾಪದ ಭೈರನನ್ನು ತುಳಿದು ಅಪ್ಪಚ್ಚಿಮಾಡಿರಬೇಕು. ನಾವು ಸಾಧ್ಯವಿದ್ದಷ್ಟು ವೇಗವಾಗಿ ಕೆಂಪೆಕೆರೈ ತಲುಪಿ ಪೂಜಾರಿಗಳನ್ನು ಒಟ್ಟು ಮಾಡಿದೆವು. ಮರ ಮತ್ತು ಸೂಡಿನ ದೊಂದಿ ಮಾಡಿಕೊಂಡು ಸುಮಾರು ಇಪ್ಪತ್ತೈದು ಜನರೊಂದಿಗೆ ದೊಡ್ಡದಾಗಿ ಅರಚುತ್ತಾ ಭೈರನ ಅವಶೇಷಗಳನ್ನು ಹುಡುಕಲು ಹೊರಟೆವು. ಆನೆ ನಮ್ಮ ಕಣ್ಣಿಗೆ ಬೀಳುವ ಸಾಧ್ಯತೆ ಇದ್ದರೂ ಬೆಂಕಿ ಮತ್ತು ಗದ್ದಲದಿಂದ ಕೂಡಿದ ಈ ಗುಂಪಿನ ಮೇಲೆ ಆಕ್ರಮಣ ಮಾಡುವ ಸಾಧ್ಯತೆ ಇರಲಿಲ್ಲ.

ನಾನಂದುಕೊಂಡಂತೆ ಆನೆ ನಮ್ಮ ದಾರಿಯಲ್ಲಿಯೇ ಕಾಣಿಸಿಕೊಂಡಿತು. ಸಿಟ್ಟಿನಿಂದ ಸೊಂಡಿಲನ್ನು ಅಲ್ಲಾಡಿಸುತ್ತಾ, ಕಿವಿಗಳನ್ನು ಬಡಿಯುತ್ತಾ, ಕಣ್ಣಿನಿಂದ ಬೆಂಕಿಯನ್ನು ಉಗುಳುತ್ತಾ ನಮ್ಮತ್ತ ನೋಡುತ್ತಿತ್ತು. ನಾವು ಸ್ಪರ್ಧೆಗೆ ಇಳಿದಂತೆ ಕಿರುಚಾಡತೊಡಗಿದೆವು. ಆನೆ ಅನುಮಾನಿಸುತ್ತ ನಿಂತಿತ್ತು. ಸ್ವಲ್ಪವೇ ಹೊತ್ತಿನಲ್ಲಿ ಧೈರ್ಯ ಕಳೆದುಕೊಂಡು ನಿಧಾನವಾಗಿ ಬೆಟ್ಟವನ್ನೇರತೊಡಗಿತು. ನಾವು ನಿಧಾನವಾಗಿ ಎಚ್ಚರಿಕೆಯಿಂದ ಮುನ್ನಡೆದೆವು.

ಭೈರನ ಅವಶೇಷಗಳ ನಿರೀಕ್ಷೆಯಲ್ಲೇ ದಾರಿ ಸವೆಯುತ್ತಿತ್ತು. ಚಿಕ್ಕ ಆಕಾರದ ಕಪ್ಪು ಕಣ್ಣಿನ ಹಸನ್ಮುಖಿ ಭೈರ ಕಣ್ಣೆದುರು ಬಂದ. ದುಃಖದಿಂದ ಗಂಟಲು ಕಟ್ಟಿ ಕೂಗನ್ನು ಮುಂದುವರೆಸದಾದೆ. ನಮ್ಮ ಜೀವವುಳಿಸಲು ಭೈರ ತನ್ನ ಜೀವತ್ಯಾಗ ಮಾಡಿದ್ದ. ಪಕ್ಕದಲ್ಲಿದ್ದ ಎರಿಕ್ ಕಳವಳಗೊಂಡಿದ್ದರೂ ಇತರರ ಜೊತೆ ಕೂಗನ್ನು ಮುಂದುವರೆಸಿದ್ದ.

ಭೈರನ ಅವಶೇಷಗಳು ಕಾಣಿಸಲೇ ಇಲ್ಲ. ಹಾಗಿದ್ದರೆ ಭೈರ ತಪ್ಪಿಸಿಕೊಂಡಿರಬಹುದೇ? ನಾವು ನಾಲ್ಕೂ ದಿಕ್ಕಿನಲ್ಲಿ ಚದುರಿಕೊಂಡು ಹುಡುಕುತ್ತಿದ್ದೆವು. ಸಮಯ ಕಳೆದಂತೆ ನಮ್ಮ ಧೈರ್ಯ ಉಡುಗುತ್ತಿತ್ತು.

## ಪುನರ್ಜನ್ಮ ಪಡೆದ ಭೈರ

ಭೈರನ ಅವಶೇಷಗಳ ಹುಡುಕಾಟ ಮುಂದುವರೆದಿತ್ತು. ಆಗೊಮ್ಮೆ ನಮಗೆ ಸಣ್ಣದಾದ ನರಳಿಕೆ ಕೇಳಿದಂತಾಯಿತು. ನಿಂತು ಮತ್ತೆ ಆಲಿಸಿದರೆ ಬರಿಯ ನಿಶಿದ್ಧ. ಮೂಢನಂಬಿಕೆಗಳಿಗೆ ಒಲಿದಿದ್ದ ಪೂಜಾರಿಗಳು ಭಯಭೀತರಾದರು. ಕೇಳಿದ ನರಳಿಕೆ ಭೈರನ ಪ್ರೇತಾತ್ಮದ್ದಿರಬಹುದೇ? ನನ್ನತ್ತ ಭಯದ ನೋಟ ಬೀರಿದ ಕೆಲವರು ಕೆಲವೇ ಕ್ಷಣಗಳಲ್ಲಿ ಅಲ್ಲಿಂದ ಜಾರಿಕೊಳ್ಳುವವರಿದ್ದರು.

ಆಗ ನನಗೆ ಸ್ಪಷ್ಟವಾಗಿ ಕೇಳಿಸಿತು, "ದೊರೇ..", ಭೈರ ನನ್ನನ್ನು ಕರೆಯುತ್ತಿದ್ದ ರೀತಿಯದು! ಆದರೆ ಬಂಡೆಯ ವಿನಃ ಸುತ್ತಲೂ ಕಣ್ಣಿಗೆ



ಏನೂ ಬೀಳುತ್ತಿಲ್ಲ. ಮಿದುಳಿನಲ್ಲಿ ಮಿಂಚಿನ ಸಂಚಾರವಾಯಿತು. ಭೈರ ಬಂಡೆಯ ಮೇಲಿನಿಂದ ಕರೆಯುತ್ತಿದ್ದ. ನಾನು ಈ ಸಂತಸದ ವಿಷಯವನ್ನು ಪೂಜಾರಿಗಳಿಗೆ ತಿಳಿಸಿದ್ದೇ ತಡ, ಅವರೆಲ್ಲಾ ಬಂಡೆಯ ಇಳಿಜಾರಾದ ಬದಿಯಿಂದ ಮೇಲೆ ಹತ್ತಿ ಹರ್ಷದಿಂದ ಕೂಗಿದರು "ಭೈರ ಬದುಕಿದ್ದಾನೆ!"

ಆನೆ ಭೈರನನ್ನು ಎತ್ತಿ ಬಿಸಾಕಿದಾಗ ಅದೃಷ್ಟವಶಾತ್ ಅವನು ಬಂಡೆಯ ಮೇಲೆ ಬಿದ್ದಿದ್ದ. ಆನೆ ಅಲ್ಲಿಗೆ ಏರಲಾರದೆ ಸುಮ್ಮನೆ ಹೋಗಿತ್ತು. ಆದರೆ ಇಲ್ಲೊಂದು ಕೆಟ್ಟ ಸುದ್ದಿಯಿತ್ತು-ಭೈರನ ಕಾಲು ತೊಡೆಯ ಹತ್ತಿರ ಮುರಿದಿತ್ತು. ನಾನು ಕಷ್ಟಪಟ್ಟು ಬಂಡೆಯನ್ನು ಹತ್ತಿ ನೋಡಿದರೆ ಮುರಿದ ಕಾಲಿನ ನೋವಿನಲ್ಲೂ ಭೈರನ ನಗು ಮಾತ್ರ ಹಾಗೆಯೇ ಇತ್ತು.

ಮರದ ರೆಂಬೆಗಳಿಂದ ಸ್ಟ್ರೆಚರ್ ಒಂದನ್ನು ಮಾಡಿ ಅದರ ಮೇಲೆ ಹಸಿರೆಲೆಗಳ ಹಾಸಿಗೆ ಹಾಸಿದೆವು. ಭೈರನನ್ನು ಎಚ್ಚರಿಕೆಯಿಂದ ಅದರ ಮೇಲೆ ಮಲಗಿಸಿ, ಹಗ್ಗದ ಸಹಾಯದಿಂದ ಸ್ಟ್ರೆಚರ್‌ನ್ನು ಬಂಡೆಯಿಂದ ಇಳಿಸಿ, ಕೆಂಪೆಕೆರೈಗೆ ಹೊತ್ತು ತಂದೆವು.

ಭೈರ ನನ್ನ ಜೊತೆ ಬೆಂಗಳೂರಿನ ಆಸ್ಪತ್ರೆಗೆ ಬರಲು ಬಿಲ್‌ಕುಲ್ ಒಪ್ಪಲಿಲ್ಲ. ಅವನಿಗೆ ತಿಳಿದಿದ್ದ ಕಾಡಿನ ಔಷಧಿಗಳಿಂದ ಮೂಳೆ ಬೆಸೆದುಕೊಳ್ಳುತ್ತದೆ ಎಂದು ಹೇಳಿದ. ಮೂಳೆಗಳು ನೇರವಾಗಿ ಕೂಡದಿದ್ದರೆ ಅವನು ಮತ್ತೆ ಹಿಂದಿನಂತೆ ಓಡಾಡಲಾಗದೆ ಇರಬಹುದು ಎಂದು ತಿಳಿಸಿ ಹೇಳಿ ಭೈರನ ಆಸ್ಪತ್ರೆಯ ಭಯವನ್ನು ಹೋಗಲಾಡಿಸುವಷ್ಟರಲ್ಲಿ ಕತ್ತಲಾಗಿತ್ತು.

ಮರುದಿನ ಬೆಳಗ್ಗೆ ಸ್ಟ್ರೆಚರ್‌ನಲ್ಲೇ ಭೈರನನ್ನು ಅಯ್ಯೂರಿಗೆ ಕರೆತಂದೆವು. ಬಹಳ ಕಷ್ಟದಿಂದ ಸ್ಟ್ರೆಚರ್‌ನ್ನು "ಸಡನ್ ಡೆತ್"ಗೆ ಕಟ್ಟಿಕೊಂಡು, ನಿಧಾನವಾಗಿ ಬೆಂಗಳೂರನ್ನು ಸೇರಿದೆವು.

ಆಸ್ಪತ್ರೆಗೆ ಬಂದಾಗ ನಾವು ದರ್ಶನೀಯ ವಸ್ತುಗಳಾಗಿದ್ದೆವು. ಬಾಡಿಯೇ ಇಲ್ಲದ ಜೀಪಿನ ವಿಚಿತ್ರ ಪೆಟ್ಟಿಗೆಯ ಮೇಲೆ ಮರದಿಂದ ಮಾಡಿದ ಸ್ಟ್ರೆಚರ್‌ನಲ್ಲಿ, ಹಸಿರು ಹಾಸಿಗೆಯ ಮೇಲೆ ಲಂಗೋಟಿಯಲ್ಲಿ ಕಾಲು ಮುರಿದುಕೊಂಡು ಬಿದ್ದಿದ್ದ ಭೈರನ ಯಾತ್ರೆಯನ್ನು ನೋಡಲು ಆಸ್ಪತ್ರೆಯ ಜನರೆಲ್ಲಾ ನೆರೆದಿದ್ದರು.

ಭೈರ ನಾಲ್ಕು ತಿಂಗಳಿನಲ್ಲಿ ಮತ್ತೆ ಮೊದಲಿನಂತಾದ. ಕಾಡು, ಬೆಟ್ಟಗಳು ಮತ್ತು ಅಲ್ಲಿನ ಝರಿಗಳ ಮೇಲಿನ ಭೈರನ ಪ್ರೀತಿ ಅವನ ನೋವನ್ನು ಮರೆಸಿತ್ತು.

ಭೈರನನ್ನು ಕಾರಿನಲ್ಲಿ ಅಯ್ಯೂರಿಗೆ ಕರೆದುಕೊಂಡು ಹೋಗಿ ನಿಧಾನವಾಗಿ ನಡೆಸಿಕೊಂಡು ಕೆಂಪೆಕುರೈಗೆ ತಲುಪಿಸಿದ ದಿನ ನನಗೆ ಬಹಳ ಆನಂದವಾಗಿತ್ತು. ಈ ಬಾರಿ ನಾನು ಎರಿಕ್‌ನನ್ನು ಉದ್ದೇಶಪೂರ್ವಕವಾಗಿ ಕರೆದುಕೊಂಡು ಹೋಗಿರಲಿಲ್ಲ. ಯಾಕೆಂದರೆ ದುರಾದೃಷ್ಟ ಎರಿಕ್‌ನನ್ನು ಹಿಂಬಾಲಿಸುತ್ತದೆ ಎನ್ನುವ ಪ್ರತೀತಿಯನ್ನು ನಾನು ಮತ್ತೆ ಪರೀಕ್ಷಿಸಲು ಸಿದ್ಧನಿರಲಿಲ್ಲ.

ಹಾಂ! ಹೇಳಲು ಮರೆತಿದ್ದೆ. ಭೈರನನ್ನು ಆಸ್ಪತ್ರೆಗೆ ಕರೆತರುವ ಪ್ರಯಾಣದಲ್ಲಿ ಅದೊಂದು ಹೆಚ್ಚಿನ ಕಿರಿಕಿರಿಯಾಗಬಾರದೆಂದು ನಾನು ಕಾಡಿನಲ್ಲಿ ರಾತ್ರಿ ಹಿಡಿದಿದ್ದ ಹೆಬ್ಬಾವನ್ನು ಮತ್ತೆ ಕಾಡಿನಲ್ಲಿ ಬಿಟ್ಟು ಬೆಂಗಳೂರಿಗೆ ಬಂದಿದ್ದೆ!

(ಮುಗಿಯಿತು)

# ಸೀತೆಗೆ



ನನಗೇನು ಹೆಮ್ಮೆ ಇಲ್ಲಬಿಡು
ರಾಮ ನಿನ್ನವನೆಂದು
ಲಂಕೆಯಿಂದ ಬೆಂಕಿಗಿಳಿಸಿದ
ಶಂಕೆಯಿಂದ ಅಡವಿಗಟ್ಟಿದ
ಸುಡುವಾಗ ಅಯ್ಯೋ ಎನದ
ಹಡೆವಾಗ ಕಿವಿಗೊಡದ
ತಲೆಸವರಿ ಕಣ್ಣೊರಸದ
ಹುಸಿಮಾತಿಗೆ ಮನದರಸಿಯ
ತೊರೆದ-
ಗಂಡೆದೆ ಇಲ್ಲದ ಗಂಡನವನು
ಏಕಪತ್ನೀ ವ್ರತಸ್ಥನವನು
ನನಗೇನು ಹೆಮ್ಮೆ ಇಲ್ಲಬಿಡು
ರಾಮ ನಿನ್ನವನೆಂದು

ಎಳೆಯ ಕಂದಂಗಳ
ಬೆರಳಪ್ಪದದವನು
ಎತ್ತಿ ಮುತ್ತಿಟ್ಟು ಕಣ್ಣಿಡದವನು
ಚಿಗುರ ಮೈ ಸವರಿ
ಹಿತ ಸ್ಪರ್ಶವರಿಯದವನು
ತೊದಲು ನುಡಿಗೆ ದನಿ ಸೇರಿಸಿ
ನಗದವನು
ತತ್ವ ಕಥೆಯ ಹೇಳಿ
ಜೋಗುಳ ಹಾಡದವನು
ಪಿತೃಪರಿಪಾಲಕ ಮಗನಿವನು
ಪಿತೃವೇ ಅಲ್ಲದವನು
ನನಗೇನು ಹೆಮ್ಮೆ ಇಲ್ಲ ಬಿಡು
ರಾಮ ನಿನ್ನವನೆಂದು

ಸಹ ಮಡದಿ ಜೊತೆಯಾದ
ತಮ್ಮನ ಹೆಮ್ಮೆಯ ಅಣ್ಣನಿವನು
ಸೋದರ ಸತಿ ಊರ್ಮಿಳೆಯ ಮನವರಿಯದವನು
ಭಾವನೆಯೇ ಇಲ್ಲದ ಭಾವನಿವನು
ನನಗೇನು ಹೆಮ್ಮೆ ಇಲ್ಲಬಿಡು
ರಾಮ ನಿನ್ನವನೆಂದು

ಮೋಹಿಸುದುದು ತಪ್ಪೆಂದು
ಮೂಗ ಕುಯ್ಸಿ ನಕ್ಕವನು
ಸ್ತ್ರೀ ಅಂದಗೆಡಿಸಿ
ನಾ ಸುಂದರನೆಂದು ಕೊಂಡವನು
ಸ್ತ್ರೀ ಶೋಷಕ (ಪುರುಷೋತ್ತಮನಿವನು)
ನನಗೇನು ಹೆಮ್ಮೆ ಇಲ್ಲಬಿಡು
ರಾಮ ನಿನ್ನವನೆಂದು

• ಪುಷ್ಪ ನಾಗತಿಹಳ್ಳಿ

# ...ಯನೂರ್ ಮಂಜುನಾಥನ್ನ ದಂಡುಪಾಳ್ಯ ಬಲಿ ತಗಂಡದೆ!

## ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಕಾವೇರಿ ನೀರಿನ ಗಲಾಟೆ ವಿಷಯ ಕೇಳಿದ ...ಮಾವ,

"ನಮೀಗೇ ಕುಡಿಯಕ್ಕೆ ನೀರಿಲ್ಲಾ. ಇವುಳಿಗೆ ಎಲ್ಲಿಂದ ...ನಷ್ಟ ನೀರ?" ಎಂದ.

"ನೀರು ಮಡಿಕಂಡು ಆಟ ಆಡ್ತಯಿದ್ದಳಂತೆ ಕಣಮಾವ ...ಲಲ್ಲಾ."

"ನೋಡು ಮತ್ತೆ."

"ಲೈಕ್ಕ ಹಾಕು. ಇನ್ಯಂಥ ಗಾತಕಿ ಇದ್ದಳವುಳು."

"ಆ ಕರುಣಾನಿಧಿ ಇದ್ದಾಗ ಇಂತ ಗಲಾಟಿ ಇರದಿಲ್ಲ ...ವೆ?" ಎಂದ ಸೀರ.

"ಇಲ್ಲ ಕಣೊ ಮಾವ. ಎಂ.ಜಿ. ಆರ್, ಕರುಣಾನಿಧಿ ...ದ್ದಾಗ ಈ ತರ ಯಾವತ್ತೂ ನೀರಿನ ಗಲಾಟಿ ಆಗಿಲ್ಲ, ...ಮುಂಡೆ ಬಂದಾಗ್ಯಲ್ಲ ಇದೇ ತರ ಗಲಾಟಿ ಮಾಡ್ಯವುಳೆ."

"ಅವುಳು ಮದುವೆನೆ ಆಗಿಲ್ಲ ಅಂತಿ ಅದ್ಯಂಗ್ಲ ಮುಂಡೆ ...ಳು?" ಎಂದಳು ಜುಮ್ಮಿ.

"ಎಂ.ಜಿ.ಆರು ಸತ್ತಾಗ ನಾನು ಸತಿಹೋಯಿತ್ತಿದ್ದೆ ...ದ್ರೆ ಏನರ್ಥನೆ?"

"ಸತಿ ವೋಯ್ತಿನಿ ಅಂದ್ರೇನೂ?"

"ಅಂದ್ರೆ, ಹಿಂದಿನ ಕಾಲ್ದಲ್ಲಿ ಗಂಡ ಸತ್ತರೆ ...ನ ಜೊತೆ ಹೆಂಡತಿನೂ ಬೆಂಕಿವಳಿಕೆ ...ತಿದ್ದು, ಹೂಕೊ ಗುಂಡಿಗೆ ನೂಕಿ ಮಣ್ಣು ...ಚ್ಚೋರು."

"ಎವ್ವೇ ಎವ್ವೆ ಕೇಳಕ್ಕೆ ಹೆದ್ರಿಕಾಯ್ತದಲ್ಲಾ."

"ನೋಡು ಮತ್ತೆ, ಎಂ.ಜಿ.ಆರು ಸತ್ತಾಗ ನಾನು ...ಗೆ ಸಾಯಿತ್ತಿದ್ದೆ ಅಂತಳಲ್ಲಾ, ಯಾರಾರ ನಂಬೋ ...ತೇನೆ ಇದೂ."

"ಅವುಳಿಗೆ ಗಂಡುಸ್ರು ಕಂಡ್ರೆ ಆಗದಿಲವಂತೆ. ...ಸ್ಯಂಗೆ ಸಾಯಿತ್ತಿದ್ಲು" ಎಂದ ಸೀರ.

"ನೋಡವ್ವ, ಸೀರ ಮಾವನಿಗೂ ಅವಳ ...ನ್ನಿ ಗೊತ್ತು, ಅದ್ಯಂಗೆ ತಿಳಕಂಡೊ ಮಾವ."

"ಮದಿವಾಗದೆ ಅಂಗೆ ಉಳಕಂಡ್ಳು ಅಂದ್ರೆ ಗಂಡುಸ್ರು ...ದ್ರೆ ಆಗದಿಲ್ಲ ಅಂತ ಅಲವೇನ್ನ."

"ಅವುಳಿಗೆ ಸರಿಯಾದ ಗಂಡು ಸಿಕ್ಕದೆ ...ಆಗಿರಬವುದು."

"ದೇವರು ಒಂದು ಗಂಡಿಗೆ ಒಂದು ಹೆಣ್ಣ ಸೃಷ್ಟಿ ...ಮಾಡಿರತನೆ ಕಂಡ್ಯ."

"ಒಂದು ಗಂಡಿಗೆ ಮೂರೆಣ್ಣನೂ ಸೃಷ್ಟಿ ಮಾಡಿರತನೆ. ...ಜಿ.ಆರ್.ಗೆ ಜಯಲಲ್ತನೂ ಸೇರಿ ಮೂರು ಜನಿದ್ರು. ...ದಕೇನೇಳ್ತೀ?"

"ದೇವರ ಲೈಕ್ಕಾಚಾರ ಅಂಗಿದ್ರುವೆ ಮನುಸುನ ಬುದ್ದಿಗೆ ...ವರೇನು ಮಾಡ್ತನ್ಲ, ಇದೇ ನಮ್ಮೂರಲ್ಲಿ ಕೌರವಣ್ಣ ...ಲ್ಯ ಮದಿವಾದ. ಅವುನ ಮಗ ಮೂರು ಮದಿವಾದ. ಅಂಥೋರಿಗೇನು ಮಾಡ್ತೀ. ಅವ್ನಲ್ಲ ಒಂದಿದು. ಕೆಲುವುರು ಯಮ್ಮೆ ಕಟ್ಟದಿಲ್ಲ, ಆದ್ರೂ ಹಾಲು ಮೊಸರು ಕುಡಿತರೆ. ಅಂಗೆ ಜಯಲಲ್ತನೂ ಮದಿವಾಗದಂಗೆ ಕಾಲಹಾಕ್ತ ಇರಬವುದು. ಕಾವೇರಿ ಸುದ್ದಿ ಮಾತಾಡಿ ಅಂದ್ರೆ, ಅವುಳು ಮದಿವಾದ್ಲೆ, ಮಕ್ಕಳಾದವೆ ಅಂತ ಮಾತಾಡ್ತಿರಲ್ಲಾ, ನಿಮಗೇನನ್ನಬೇಕು" ಎಂದ ಕಾಳಮಾವ.

"ಪರವಾಗಿಲ್ಲ ಕಣಮಾವ. ನೀನು ದ್ಯಾವೇಗೌಡನಂಗೆ ಮಾತಾಡ್ತಿ. ಅವನೂ ಕೂಡ ನಿನ್ನಂಗೆ ಜಯಲಲ್ತನಿಗೆ ಏನು ಅನ್ನಬ್ಯಾಡಿ, ಅವುಮಾನ ಮಾಡಬ್ಯಾಡಿ ಅಂದವುನೆ."

"ಅವುನು ಯಾವತ್ತಿಗೂ ಹೆಣ್ಣುಮಕ್ಕಳಿಗೆ ಬೆಲೆ ಕೊಡ್ತನೆ ಕಂಡ್ಯ."

"ಊ ಕಣ ಮಾವ. ನನ್ನನ್ನೆ ಒಂದು ಸತಿ ಸಿಟ್ಟಾರ್ ಅಂತ ಕರದು, ಹತ್ರಕೆ ಕುಂಡ್ರಿಸಿಗಂಡಿದ್ದ" ಎಂದಳು ಜುಮ್ಮಿ.

"ಅವುನು ಪಾರ್ಟಿ ಚಿಹ್ನೆ ನೋಡೆ. ಹುಲ್ಲೊತ್ತಗಂಡಿರೊ ಹೆಣ್ಣುಮಗಳು. ಅದರಲ್ಲೇ ಗೊತ್ತಾಯ್ತದೆ ದೇವೇಗೌಡ



ಹೆಣ್ಣುಮಕ್ಕಳಿಗೆ ಎಷ್ಟು ಬೆಲೆ ಕೊಡ್ತನೆ ಅಂತ" ಎಂದು ಕಾಳಮಾವ ದೇವೇಗೌಡರನ್ನ ಕೊಂಡಾಡುವಾಗ ವಾಟಿಸ್ಸೆ ಕಾಣಿಸಿಕೊಂಡ.

"ನಿಜ ದೊಡಪ್ಪ ನಿನ್ನ ಮಾತು ಹಂಡ್ರೆಡ್ ಪರಸೆಂಟು ನಿಜ. ಪರೆಗ್‌ಜಾಂಪಲ್ ಅವುನು ಮುಖ್ಯಮಂತ್ರಿಯಾಗಿದ್ದಾಗ ಜಯಲಲ್ತ ಕೇಳಿದ್ಲು ಅಂತ ರಾತ್ರಿವೊತ್ತು ಅಂದ್ರೆ ನೈಟಲ್ಲೇ ನೀರುಬುಟ್ಟಿದ್ದ. ಅದೂ ಅಲ್ದೆ ಬಾಯಿಬುಡದಂಗೆ ಸುಮ್ಮನಿದ್ದ ಆ ಕಡೆ ಜಯಲಲ್ತನೂ ಸುಮ್ಮನಿದ್ಲು. ಆಗ ಪಬ್ಲಿಕ್ಕು ನೀರು ಹರದಿರೊ ಜಾಗ ನೋಡ್ತಾ, ನದಿ ಎಡದಲ್ಲಿದ್ದ ಹುಲ್ಲೆಲ್ಲ ಬೆಂಡಾಗಿರದ ನೋಡಿ ಹೇಳಿದ ಮ್ಯಾಲೆ ಗೊತ್ತಾಯ್ತು ದೇವೇಗೌಡ್ರು ಹೆಣ್ಣುಮಕ್ಕಳ ಮಾತಿಗೆ ಎಷ್ಟು ಬೆಲೆ ಕೊಡ್ತರೆ ಅಂತ ಗೊತ್ತಾ?" ಎಂದ ವಾಟಿಸ್ಸೆ.

"ನೀರಿದ್ದಾಗ ಬುಟ್ರೆ ತಪ್ಪೇನ್ಲ? ಯಾವತ್ತು ಇದ್ದಾಗ ಇಲ್ಲ ಅನ್ನಬಾರ್ದು. ಇಲ್ಲಾಗ ಎಲ್ಲಿಂದ ಕೊಟ್ಟರೂ."

"ಇಲ್ದೆಯಿದ್ರು ಕೊಡಿ ಅಂತ ಅವುಳ ಕೇಳದೋಗ್ಲಿ, ನ್ಯಾಯಾಲಯ ನೀರಿಗೆ ಬಿದ್ದ ಚೆಕ್ಕನಂಗೆ ಕಾಣೊ ಪ್ರಧಾನಿಗೂ ಹೇಳ್ತದಲ್ಲಾ, ಈ ಪ್ರಾಬ್ಲಮ್ಮಿಗೆ ಸಲೂಶನ್ನು ಹ್ಯಂಗೆ ದೊಡಪ್ಪ?"

"ನೀರು ಬಿಡುದೆಯಿದ್ರಾಯ್ತು ಕಂಡ್ಯ. ಇದೇ ಮೈಸೂರು ದೇಸದ ಜನ ಹೋಗಿ ತೂಬಿನ ಗುಂಡಿತ್ರ ಕುಂತಗಂಡ್ರೇ ಅದ್ಯಾವನು ತೂಬೆತ್ತನೂ" ಎಂದ ಕಾಳಮಾವ.

"ಸೋನಿಗಾಂಧಿ ಏನಂತಳೆ?" ಎಂದಳು ಜುಮ್ಮಿ.

"ಅವುಳು ಸಾಮಾನ್ಯವಾಗಿ ಇಂತ ಟೈಮ್ನಲ್ಲಿ ಮಾತಾಡದಿಲ್ಲ ಕಣಕ್ಕ. ಆದ್ರು ತಮುಳ್ರು ಕಂಡ್ರೆ ಅವುಳಿಗೆ ಆಗದಿಲ್ಲ. ಅವುಳ ಗಂಡನ್ನ ಕೊಂದೋರು ತಲಿಕೆಟ್ಟ ಕೊಂಗಾಟಿಗಳು. ಆಮ್ಯಾಲೆ ಜಯಲಲ್ತನ್ನ ಕಂಡ್ರೂ ಅಷ್ಟಕಷ್ಟೆ. ಇನ್ನ ಕರ್ನಾಟಕದಲ್ಲಿ ನರಕಾಧಿಪತಿಗಳಾದ ಬಿಜೆಪಿ ಸರ್ಕಾರದೆ. ಅಂಗಾಗಿ ಯಂಗೂ ಮಾತಾಡದಂಗೆ ಸುಮ್ಮನಿದ್ದು ಬುಡ್ತಳೆ. ರಿಯಲಿ ಜಂಟ್ಳು ಮ್ಯಾನವುಳು."

"ಈ ಕ್ವಂಗಾಟಿ ನನ್ನ ಮಕ್ಕಳಿಂದ ನಾವು ಭಾಳ ಅನುಭವಿಸಿಬುಟ್ಟೊ" ಎಂದ ಸೀರ.

"ನಿನಗ್ಯಾವ ಕಷ್ಟ ಕೊಟ್ರು ಚಿಗಪ್ಪ?"

"ನನಗಿಲ್ಲ ಕಂಡ್ಯ. ಆ ವೀರಪ್ಪನ್ ವಸಿ ಜನ ಸಾಯಿಸಿದ್ನೆ. ಆಮ್ಯಾಲೆ ರಾಜಕುಮಾರನ್ನ ಹೊತಗಂಡೋಗಿ ವಸಿ ಕೊಲೆ ಕೊಟ್ನೆ. ಅದನ್ಯಲ್ಲ ನ್ಯನಿಸಿಗಂಡ್ರೆ ಆ ಮುಂಡೆ ಮಕ್ಕಳಿಗೆ ನೀರಲ್ಲ ಉಚ್ಚೆನು ಕೊಡಬಾರ್ದು ಅನ್ನುಸ್ತದೆ."

"ಕೊಡಬ್ಯಾಡ. ನೀನೆ ಕುಡಕೊ ಚಿಗಪ್ಪ, ಹೆಲ್ತು ಇಂಪ್ರು ಆಯ್ತದೆ!"

"ಅಮಿಕ್ಯಂಡು ಕೂತಗಳ್ಳ. ತಮಾಸಿ ಮಾಡಬ್ಯಾಡ ನೀರು ಇಲ್ದೆಯಿದ್ರು ನೀರು ಕೊಡು ಅನ್ನದೂ ಒಂದು ಕೋರ್ಟೇನ್ಲ?"

"ಕೋರ್ಟು ಯಾವತ್ತು ನಿನ್ನ ಪರಿಸ್ಥಿತಿನ ಪರಿಶೀಲಸ್ತದೆ ಚಿಗಪ್ಪ ಅದಿರದು ಡೆಲ್ಲಿಲಿ. ಕನ್ನಂಬಾಡಿ ಇರದು ಮೈಸೂರಲ್ಲಿ. ಗದ್ದೆ ಬಯಲಿರದು ತಮಿಳುನಾಡಲ್ಲಿ. ಇಲ್ಲಗ್ಯಲ್ಲ ಬಂದು ಪರಿಶೀಲನೆ ಮಾಡಿ ನ್ಯಾಯವಾದ ತೀರ್ಪು ಕೊಡೊ ಕೋರ್ಟು ನಮ್ಮ ದೇಶದಲ್ಲಿ ಇಲ್ಲ. ನಾನು ಜಾಸ್ತಿ ಮಾತಾಡಕ್ಕೆ ಹೋದ್ರೆ ಕಂಟೆಂಪ್ಟಾಪ್ ಕೋರ್ಟಾಯ್ತದೆ. ಈಗ ಸರ್ಕಾರನೆ ಅಂತ ಕ್ಯಲಸ ಮಾಡದಾದ್ರೆ ನೀರು ಬುಡದೆ ಹೋದ್ರಾಯ್ತು."

"ಲೈ, ಮೈಸೂರು ಮಾರಾಜರು ಅರಮನೆ ವಡವೆನ್ಯಲ್ಲ ತಗಂಡೋಗಿ ಬಂಬಾಯಿಲಿ ಮಾರಿ ತಂದು ದುಡ್ಡಲ್ಲಿ ಕಟ್ಟಿರೊ ಕನ್ನಂಬಾಡಿ ನೀರಿನ ಮ್ಯಾಲೆ ಹಕ್ಕಿರದು ನಮಿಗೆ ಕಂಡ್ಯ" ಎಂದ ಸೀರ.

"ಈಗ ಅಂಗನ್ನಕ್ಕೆ ಬರದಿಲ್ಲ ಚಿಗಪ್ಪ."

"ಯಾಕ್ಲ?"

"ಯಾಕೆ ಅಂದ್ರೆ ನಮ್ಮಜ್ಜದೀರು ಕಟ್ಟರೊ ಅರಮನೆ ನಂದು ಅಂತ ಹೇಳಕ್ಕೆ ಶ್ರೀಕಂಠದತ್ತ ಒಡೆಯನಿಗೆ ಯಂಗೆ ಹಕ್ಕಿಲ್ಲವೊ, ಅದೇ ತರ, ಕನ್ನಂಬಾಡಿ, ಕಾವೇರಿ ನದಿಯಲ್ಲಾ ರಾಷ್ಟ್ರಕ್ಕೆ ಸೇರಿದ, ರಾಷ್ಟ್ರದ ಜನಕ್ಕೆ ಸೇರಿದ ಸಂಪತ್ತು, ಅದ ಹಂಚಗಬೇಕೆ ಹೊರತು ನಂದು ಅಂತ ಬೀಗಹಾಯ್ಕಳಕ್ಕೆ ಬರದಿಲ್ಲ."

"ಆಯ್ತಪ್ಪ ಅಂಚಗಳನ. ಇದ್ರ ತಾನೆ ಅಂಚಗಳದು. ಅಂತೂ ಜಗದೀಶ್ ಶೆಟ್ರು ವಳ್ಳೆ ತೀರಮಾನ ತಗಂಡವುನೆ ಬುಡು ಹೋಗಲತ್ಗೆ."

"ಶೆಟ್ರೊನಲವೇನ್ಲ ಅವುನು. ಅವುನ ಕ್ಯೆಯೊಳಗಲ ಕಲ್ಲೀಸಗಳಕ್ಕಾದತೆ."

"ದೊಡಪ್ಪ ಅವುನು ಶೆಟ್ಟರೋನಲ್ಲ ಲಿಂಗಾಯಿತ್ರೊನು. ಅದ್ಕೆ ಎಡೂರಪ್ಪ ಸಿ.ಎಂ. ಮಾಡಿದ್ದು."

"ಎಡೂರಪ್ಪ ಏನು ಮಾಡ್ತ ಅವುನ್ಲ ಈಗ?"


"ನಮಿಗ್ಯಲ್ಲ ಕಾವೇರಿ ಚಿಂತೆಯಾದ್ರೆ, ಅವುನಿಗೆ ಕುರ್ಚಿ ಚಿಂತೆ ಪಾಪ. ಈಗಾಗ್ಲೆ ಅವುನ ಪಾಲೋಯರ್ ಆಯನೂರ್ ಮಂಜುನಾಥನ್ನ ದಂಡುಪಾಳ್ಯ ಬಲಿತಗಂಡದೆ."

"ಅದೇನು ಸರಿಯಾಗೇಳ್ಳ."

"ನೋಡು ಆಯನೂರ್ ಮಂಜುನಾಥ ಕುಮಾರಣ್ಣನ ಟೀಮೂ ದಂಡೂಪಾಳ್ಯದ ಗ್ಯಾಂಗು, ಅದರ ಲೀಡ್ರು ಕುಮಾರಸ್ವಾಮಿ ಅಂದ. ಅದ್ಕೆ ತೀರ ಸಿಟ್ಟು ಮಾಡಿಕಂಡ ಕುಮಾರಣ್ಣ ಈಶ್ವರಪ್ಪನಿಗೆ ಪೋನು ಮಾಡಿ 'ನೋಡ್ರಿ ಈಶ್ವರಪ್ಪ, ಮುಂದೆ ನಾವು ನೀವು ಜೊತೆಲಿ ಸರ್ಕಾರ ಮಾಡನ. ಈಗ ನೀವು ಆದಷ್ಟು ಕ್ರಮತಗಂಡು ಆಯನೂರು ಮಂಜುನಾಥ, ಎಡೂರಪ್ಪ ಇವರ ಟೀಮುನ್ನ ದೂರ ಮಾಡಿ. ಉಪಮುಖ್ಯಮಂತ್ರಿಯಾದೊನು ಮುಂದೆ ಮುಖ್ಯಮಂತ್ರಿಯಾಗ್ತನೆ. ನಿಮ್ಮ ಮುಂದೆ ಅಂತದೊಂದು ಅವುಕಾಶ ಇದೆ. ಈಗ ನಮ್ಮನ್ನ ದಂಡುಪಾಳ್ಯದ ದಳಪತಿ ಅಂದಿರೊ ಆಯನೂರ್ ಮಂಜುನಾಥನ್ನ ವಕ್ತಾರನ ಜಾಗದಿಂದ ವಜಾ ಮಾಡಿ' ಅಂದನಂತೆ. ಮದಲೆ ಸ್ವಂತ ಬುದ್ಧಿ ಇಲ್ಲದ ಈಶ್ವರಪ್ಪ ಆಯನೂರ್ ಮಂಜನ್ನ ವಜಾ ಮಾಡಿ, ಅಂಗೆ ತನ್ನ ಕ್ಷೇತ್ರಕ್ಕೂ ಎಳ್ಳುನೀರು ಬುಟಗೊಂಡವುನೆ. ರಿಯಲಿ ಇಂಟರೆಸ್ಟಿಂಗ್ ಸ್ಟೋರಿ. ಈಗ ಸ್ಟಾಟಾಯ್ತು, ಗ್ರೇಟ್ ಕುಮಾರಣ್ಣ ರಿಯಲಿ ಗ್ರೇಟ್."

"!?"


## 'ಸಾರಿ'



ನೀವು **sensitive** ಆದರೆ ಕತೆಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. 'ಮದುವೆಯಾಗು' ಎಂದು ಮನೆಯವರೆಲ್ಲ ಒತ್ತಡ ತರುತ್ತಿರುವಾಗ 'ಮದುವೆಯಾದವರನ್ನು ನಾನು ನೋಡಿಲ್ಲವೆ?' ಎಂದು ನಕ್ಕು ಉದಾಸೀನಳಾಗುವ ಮಾಧವಿ. ಈಕೆಗೆ ಗೊತ್ತು, ತಾನು ಹೇಳುವುದು ಸರಿಯಲ್ಲ, ತನ್ನ ಮನೆಯವರ ಒತ್ತಡವೂ ಸರಿಯಲ್ಲ, ಕಾಲ ಸರಿದುಹೋಗುತ್ತಿದೆ. ವ್ಯಾಮೋಹ ನಿಮಿಷಗಳಿಗೆ ಸಿಕ್ಕು ತನ್ನ ಬಣ್ಣ ಬದಲಿಸುತ್ತದೆ. ಹಾಗೆಂದು ಮಾಧವಿ ಆಗತಾನೇ ಸ್ನಾನ ಮಾಡಿ ನಡುಮನೆಗೆ ಬರುತ್ತಾಳೆ. ತನ್ನ ರೂಮ್‌ಗೆ ಹೋಗಬೇಕೆನ್ನುವಷ್ಟರಲ್ಲಿ ...ಲ್ಲಿ ಯಾವನೋ ಒಬ್ಬ ಕೂತಿರುವುದು ಕಾಣಿಸುತ್ತದೆ. ಆಕೆ ಎಂದೂ ಅಪರಿಚಿತರನ್ನು ಮಾತಾಡಿಸಿದವಳಲ್ಲ. ...ದರೆ ಆತ ಅಪರಿಚಿತನಂತಿಲ್ಲ, ಆತ ಎದ್ದು ಗೊಂದಲದಿಂದ ಮಾತಾಡಲೆತ್ನಿಸಿ ಬೀಳಲಿದ್ದಾನೆ. ಮಾಧವಿಗೆ ಸೋಜಿಗವಾಗುತ್ತದೆ. ...ಚಿಕ್ಕ ಹುಡುಗ. 'ಏನು?' ಅನ್ನುತ್ತಾಳೆ. ದೊಡ್ಡ ಪ್ರಪಂಚವೊಂದು ತೆರೆದುಕೊಂಡಂತೆ ಮಾಧವಿಗೆ ಅನ್ನಿಸುತ್ತದೆ. ಅವನು ...ಕ್ಕಿಚಿಗೆ ಸೀರಿಕೊಂಡ ತನ್ನ ಮುದ್ದಿನ ನಾಯಿ ಡಾಲಿಯಂತಿದ್ದಾನೆ; ತನ್ನ ನೆಚ್ಚಿನ ಪುಷ್ಪ ಪಾರಿಜಾತದಂತಿದ್ದಾನೆ; ತನ್ನ ...ಪ್ರೀತಿಯ ಪಾತ್ರ ಹೂವಯ್ಯನಂತಿದ್ದಾನೆ. ಅವಳಿಗೆ ಕುತೂಹಲವಾಗಿ ಅಲ್ಲಿಯೇ ನಿಲ್ಲುತ್ತಾಳೆ. ಇಬ್ಬರೂ ಹುಟ್ಟಿದಂದಿನಿಂದ ...ಪರಿಚಿತರಂತೆ ಮಾತಾಡತೊಡಗುತ್ತಾರೆ. ಬೆವರಿನಲ್ಲಿ ಮಿಂದಂತಿರುವ ಮುರಳಿ. ಆತ ಬುದ್ಧಿವಂತನಲ್ಲ, ತನಗೆ ಇಷ್ಟವಾಗುವವನು. ...ಮದುವೆಯಾಗುವ ಆಸೆಯಿಲ್ಲ, ಇಲ್ಲ, ತನಗೆ ಯಾವ ಆಸೆಯೂ ಇಲ್ಲ, ಸಾರಿ....

ಸೂಕ್ಷ್ಮಪ್ರಜ್ಞ ಮೂಲಭಾಷೆ ಯಾಕೆ, ಏನು ಎಂದು ಅನೇಕರು ತಿಳಿದಿರುತ್ತಾರೆ; ಕತೆ ಕಟ್ಟಿ ಹೇಳಬಲ್ಲ, ಹಾಡಿ ...ಮ್ಮೂ ಮುದಗೊಳಿಸಬಲ್ಲ, ಚಿತ್ರಿಸಿ ಖುಷಿ ಕೊಡಬಲ್ಲ ಪ್ರತಿಭಾವಂತನಿಗೆ ಮುಖ್ಯವಾದದ್ದು ತನ್ನತನ; ತನ್ನ ವ್ಯಕ್ತಿತ್ವಕ್ಕೆ ...ಆಗುತ್ತಿರುವುದನ್ನು ವಿವರಿಸುವುದು ಆತನಿಗೆ ಮುಖ್ಯ. ಅದೊಂದೇ ಮನುಷ್ಯ ಬಲ್ಲ ಮನಸ್ಸು. ಆದರೆ ತನ್ನತನವನ್ನು ...ರರ ಮೇಲೆ ಹೇರತೊಡಗಿದೊಡನೆ ಇತರರ ವ್ಯಕ್ತಿತ್ವ ತನ್ನ ಇಷ್ಟಕ್ಕೆ ತಕ್ಕಂತೆ ದೊರೆಯುತ್ತದೆ. ತನಗೆ ಅನ್ನಿಸಿದಂತೆ ...ಕೃತಿ ಅವನ ವರ್ಣನೆಯಾಗುತ್ತದೆ. ಆದ್ದರಿಂದಲೇ ಲೇಖಕ ಮತ್ತು ಜಗತ್ತು ಸದಾ ಒಬ್ಬರಿಗೊಬ್ಬರು 'ಕ್ಷಮಿಸಿ' ಎಂದು ...ಹೇಳುತ್ತಿರುತ್ತಾರೆ. ಮಹಾ ಉದ್ಧಟನಾದ ಕಲಾವಿದ ಮಾತ್ರ ತಾನೇ ಸರಿ ಎಂದು ತಿಳಿದಿರುತ್ತಾನೆ. ಆತ ಹಾಗೆಂದಾಗಲೆಲ್ಲ ...ಸುತ್ತಣ ಜನ ಮತ್ತು ನಿಸರ್ಗ ತಾವೇ ಸರಿ ಅನ್ನುತ್ತವೆ. ಇಬ್ಬರೂ ಪರಸ್ಪರ ಅರಿತಾಗ 'ಕ್ಷಮಿಸಿ' ಎಂದು ಕೃತಿ ಮೂಡುತ್ತದೆ.

ಬರೆಯುವುದು ಮಹಾ ಪ್ರೀತಿಯ ಕೆಲಸವೆನ್ನುವುದು ಅದಕ್ಕೇ. ಮಿಲ್ಟನ್ ಕೂಡ 'ನಿನ್ನ ಬರವಣಿಗೆ ಸರಳವಾಗಿ, ...ಸ್ಪಷ್ಟವಾಗಿ, ಹೃದಯಸ್ಪರ್ಶಿಯಾಗಿ ಇರಬೇಕು' ಎಂದು ಹೇಳಿದ. ಕತೆಗಾರನೊಬ್ಬ ಇಬ್ಬನಿ ಬಿದ್ದ ಗರುಕೆಯ ಮೇಲೆ ನಡೆಯುವುದೇ ಒಂದು ಕತೆಯ ವಿವರ ಆಗಬಲ್ಲದು; ಕತೆಗಾರನಲ್ಲದವನು ಕುರುಕ್ಷೇತ್ರವನ್ನು ವರ್ಣಿಸಿದರೂ ಅದು ಜಡವಾಗಿಯೇ ಇರಬಲ್ಲದು. ಆದ್ದರಿಂದಲೇ ಕತೆ ಇಬ್ಬನಿ, ಚಳಿ, ಚಿಕ್ಕ ಹುಡುಗಿ, ಅವಳ ಗೆಳೆಯ, ಇಬ್ಬರ ಓಟ ಮತ್ತು ಬೆವರು... ಹೀಗೆ ಒಟ್ಟಾಗಿಯೇ ಬರುತ್ತದೆ.





## ಮಾತಿನೊಂದಿಗೆ ಬಂದ ಲೋಕ

ಜರಡಿ ಹಿಡಿಯುವುದು, ಸೋಸುವುದು, ತೂರುವುದು... ನಾನು ಒಂದು ಮನೆಯಲ್ಲಿನ ಕ್ರಿಯೆಗಳ ಬಗ್ಗೆ ಯೋಚಿಸುತ್ತಿದ್ದೆ. ವಯಸ್ಸಾದಂತೆ ಪ್ರತಿಯೊಬ್ಬ ಲೇಖಕನೂ ಒಳಲೆ, ಮಿಳ್ಳೆ, ಹೆಂಚು, ಕಾವಲಿ, ತುರೇಮಣೆ, ಒಜ್ಜಲ ಮುಂತಾದ ವಸ್ತುಗಳ ಲೋಕವನ್ನು ಬಿಟ್ಟು 'ಗಣ್ಯ'ರ ಮಾತುಗಳನ್ನು ಬಳಸತೊಡಗುತ್ತಾನೆ. ಹೀಗಾಗಿ ವಯಸ್ಸಾದವರು ತಾವು ಗಣ್ಯರೆಂದು ತಿಳಿದು ಬರೆದದ್ದರಲ್ಲಿ ಜೀವ ಇರುವುದಿಲ್ಲ, ಆತ್ಮ ಅವರ ಬರವಣಿಗೆಯನ್ನು ಪ್ರವೇಶಿಸುತ್ತದೆ, ತ್ಯಾಗ, ಸಿದ್ಧಿ ಮುಂತಾದವು ತಕ್ಕ ಸ್ಥಾನ ಆಕ್ರಮಿಸಿಕೊಳ್ಳುತ್ತದೆ.

ನಾನು ಈಗ ಒಂದು ಕತೆ ಬರೆಯಬೇಕೆಂದಿದ್ದರೆ, ಆ ಕತೆ ಸಾಮಾನ್ಯ ಹೆಂಗಸೊಬ್ಬಳ ದಿನಚರಿಯನ್ನು ವಿವರಿಸಬೇಕೆಂದಿದ್ದರೆ ಏನು ಮಾಡಬೇಕು? ನಮಗೆ ಈಗ ನೆನಪಿರುವ ಮಾತುಗಳಿಗೆ ಸರಿಯಾಗಿ ಅವಳ ಕ್ರಿಯೆಗಳನ್ನು ಹೊಂದಿಸುತ್ತಾ ಹೋಗುತ್ತೇವೆ. ಕ್ರಿಯಾಶೀಲ ಕೃತಿ ಹಾಗಾಗುವುದಿಲ್ಲ, ನಮ್ಮ ಊರುಗಳಲ್ಲಿ 'ಜರಡಿ' ಇಲ್ಲ, ಹಾಗಾದರೆ ಜರಡಿ ಹಿಡಿಯುವುದಕ್ಕೆ ಏನೆನ್ನುತ್ತಿದ್ದೆವು? ಅದು ಸಾಣೆ; ಸಾಣೆಸುವುದು. ಈ ಮಾತು ನೆನಪಾದೊಡನೆ ಒಂದು ರೀತಿಯ ಆತ್ಮವಿಶ್ವಾಸ ಉಕ್ಕುತ್ತದೆ.

ಗಾಡಿಯಲ್ಲಿ ಕೂತಿದ್ದೆ... ಎಂದಕೂಡಲೆ 'ಗಾಡಿಯ ಯಾವ ಭಾಗದಲ್ಲಿ ಕೂತಿದ್ದೆ?' ಎನ್ನುವುದು ಮುಖ್ಯವಾಗುತ್ತದೆ. ಅವುಗಳಿಗೆಲ್ಲ ಒಂದೊಂದು ಹೆಸರಿದೆ. ಮೂಕಿ, ನೊಗ, ಕಣಿಗೆ, ಗುಂಬ, ಗಾಲಿ... ನಾನು ಹೇಳುತ್ತಿರುವ ಬಹುಪಾಲು ಪದಗಳು ನನ್ನಲ್ಲಿ ಅನುಮಾನ ಹುಟ್ಟಿಸುತ್ತಿವೆ. ಇವನ್ನೆಲ್ಲ ಬಿಟ್ಟು ಆಧುನಿಕ ಕತೆ ಬರೆದರೆ ಎಲ್ಲ ಎಷ್ಟು ಸಲೀಸು! ಆದರೆ ಹಾಗೆ ಆಗಬಾರದು... ಆದರಿಂದ ನಾವು ಹೇಳುವ ವಿಷಯದ ಸೊಗಡು ಕೆಡುತ್ತದೆ. ಇಂಗ್ಲಿಷ್‌ನಲ್ಲಿ ಈ ಸೊಗಡಿಗೆ ಸರಿಯಾದ ಮಾತಿಲ್ಲ, ಇಂಗ್ಲಿಷ್‌ನಲ್ಲಿ ವಿಜ್ಞಾನಕ್ಕೆ, ವೈದ್ಯಕೀಯಕ್ಕೆ, ಮಾನವಶಾಸ್ತ್ರಕ್ಕೆ ಸಂಬಂಧಿಸಿದ ನೂರಾರು ಮಾತುಗಳಿರಬಹುದು; ಅವು ಕನ್ನಡದಲ್ಲಿಲ್ಲ. ಹಾಗೆಯೇ ಕನ್ನಡದಲ್ಲಿರುವ ದಿನನಿತ್ಯದ ಮಾತುಗಳಿಗೆ ಸಮಾನವಾದವು ಇಂಗ್ಲಿಷಿನಲ್ಲಿಲ್ಲ, ಆದ್ದರಿಂದ ಕನ್ನಡದ ಒಂದು ವಾಕ್ಯ, ಒಂದು ಕವನ ಇಂಗ್ಲಿಷ್‌ನಲ್ಲಿ ಸಮರ್ಪಕವಾಗಿ ಬರುವುದಿಲ್ಲ.



● ಜನವರಿ 7, 1998

# ದೇವಳ ಮೈಲಿಗೆ ಆಗಲಿಲ್ಲ!

ಕೆಲವು ದೇವರುಗಳಿಗೆ ಮಹಿಳೆಯರು ಆಗ ಬರುವುದಿಲ್ಲ, ಅವರು ಗರ್ಭಗುಡಿ ಒಳಗೆ ಪ್ರವೇಶಿಸುವುದು ಹಾಗಿರಲಿ, ದೇವಸ್ಥಾನದ ಹೆಬ್ಬಾಗಿಲ ಬಳಿ ಸುಳಿಯಲೂ ಅವಕಾಶ ನೀಡಬಾರದೆಂದು ತಮ್ಮ ಭಕ್ತರಿಗೆ ಕಟ್ಟಪ್ಪಣೆ ಮಾಡಿವೆ. ಅವು ಯಾಕೆ ಹಾಗೆ ಮಾಡಿದವು? ಯಾವಾಗ ಮಾಡಿದವು? ಯಾರಿಗೆ ಹೇಳಿದವು ಎಂಬುದೆಲ್ಲದರ ಮೂಲ ತಿಳಿದಿಲ್ಲವಾದರೂ ಇದು ಬಾಯಿಂದ ಬಾಯಿಗೆ ಬಿದ್ದು 'ಪರಂಪರೆ' ಆಗಿದೆ.

ತಿರುವನಂತಪುರದ ಅನಂತ ಪದ್ಮನಾಭ ದೇವರೂ ಇಂತಹ ಸ್ತ್ರೀದ್ವೇಷಿಗಳ ಗುಂಪಿಗೇ ಸೇರಿದವನು. ಈ ದೇವರಿಗೆ ಒಂದು ವ್ಯಸನ ಇತ್ತೆಂದು ಅನಿಸುತ್ತದೆ. ಅದೇನು ಅಂದರೆ ತರಹೇವಾರಿ ವಜ್ರ, ವೈಢೂರ್ಯ ಖಚಿತ ಚಿನ್ನದ ಒಡವೆಗಳನ್ನು ಮಾಡಿಸಿಕೊಳ್ಳುವುದು. ತನ್ನ ಭಕ್ತರ ಮೂಲಕ ಇದನ್ನು ಹೇಗೋ ಪೂರೈಸಿಕೊಳ್ಳುತ್ತಿದ್ದ. ಹೀಗಾಗಿ ಅಪಾರ ಸಂಪತ್ತನ್ನು ಸಂಗ್ರಹಿಸಿದ್ದ. ಅದನ್ನು ತನ್ನ ದಿವ್ಯ ಸನ್ನಿಧಿಯ ಗುಪ್ತಕೋಣೆಗಳಲ್ಲಿ ಭದ್ರಪಡಿಸಿದ್ದ. ಈ ನಿಧಿ ಇದೆಯಲ್ಲ ಅದು ಒಂದು ರೀತೀಲಿ ನಾಯಿ ಮೊಲೆಯ ಹಾಲಿಗಿಂತಲೂ ಕಡೆಯಾಗಿತ್ತು. ನಾಯಿಯ ಹಾಲು ಅದರ ಮರಿಗಳಿಗಾದರೂ ಆಹಾರ ಆಗುತ್ತೆ. ಇದು ಯಾವುದಕ್ಕೂ ಪ್ರಯೋಜನಕ್ಕೆ ಬಾರದಾಗಿತ್ತು ಎನ್ನುವ ನಾಸ್ತಿಕರಿಗೇನೂ ಕೊರತೆ ಇಲ್ಲ. ಅವರ ಮಾತು ಹಾಗಿರಲಿ. ಈ ಗುಪ್ತನಿಧಿ ಎಷ್ಟು ಇದೆ ಎಂಬುದು ಯಾರ ಅಳತೆಗೂ ಸಿಗುತ್ತಿರಲಿಲ್ಲ. ದೇವರ ಸಮೀಪದ ಭಕ್ತರು ಇದರ ಲಾಭ ಪಡೆಯುತ್ತಿದ್ದರೆಂಬ ಸುದ್ದಿ ಇದೆ. ಅದು ಖಚಿತ ಆಗಿಲ್ಲ. ಆದರೆ ಯಾರದೋ ಚಿತಾವಣೆ ಮೇರೆಗೆ ಈ ದೈವನಿಧಿಯ ಖಚಿತ ಮಾಹಿತಿ ನೀಡುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದ್ದಂತೂ ದಿಟ.

ಸುಪ್ರೀಂಕೋರ್ಟ್ ಆದೇಶವನ್ನೇನೋ ನೀಡಿತು. ಅದಕ್ಕೆ ಏನು ಗೊತ್ತಿರಲಿಲ್ಲ ಅಂದರೆ ನಿಧಿಯನ್ನು ಏಳು ಹೆಡೆಯ ಸರ್ಪ ಕಾವಲು ಕಾಯುತ್ತಿದೆ ಎಂಬುದು! ಅದರ ಅಧ್ಯಯನಕ್ಕೇನಾದರೂ ಇಳಿದರೆ ಸಾವಿಗೆ ಆಹ್ವಾನ ನೀಡಿದಂತೆಯೇ ಸರಿ ಎಂದು ಭಕ್ತರು ನಂಬಿದ್ದರು. ಆದರೆ ಪಾಪಂದಿ ಸರ್ಕಾರ ಇದನ್ನು ಗಣನೆಗೇ ತೆಗೆದುಕೊಳ್ಳದೆ ತನಿಖೆ ಮಾಡಿ ವರದಿ ನೀಡಲು ಸಮಿತಿ ನೇಮಿಸಿತು. ಏನೋ ದೇವರು ದೊಡ್ಡವನು. ತಂಡದ ಸದಸ್ಯರ ಆಯಸ್ಸು ಗಟ್ಟಿ ಮಾಡಿದ. ನಿಧಿ ಕಾಯುತ್ತಿದ್ದ ಏಳು ಹೆಡೆಯ ಸರ್ಪ ಯಾವ ತೊಂದರೆಯೂ ನೀಡದಂತೆ ನೋಡಿಕೊಂಡ! ಅದೇ ಸಮಾಧಾನ.

ಈ ಸಮಾಧಾನ ಇತ್ತಲ್ಲ ಅದು ಅಲ್ಪಕಾಲದ್ದಾಗಿತ್ತು. ಇತರೆ ಕೊಠಡಿಗಳ ತನಿಖೆ ವೇಳೆ ಸರ್ಪದ ಕಣ್ಗಾವಲಿನಿಂದ ಅವರು ತಪ್ಪಿಸಿಕೊಂಡಿರಬಹುದು. ಆದರೆ 'ಎ' ಕೊಠಡಿಯ ಬಾಗಿಲು ತೆರೆದು ಒಳಗೆಹೋದರೆ ಸರ್ಪ ಕಡಿತ ಶತಸ್ಸಿದ್ಧ ಎಂದು ಜನರು ನಂಬಿದ್ದರು. ಈ ನಂಬಿಕೆಗೆ ಕಾರಣವೂ ಇತ್ತು, ಅದರ ಬಾಗಿಲ ಮೇಲೇ ಸರ್ಪದ ಚಿತ್ರ ಇತ್ತು!

ಇದೆಲ್ಲದರ ಅರಿವಿದ್ದರೂ ಪ್ರಾಚ್ಯವಸ್ತು ತಜ್ಞರ ತಂಡ ಸಂಶೋಧನೆಗೆ ಮುಂದಾಯಿತು. ದೇವಸ್ಥಾನದ ಅಧಿಕಾರಿಗಳು ಪ್ರತಿಭಟನೆಗೆ ಇಳಿದರು. ತನಿಖೆಗೆ ಮುಂದಾದರೆ ತಂಡದ ಸದಸ್ಯರ ಸಾವು ಖಚಿತ ಎಂದು ಅಲ್ಲ, ದೇವಳಕ್ಕೆ ಆಗಬಹುದಾದ ಮೈಲಿಗೆ ತಡೆಯಲು! ಯಾಕೆಂದರೆ ತಂಡದ ಸದಸ್ಯರಲ್ಲಿ ಓರ್ವ ಸದಸ್ಯೆಯೂ ಇದ್ದಳು! ಆಕೆ ತಜ್ಞೆಯೇ ಇರಬಹುದು. ಆದರೆ ಹೆಣ್ಣು! ದೇವಳದ ಪ್ರವೇಶ ಪರಂಪರೆಯ ಉಲ್ಲಂಘನೆ!

ಇದು ಪುರುಷಪ್ರಧಾನ ಸಮಾಜ ಹೆಣ್ಣಿನ ಸಹಜ ಹಕ್ಕನ್ನೂ ದಮನ ಮಾಡಲು ರೂಪಿಸಿರುವ ನಿಯಮ ಎಂದು ಮಹಿಳಾಮಣಿಗಳು ಎಗರಾಡಬಹುದು. ಆದರೆ ಪರಂಪರೆ ಉಲ್ಲಂಘನೆಗೆ ತಂಡದ ನಾಯಕನೂ ಸಿದ್ಧ ಇರಲಿಲ್ಲವಂತೆ! ಪುರುಷರ



ತಂಡದಿಂದ ಅಧ್ಯಯನ ನಡೆಸಲು ಆತ ಸಮ್ಮತಿಸಿದನಂತೆ!

ಇದನ್ನು ಪತ್ರಿಕೆಯಲ್ಲಿ ಓದಿದಾಗ ನಮ್ಮ ಊರಿನಲ್ಲೇ ಇರುವ ತಿರುವನಂತಪುರದ ಅಯ್ಯರು ನೆನಪಾದರು. ಅವರು ಪದ್ಮನಾಭನ ಅಖಂಡ ಭಕ್ತರು ಕೂಡ. ಅವರನ್ನು ಕಂಡೆ. 'ಏನು ಅಯ್ಯರೆ ನಿಮ್ಮ ದೇವಸ್ಥಾನದಲ್ಲಿ ಮಹಿಳೆಯರಿಗೆ ಹೀಗೆ ಅವಮಾನ ಮಾಡಬಹುದೆ' ಎಂದು ಕೇಳಿದೆ. ಅದಕ್ಕೆ ಅವರು 'ಅದು ಹಾಗಲ್ಲ ಮಾರಾಯರೆ. ಪಾಪದ ಹೆಂಗಸು ನೋಡಿ. ಅವರಿಗೆ ಒಡವೆ ಮೇಲೆ ಹುಚ್ಚು ಅಲ್ಲವೊ. ಎಣಿಕೆಗೆ ತೊಡಗಿದಾಗ ಒಂದೆರಡು ಬೆಲೆಬಾಳುವ ಆಭರಣಗಳನ್ನು ಅಡಗಿಸಿಕೊಳ್ಳುವುದು ಸಹಜ ಮಾರಾಯರೆ. ಅದನ್ನು ತಡೆಯಲಿಕ್ಕೆ ಅವರು ಹಾಗೆ ಮಾಡಿರುವುದು' ಎಂದರು. ಅದಕ್ಕೆ ನಾನು 'ಏನು ಮಾತು ಅಂತ ಆಡುತ್ತೀರಿ ಅಯ್ಯರೆ. ಕದ್ದರೆ ಸಿಸಿ ಕ್ಯಾಮೆರಾದಲ್ಲಿ ದಾಖಲಾಗುವುದಿಲ್ಲವೊ' ಎಂದು ಅವರ ಮಾತಿಗೆ ಅಸಮ್ಮತಿ ಸೂಚಿಸಿದೆ. ಪ್ರತಿಯಾಗಿ ಅವರು 'ಏನು ಮಾರಾಯರೆ. ನೀವು ತಿಳಿದವರಾಗಿ ಹೀಗೆ ಹೇಳುವುದು ಉಂಟಾ. ಅಪರಾಧ ನಡೆಯುವಾಗ ಸರ್ಕಾರದ ಕ್ಯಾಮೆರಾಗಳು ಕೆಲಸ ಮಾಡಿದ ನಿದರ್ಶನ ಉಂಟಾ. ನೀವೊಂದು' ಎಂದು ತಿರುಗೇಟು ನೀಡಿದರು!

## ಅಣಕ



• ಎಚ್.ಎಲ್.ಕೇಶವಮೂರ್ತಿ

### ರಕ್ತ ಕೊಡೋರ್ನೆ ಕೇಳು!

ಕಾವೇರಿ ನದಿ ನೀರಿನ ವಿವಾದ ತಾರಕಕ್ಕೇರುತ್ತಿತ್ತು. ಪ್ರಚಾರಪ್ರಿಯರಿಗೆ ಸಮೃದ್ಧ ಅವಕಾಶ. ಧರಣಿ ಅಂದರೆ ಅಂತಹವರಿಗೆ 'ಫೋಟೋ ಸೆಷನ್' ಇದ್ದಂತೆ. ಕ್ಯಾಮೆರಾಗಳು ಬರುತ್ತಿದ್ದಂತೆ ಇವರು ಹಾಜರು. ಅವು ಹೋಗುತ್ತಿದ್ದಂತೆ ಇವರೂ ನಾಪತ್ತೆ! ಬಂದರ್ ಭಿ ಆಯಾ, ಕೌವ್ವ ಭಿ ಆಯಾ ಅನ್ನುವಂತ ಸ್ವಾಮಿಗಳೂ ಬಂದರು, ಸಿನಿಮಾ ಮಂದಿಯೂ ಬಂದರು, ರಾಜಕೀಯ ಧುರೀಣರೂ ಬಂದರು. ಹಾಗೆ ಬಂದು ಮಿಂಚಿ ಮಾಯ ಆದರು. ಎಲ್ಲರೂ ಹೀಗೇ ಅನ್ನುವಂತಿಲ್ಲ, ಕಾವೇರಿ ಬತ್ತಿದರೆ ಬದುಕೇ ಬರುಡು ಎಂದು ತಿಳಿದವರೂ ಇದ್ದರು.

ಅವತ್ತು ಪ್ರತಿಭಟನಾ ಧರಣಿಯಲ್ಲಿ ಕುಳಿತೂ ಕುಳಿತೂ ಬೇಸರ ಬಂದಿತು ಅನ್ನುವುದಕ್ಕಿಂತ ಭಾಷಣಗಳ ಭೋರ್ಗರೆತ ತಲೆಚಿಟ್ಟು ಹಿಡಿಸಿತು ಎನ್ನಬಹುದು. ಒಂದು 'ದಂ' ಆದರೂ ಎಳೆದುಬರೋಣ ಎಂದು ಎದ್ದು ಹೊರಟೆ. ನಕ್ಷತ್ರಿಕನಂತೆ ಕ್ಯಾತ ಬೆನ್ನುಬಿದ್ದ.

'ಏನೋ ಕ್ಯಾತ' ಅಂದೆ.

'ನಮಗೆ ಉಳಿಗಾಲ ಇಲ್ಲ ಸಾ' ಅಂದ.

'ನಿಜ ಕಣೊ. ಜಯಲಲಿತಾ ದಿನಾ ಒಂದು ಟಿಎಂಸಿನಾದರೂ ನೀರು ಬುಡಿ ಅಂತ ಕುಂತವ್ಳೆ. ಹಂಗೇನಾದರೂ ಬುಟ್ಟರೆ ಬೆಳೆಗಳಿಗೆ ಇರಲಿ, ಕುಡಿಯೋಕೂ ನೀರು ಇರಲ್ಲ' ಎಂದು ಅವನ ಮಾತನ್ನು ಸಮರ್ಥಿಸಿದೆ.

'ಅದಲ್ಲ ಸಾ. ಅದೆಂಗೋ ಆಯ್ತದೆ. ಅಲ್ಲಿ ಮಾತಾಡಿದ್ರಲ್ಲಾ ಸಾ ಅದ ಕೇಳುಸ್ಕಂಡ್ರ.'

'ಕೇಳಿಸ್ಕಂಡೆ.'

'ಅವರೇನಂದ್ರು ಸಾ. ರಕ್ತ ಕೊಟ್ಟೇವು, ನೀರು ಬಿಡಲ್ಲ ಅಂದ್ರಲ್ವ ಸಾ.'

'ಹೂಂ.'

'ದಿನಾ ಒಂದು ಟಿಎಂಸಿ ರಕ್ತ ಅಂದ್ರೆ ಏನಾಯ್ತು ಸಾ. ಹಂಗೆ ಕೊಟ್ರೆ ಯಾರು ಉಳ್ಕೋರು ಸಾ.'

ಟ್ಯೂಬ್‌ಲೈಟ್ ಹತ್ತಿಕೊಂಡಿತು. ಹೌದ... ತಮಿಳುನಾಡಿಗೆ ನೀರ ಬದಲು ರಕ್ತಹರಿಸಿದರೆ... ಊಹಿಸಲೂ ಭಯಂಕರ ಆಗಿತ್ತು!

ಅದೇ ಗುಂಗಿನಲ್ಲಿ ಇದ್ದವನ್ನ ಕ್ಯಾತನೇ ಎಚ್ಚರಿಸಿದ

'ನೀರು ಅಂದ್ರೇನು ಸಾ.'

'ನೀರು ಅಂದ್ರೆ ನೀರು ಕಣೊ.'

'ಅಲ್ವ ಸಾ. ಆದ್ರಲ್ಲಿ ತಮಿಳುನಾಡು ನೀರು, ಕರ್ನಾಟಕದ ನೀರು ಅಂತ ಇದ್ದಾತಾ ಸಾ.'

'ಇಲ್ಲ.'

'ರಕ್ತದಲ್ಲಿ ಹಂಗಿಲ್ವಲ್ಲ ಸಾ.'

'ಏನೋ ಹಿಂಗಂದ್ರೆ. ರಕ್ತ ಅಂದರೆ ರಕ್ತಾನೇಯ. ತಮಿಳು ರಕ್ತ ಕನ್ನಡ ರಕ್ತ ಅಂತ ಇದೆಯೇನೊ?'

'ಹಂಗಲ್ಲ ಸಾ. ಬ್ಲಡ್ದಲ್ಲಿ ಗ್ರೂಪು ಅನ್ನೋದು ಇರ್ತದಲ್ಲ ಸಾ.'

'ಹೂ ಇರ್ತದೆ.'

'ರಕ್ತ ಬುಡೋರು ಒಂದೇ ಗ್ರೂಪಿಂದ ಬುಟ್ಟಾರೋ ಇಲ್ಲ ಕಲಬೆರಕೆ ರಕ್ತ ಬುಟ್ಟಾರೊ ಸಾ.'

'ಯಾಕೊ?'

'ಅಲ್ಲ ಒಂದೇ ಗ್ರೂಪಿಂದ ಬುಟ್ಟರೆ ಯಾರಿಗಾದರೂ ಅನುಕೂಲ ಆಯ್ತದೆ ಅಂತಾವ.'

'ರಕ್ತ ಕೊಡೋರ್ನೆ ಕೇಳು' ಅಂದೆ!

### ಅವರಿಗೆ ಕೊರತೆ ಇಲ್ಲ!

2004 ನೇ ಇಸವಿ.

ಕೇಂದ್ರದಲ್ಲಿ ಎನ್‌ಡಿಎ ಹೋಗಿ ಯುಪಿಎ ಅಧಿಕಾರಕ್ಕೆ ಬಂತು.

ಮನಮೋಹನ್ ಸಿಂಗ್ ಪ್ರಧಾನಿ ಆದರು.

ಟ್ರಕ್ ಚಾಲಕರಲ್ಲಿ ಸಿಂಗ್‌ಜೀಗಳ ಸಂಖ್ಯೆ ಬಹಳ. ಅವರೆಲ್ಲ ಖುಷಿಯಾಗಿದ್ದರು. ತಮ್ಮ ಕಷ್ಟದ ಅರಿವು ಪ್ರಧಾನಿಗೆ ಇದೆ. ತಮ್ಮ ಬದುಕು ಉತ್ತಮಗೊಳ್ಳಬಹುದು ಎಂಬ ಆಶಯ ಅವರದ್ದಾಗಿತ್ತು, ಅವರ ಮುಖ ಚಹರೆಯೇ ಇದನ್ನು ಸೂಚಿಸುತ್ತಿತ್ತು.

ಉತ್ತಮ ಆಯಿತೆ ಅವರ ಬದುಕು?

ಡೀಸೆಲ್ ದರ ಏರುತ್ತಾ ಹೋಯಿತು!

ಅದೇ 2004 ರ ಟಿವಿ ಸಂದರ್ಶನ. ಮನಮೋಹನ್ ಸಿಂಗ್ ಮಡದಿಯದ್ದು. ಅವರು ಹೇಳಿದ್ದು: ಗ್ಯಾಸ್ ಸಿಲಿಂಡರ್ ದರ ಏರಿಸಧೆ, ಸರಾಗವಾಗಿ ಸಿಗುವಂತಾದರೆ ಸಾಕು!

ಗೃಹಿಣಿಯ ಮನದಾಳದ ಮಾತು.

ಅವರ ಮುದ್ದಿನ ಪತಿ ಪರಮಾತ್ಮ ಮಾಡಿದ್ದೇನು?

ಸಬ್ಸಿಡಿ ಸಿಲೆಂಡರ್‌ಗಳ ಕಡಿತ!

ಈಗ ಅವರ ಪ್ರತಿಕ್ರಿಯೆ ಏನಿರಬಹುದು?

ಕೇಳಿನೋಡಬೇಕು! ●

# ಪೂಜೆ ಹೆಸರಲ್ಲಿ ದೇವರಿಗೇ ಅವಮಾನ

ಡಾ. ವಿಜಯಕುಮಾರ್ ಬೋರಟ್ಟಿಯವರು ಹೇಳಿದಂತೆ, ಯಾರದೇ ಪೂಜೆಯನ್ನು ಮೌಢ್ಯವೆಂದು ಕರೆಯುವ ಹಕ್ಕು ಜ್ಯೋತಿಷಿಗಳಿಗಿಲ್ಲ, ಕಾರಣ ಸಂಪೂರ್ಣ ಜ್ಯೋತಿಷ್ಯವೇ ಮೌಢ್ಯ. (ಲಂಕೇಶ್ 3.10.12) ಮೇಲಾಗಿ ಒಂಭತ್ತು ಗ್ರಹಗಣಾಧರಿಸಿರುವ ಜ್ಯೋತಿಷ್ಯ ನಮ್ಮ ದೇಶದ್ದೂ




ಅಲ್ಲ, ಅದು ಗ್ರೀಸ್ ದೇಶದಿಂದ ಬಂದದ್ದು. ಹಾಗೆ ನೋಡಿದರೆ ಎಲ್ಲಾ ಪುರಾಣಗಳೂ ಕಾಲ್ಪನಿಕ ಕಥೆಗಳು. ಈ ಕಥೆಗಳ ಕಾಲ್ಪನಿಕ ಪಾತ್ರಗಳಲ್ಲಿ ಜನರು ತಮಗಿಷ್ಟ ಬಂದ ಪಾತ್ರವನ್ನು ಪೂಜಿಸಿದರೆ ಅದು ಮೌಢ್ಯವೆನ್ನಲಾಗದು. ರಾವಣನ ಪೂಜೆಗೂ ಇದೇ ತರ್ಕ ಅನ್ವಯ.

5000 ವರ್ಷಗಳ ಹಿಂದೆ ಕೆಲವು ವಿದೇಶಿಗಳು ಚಿತ್ರವಿಚಿತ್ರ ಮಾನವರೂಪದ ಮತ್ತು ಪ್ರಾಣಿರೂಪದ ಬೊಂಬೆಗಳನ್ನು ಹಿಡಿದುಕೊಂಡು ಅವಕ್ಕೆ ಹೊಂದುವ ಕಟ್ಟುಕಥೆಗಳ, ಪುಸ್ತಕಗಳ ಜತೆಗೆ ಭಾರತಕ್ಕೆ ಬಂದರು. ಇಲ್ಲಿಯ ಮುಗ್ಧ ಮೂಲ ನಿವಾಸಿಗಳಿಗೆ ಬೊಂಬೆಯಾಟ ತೋರಿಸಿ ಕಟ್ಟುಕಥೆ ಹೇಳಿ ಜನರ ಮನರಂಜಿಸಿ ನೆಲೆಯೂರಿದರು. ಜನರು ಮನರಂಜನೆಯಲ್ಲಿ ಮುಳುಗಿದ್ದಾಗ ನಯವಾಗಿ ಅವರು ಪರಿಸ್ಥಿತಿಯನ್ನು ಅದಲುಬದಲು ಮಾಡಿದರು. ನಿರ್ಗತಿಕವಾಗಿ ಭಾರತಕ್ಕೆ ಬಂದಿದ್ದ ಆಗಂತುಕರ ಕೈಗೆ ಅಧಿಕಾರ ಮತ್ತು ಸಂಪತ್ತು ಹೋಯಿತು. ಮೂಲನಿವಾಸಿಗಳ ಕೈಗೆ ಬೊಂಬೆಯಾಟ ಬಂತು. ಆದರೆ ಬೊಂಬೆಯಾಟದ ಸೂತ್ರ ಮಾತ್ರ ಆಗಂತುಕರ ಕೈಯಲ್ಲೇ ಉಳಿಯಿತು. ವಿಚಿತ್ರ ರೂಪದ ಬೊಂಬೆಗಳು ದೇವರಾದವು. ಆ ಕಟ್ಟುಕಥೆಗಳೇ ಪುರಾಣವಾದವು. ಮೂಲನಿವಾಸಿಗಳು ನಿರ್ಗತಿಕರಾಗಿ ಆಗಂತುಕರ ಸೇವಕರಾದರು. ಮಕ್ಕಳ ಬೊಂಬೆ-ಮದುವೆಯಾಟ ದೊಡ್ಡವರಿಗೆ ದೇವರ ಕಲ್ಯಾಣವೆನಿಸಿತು. ಇದುವೇ ಮೌಢ್ಯದ ಆದಿ. ಇದುವೇ ಆರ್ಯನ್ನರ ಆಗಮನದ ದುರಂತ ಕಥೆ.

ಆ ಆಗಂತುಕರು ಬರೆದು ತಂದಿದ್ದ ಕಟ್ಟುಕಥೆಗಳಿಗೆ ಸ್ಥಳೀಯ ಸ್ಪರ್ಶ ಕೊಡಲು ಸ್ಥಳೀಯ ಪ್ರಾಕೃತಿಕ ವೈಶಿಷ್ಟ್ಯಗಳನ್ನು ಜೋಡಿಸಲಾಯಿತು. ಸ್ಥಳೀಯ ರಾಜರ ಹೆಸರುಗಳನ್ನು ಪೋಣಿಸಲಾಯಿತು. ಹೊಸ ಕಥೆಗಾರರು-ಕವಿಗಳು



ಹುಟ್ಟಿಕೊಂಡರು. ಇವರು ಹೊಟ್ಟೆಪಾಡಿಗಾಗಿ ರಾಜಾಶ್ರಯ ಪಡೆದರು. ಉಪ್ಪಿನ ಋಣ ತೀರಿಸಲು ತಮ್ಮ ರಾಜನನ್ನು ಹಾಡಿ ಹೊಗಳಿ ದೇವರ ಪಟ್ಟಕ್ಕೇರಿಸಿದರು. ಮತ್ತೂ ಅವನ ವೈರಿಯನ್ನು ದುಷ್ಟನನ್ನಾಗಿ ಚಿತ್ರಿಸಿ ರಾಕ್ಷಸನೆಂದರು. ಹೀಗೆ ಸಣ್ಣದೊಂದು ರಾಜಮನೆತನದೊಳಗಿನ ದಾಯಾದಿ ಕಲಹದ ಕಥೆ ಮಹಾಕಾವ್ಯವಾಯಿತು. ಈ ಎರಡು ಗುಂಪಿನ ನೇತಾರ-ಸಂಚುಕೋರರಲ್ಲಿ ಕುಟಿಲ ಬೌದ್ಧಿಕ ಯುದ್ಧ (Battle of wits) ನಡೆಯಿತು. ಈ ಬೌದ್ಧಿಕ ಯುದ್ಧದಲ್ಲಿ ಗೆದ್ದ ನೇತಾರ ವಿಷ್ಣುವಿನ ಅವತಾರವೆನಿಸಿದನು, ಸೋತವನು ಶಕುನಿಯೆನಿಸಿದನು. ಒಂದು ವೇಳೆ ಅಂದು ಈ ಬೌದ್ಧಿಕ ಯುದ್ಧದಲ್ಲಿ ಶಕುನಿ ಗೆದ್ದಿದ್ದರೆ ಕವಿ-ಕಥೆಗಾರರು ಅವನನ್ನು ದೇವರ ಅವತಾರವನ್ನಾಗಿಸಿ, ಇಂದು ನಮ್ಮ ನಡುವೆ ಶಕುನಿಮೂರ್ತಿ, ಶಕುನಿಸ್ವಾಮಿ, ಶಕುನಿ ಪ್ರಸಾದರೆಂಬ ಹೆಸರಿನ ಜನರು ಇರುವಂತಾಗುತ್ತಿತ್ತು, ಶಕುನಿ ಮಠದಲ್ಲಿ ಶಕುನಿ ತೀರ್ಥ ಸ್ವಾಮಿಗಳಿರುತ್ತಿದ್ದರು.

ಕೆಲವು ವರ್ಷಗಳ ಹಿಂದೆ ನಡೆದ ಮನರಂಜಕ ಘಟನೆಯೊಂದು ಹೀಗಿದೆ: ಅದು ಒಬ್ಬ ಪ್ರಸಿದ್ಧ ಗಣಪತಿ ದೇವಸ್ಥಾನದ ಘನ ಅರ್ಚಕರ ಸನ್ಮಾನ ಸಮಾರಂಭ. ಸಮಾರಂಭದ ಆರಂಭದಲ್ಲಿ ಅರ್ಚಕರ ಪರಿಚಯವನ್ನು ಸಭಿಕರಿಗೆ ಮಾಡಲು ಒಬ್ಬರು ಭಾಷಣ ಶುರು ಮಾಡಿ, ಅರ್ಚಕರನ್ನು ಈ ರೀತಿ ಬಣ್ಣಿಸಿದರು "ಇವರು ಡೊಳ್ಳು ಹೊಟ್ಟೆಯವರು, ಕೋಣಪರು, ವಿಕಾರ ರೂಪದವರು, ಹಲ್ಲು ಮುರುಕರು, ಆನೆಯಂತಹ ಮೂತಿಯುಳ್ಳವರು, ಬೀಸಣಿಗೆಯಂತಹ ಕಿವಿಯವರು, ಸೊಟ್ಟ ಮೂಗಿನವರು, ಕಪ್ಪು ಬಣ್ಣದವರು, ತಿಂಡಿಪೋತರು, ಇವರ ತಾಯಿಯ ಮೈ ತುಂಬಾ ಕೊಳಕು." ಇದನ್ನೆಲ್ಲಾ ಕೇಳಿ ಅರ್ಚಕರು ಸಿಟ್ಟಿನಿಂದ ಪ್ರತಿಭಟಿಸಿದರು. ಆಗ ಭಾಷಣಕಾರ ಹೇಳಿದ್ದಿಷ್ಟೇ "ದಿನಾಲೂ ನೀವು ಗಣಪತಿ ದೇವರಿಗೆ ಹೀಗೆ ತಾನೇ ಹೇಳುತ್ತಾ ಪೂಜಿಸುವುದು. ಲಂಬೋದರ, ಮಹಾಕಾಯ, ಸ್ಥೂಲದೇಹಿ, ವಕ್ರತುಂಡ, ಏಕದಂತ, ಕರಿಮುಖ ಚಾಮರ ಕರ್ಣ, ಶ್ಯಾಮಲ ವರ್ಣ, ಮೋದಕ ಪ್ರಿಯ-ಹೀಗೆ ಸ್ತುತಿಸಿ, ದೇವರಿಗೆ ಬಯ್ಯುತ್ತಾ ಅವಮಾನಿಸುತ್ತಾ ಪೂಜಿಸಬಹುದಾದರೆ, ಅವರ ಪೂಜಾರಿಯನ್ನೂ ಹೀಗೇ ಇದ್ದಂತೆಯೇ ಬಣ್ಣಿಸಿದರೆ ತಪ್ಪೇನು?"

# ರಗಳೆ ರಿಪಿಕಾಳ ಕಿರಿಕ್

ಚಿತ್ರರಂಗದ ಹೊಸ ರಗಳೆ ರಿಪಿಕಾ ಸಿಂಗ್. ಈಕೆ ಝೀ ಟಿ.ವಿ.ಗಾಗಿ ನಡೆಸಿಕೊಡುತ್ತಿರುವ 'ರಿಪಿಕಾ ವಿದ್ ರಗಳೆ' ಎಂಬ ಕಾರ್ಯಕ್ರಮ ಈಗಾಗಲೇ ಚಾನೆಲ್‌ನವರಿಗೆ ನುಂಗಲಾರದ ತುತ್ತಾಗಿದೆ.

ಮೊದಲು, ಈ ರಿಪಿಕಾ ಬಗ್ಗೆ ಒಂದೆರಡು ಮಾತುಗಳು. ಈಕೆ ಖ್ಯಾತ ನಿರ್ದೇಶಕ ರಾಜೇಂದ್ರಸಿಂಗ್ ಬಾಬುರವರ ಕೊನೆಯ ಪುತ್ರಿ. ಮನೆಯವರ ವಿರೋಧವನ್ನು ಬದಿಗೊತ್ತಿ ನಾಯಕಿಯಾಗಬೇಕೆಂಬ ಹಪಾಹಪಿಯಿಂದ ಚಿತ್ರರಂಗಕ್ಕೆ ಕಾಲಿಟ್ಟವಳು. ಈಗಾಗಲೇ ಎರಡು ಮೂರು ಚಿತ್ರಗಳಲ್ಲಿ ಕಾಣಿಸಿಕೊಂಡಿರುವ ರಿಪಿಕಾ ಈಗ ಝೀ ಟಿ.ವಿ.ಯಲ್ಲಿ 'ರಗಳೆ ವಿದ್ ರಿಪಿಕಾ' ಎಂಬ ಟಾಕ್‌ಷೋ ನಡೆಸಿಕೊಡುತ್ತಿದ್ದಾಳೆ.



ಮೊನ್ನೆ ನಾಯಕನಟ ಯೋಗೀಶ್ ಮತ್ತು ರಾಗಿಣಿ ಇವರ ಸಂದರ್ಶನ ಕಾರ್ಯಕ್ರಮದಲ್ಲಿ ರಿಪಿಕಾ ಮಾತುಮಾತಿಗೂ ರಾಗಿಣಿ ಬಳಿ ರಮ್ಯಾಳ ವಿಷಯವನ್ನು ಪ್ರಸ್ತಾಪಿಸುತ್ತಿದ್ದಳಂತೆ. ಒಂದು ಹಂತದಲ್ಲಿ ಇದರಿಂದ ರೋಸಿಹೋದ ರಾಗಿಣಿ "ಈ ಕಾರ್ಯಕ್ರಮ ನಿಲ್ಲಿಸಿ" ಎಂದು ಕ್ಯಾಮರಾಕ್ಕೆ ಕೈ ಅಡ್ಡ ಹಿಡಿದಿದ್ದಾಳೆ. ಅದಾದನಂತರ "ಯಾಕಮ್ಮ ನೀನು ಮಾತುಮಾತಿಗೂ ರಮ್ಯಾಳ ಬಗ್ಗೆ ಪ್ರಶ್ನೆ ಕೇಳುತ್ತಿಯಾ? ಆಕೆಯೇನು ಬಾಲಿವುಡ್ ಸ್ಟಾರಾ? ಅಥವಾ ಚೀಫ್ ಮಿನಿಸ್ಟರಾ?" ಎಂಬಿತ್ಯಾದಿಯಾಗಿ ರೇಗಿಬಿಟ್ಟಿದ್ದಾಳೆ. ಇವೆಲ್ಲವನ್ನೂ ಹಿಡನ್ ಕ್ಯಾಮರಾದಲ್ಲಿ ಚಿತ್ರೀಕರಿಸಿದ ಚಾನೆಲ್ ತಂಡ ಅದನ್ನೇ ಪ್ರೋಮೊ ಮಾಡಿ ಟಿ.ವಿ.ಯಲ್ಲಿ ಬಿತ್ತರಿಸಿತು. ಅಷ್ಟೇ ಅಲ್ಲ ಎಲ್ಲಾ ಪತ್ರಿಕಾ ಕಚೇರಿಗಳಿಗೂ ಅದೇ ವಿಷಯವನ್ನು ಸುದ್ದಿಯಾಗಿ ಕಳುಹಿಸಿಕೊಟ್ಟಿತು.

ಆದರೆ ಈ ಕಾರ್ಯಕ್ರಮ ಪ್ರಸಾರವಾದರೆ ಉದ್ಯಮದಿಂದ ಮುಂದಿನ ದಿನಗಳಲ್ಲಿ ತನಗೆ ಸಹಕಾರ ಸಿಗುವುದಿಲ್ಲ ಎಂದು ಮ್ಯಾನೇಜ್‌ಮೆಂಟ್ ಬಳಿ ರಿಪಿಕಾ ತನ್ನ ಆತಂಕವನ್ನು ತೋಡಿಕೊಂಡಳು. ಆದರೆ ಮ್ಯಾನೇಜ್‌ಮೆಂಟ್ ಆಕೆಯ ಮಾತನ್ನು ಮನ್ನಿಸದೆ ಅದನ್ನು ಪ್ರಸಾರ ಮಾಡುತ್ತೇವೆ ಎಂದು ಹಠ ಹಿಡಿದರು. ಕೊನೆಗೆ ಆಕೆ ತಂದೆ ರಾಜೇಂದ್ರಸಿಂಗ್ ಬಾಬು ಅವರನ್ನೇ ಝೀ ಟಿ.ವಿ. ಕಚೇರಿಗೆ ಕರೆದುಕೊಂಡು ಹೋದಳು. ಆಗ ಅಲ್ಲಿ ಈ ಕಾರ್ಯಕ್ರಮದ ಸ್ವರೂಪ, ಟಿ.ಆರ್.ಪಿ. ರೇಟ್ ಬಗ್ಗೆ ಒಂದಿಷ್ಟು ಚರ್ಚೆಯಾಯಿತು. ಆಗಲೂ ಮ್ಯಾನೇಜ್‌ಮೆಂಟ್ ಇದರ ಪ್ರಸಾರವನ್ನು ನಿಲ್ಲಿಸುವುದಿಲ್ಲ ಎಂದು ಹೇಳಿತು.

ಈ ಮಧ್ಯೆ ಇಡೀ ಎಪಿಸೋಡ್ ಬಗ್ಗೆ ಸುದೀಪ್‌ಗೆ ತಿಳಿಸಿದ ರಾಗಿಣಿ ತನಗೆ ನ್ಯಾಯ ದೊರಕಿಸಿಕೊಡುವಂತೆ ಕೇಳಿಕೊಂಡಳು. ಇತ್ತೀಚೆಗೆ ಸುದೀಪ್ ಸುಮಾರು ಎರಡು ಡಜನ್ ಹೊಸ ನಾಯಕ-ನಾಯಕಿಯರಿಗೆ ಬಿಗ್‌ಬಾಸ್ ಆಗಿರುವುದು ನಿಮ್ಮೆಲ್ಲರಿಗೆ ಗೊತ್ತಿದೆ. ಸಹಜವಾಗಿ ಸುದೀಪ್ ಝೀ ಟಿ.ವಿ. ಮ್ಯಾನೇಜ್‌ಮೆಂಟ್‌ಗೆ ಫೋನ್ ಮಾಡಿ "ನೋಡಿ, ರಾಗಿಣಿ ನಿಲ್ಲಿಸಿ ಎಂದು ಹೇಳಿದ ನಂತರವೂ ಚಿತ್ರೀಕರಿಸಿದ ಭಾಗವನ್ನು ನೀವು ಪ್ರಸಾರ ಮಾಡಬಾರದು. ಅದು ವೃತ್ತಿಧರ್ಮವಲ್ಲ. ಒಂದು ವೇಳೆ ನೀವು ಪ್ರಸಾರ ಮಾಡುವುದೇ ಆದಲ್ಲಿ ಮುಂದೆ ನಾವ್ಯಾರೂ ನಿಮ್ಮ ಚಾನಲ್ ಜೊತೆ ಸಹಕರಿಸುವುದಿಲ್ಲ" ಎಂದು ನಯವಾಗಿಯೇ ದಮಕಿ ಹೊಡೆದರು. ಅದಾದನಂತರ ಝೀ ಟಿ.ವಿ ರಮ್ಯ ಬಗ್ಗೆ ರಾಗಿಣಿ ಆಡಿದ ಮಾತುಗಳನ್ನು ಕತ್ತರಿಸಿ ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ಆದರೆ ರಮ್ಯ ಕುರಿತು ರಾಗಿಣಿ ಆಡಿದ ಮಾತಿನ ಕೆಲವು ಅಂಶಗಳು ಹಲವು ಪತ್ರಿಕೆಗಳಲ್ಲಿ ಅದೇರೀತಿ ಪ್ರಕಟವಾಯಿತು.




ಈ ಕಾರ್ಯಕ್ರಮ ಖಂಡಿತವಾಗಿಯೂ ಉದ್ಯಮದಲ್ಲಿ ಕೆಲವರ ಮನಸ್ಸನ್ನು ನೋಯಿಸುತ್ತದೆ ಎಂದು ನಾವು ಆರಂಭದಲ್ಲಿಯೇ ಎಚ್ಚರಿಕೆ ನೀಡಿದ್ದೆವು. ಈ ಹಿಂದೆ ಗಾಸಿಪ್ ಬರೆದ ಪತ್ರಕರ್ತರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದ ಉದ್ಯಮದ ಕಲಾವಿದರು ಈಗ ಸ್ವತಃ ಅವರದೇ ಕುಟುಂಬದ ಸದಸ್ಯರನ್ನು ತರಾಟೆಗೆ ತೆಗೆದುಕೊಳ್ಳುತ್ತಿರುವುದು ತಮಾಷೆಯಾಗಿಯೇ ಕಾಣಿಸುತ್ತಿದೆ.

ರಿಪಿಕ ಮಾತುಮಾತಿಗೂ ಯಾಕೆ ರಮ್ಯಳ ಹೆಸರನ್ನು ಪ್ರಸ್ತಾಪಿಸುತ್ತಿದ್ದರು ಎಂಬುದು ಇನ್ನೂ ನಿಗೂಢವಾಗಿದೆ. ಇಲ್ಲಿ ಒಂದು ಸಂಶಯವು ಉದ್ಯಮದವರನ್ನು ಕಾಡುತ್ತಿದೆ. ಅದೇನೆಂದರೆ ರಿಪಿಕ ಮತ್ತು ಐಂದ್ರಿತ ರೈ ಪಕ್ಕಾಪಟ್ಟೆ ಕ್ಲೋಸ್ ಫ್ರೆಂಡ್ಸ್ ಅಂತೆ. ಐಂದ್ರಿತಾ ರೈಗೂ ರಮ್ಯಳಿಗೂ ಅನಾದಿಕಾಲದಿಂದಲೂ ವೈರತ್ವವಿದೆ. ಹೀಗಾಗಿ ರಿಪಿಕ ಉದ್ದೇಶಪೂರ್ವಕವಾಗಿಯೇ ರಮ್ಯಳ ಹೆಸರನ್ನು ಪ್ರಸ್ತಾಪಿಸಿರಬಹುದೇ? ಅಂತೂ-ಇಂತೂ ಉದ್ಯಮದಲ್ಲಿ ಯಾವುದೇ ಕಿರಿಕ್ ಶುರುವಾದರೂ ಅಲ್ಲಿ ರಮ್ಯಳ ಹೆಸರು ಮುಖ್ಯವಾಗಿ ಕೇಳಿಬರುವುದು ನಿಜಕ್ಕೂ ಆಕೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

● ಶೆಣೈ

# 'ಚಾರುಲತ' ನಿರೀಕ್ಷೆ ಬುಡಮೇಲು



'ಚಾರುಲತ' ಚಿತ್ರ ಕುಳ್ಳ ದ್ವಾರಕೀಶ್‌ಗೆ ದೊಡ್ಡ ಆಘಾತ ನೀಡಿದೆ.

ನಾಲ್ಕು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ಮಾಣಗೊಂಡು ಬಿಡುಗಡೆಯಾದ 'ಚಾರುಲತ' ಚಿತ್ರದ ಬಗ್ಗೆ ವಿಮರ್ಶಕರು ಒಳ್ಳೆಯ ಮಾತು ಬರೆದಿದ್ದರೂ ಚಿತ್ರ ಮಾತ್ರ ನಾಲ್ಕೂ ಭಾಷೆಗಳ ಬಾಕ್ಸ್ ಆಫೀಸ್‌ನಲ್ಲಿ ಸಂಪೂರ್ಣವಾಗಿ ಮುಗ್ಗರಿಸಿದೆ. ಈ ಚಿತ್ರ ದ್ವಾರಕೀಶ್‌ಗೆ ಕೋಟ್ಯಾಂತರ ರೂ. ಲಾಭವನ್ನು ತಂದುಕೊಡಬಹುದು ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಎಲ್ಲರ ನಿರೀಕ್ಷೆಯನ್ನು ಪ್ರೇಕ್ಷಕ ಮಹಾಪ್ರಭು ಬುಡಮೇಲು ಮಾಡಿಬಿಟ್ಟಿದ್ದಾರೆ.



'ಚಾರುಲತ' ಹೀಗೆ ಮಾರುಕಟ್ಟೆಯಲ್ಲಿ ಮುಗ್ಗರಿಸಿರುವುದರಿಂದ ಎರಡನೆ ಬಾರಿಗೆ ದ್ವಾರಕೀಶ್ ನಾಲ್ಕು ಭಾಷೆಯಲ್ಲಿ ನಿರ್ಮಿಸಿದ ಚಿತ್ರ ಅವರಿಗೆ ಕೈಕೊಟ್ಟಂತಾಗಿದೆ. ಹಲವು ವರ್ಷಗಳ ಹಿಂದೆ 'ಆಪ್ತಮಿತ್ರ...ಕಾದಲ್ಲಿ ಶೀಲ' ಎಂಬ ಅದ್ದೂರಿ ಚಿತ್ರವನ್ನು ಕೂಡ ದ್ವಾರಕೀಶ್ ಇದೇ ತರಹ ನಾಲ್ಕು ಭಾಷೆಗಳಲ್ಲಿ ನಿರ್ಮಿಸಿ ತುಂಬ ಸಾಲ ಮಾಡಿಕೊಂಡಿದ್ದರು. ಆದರೆ ಈ ಬಾರಿ ಚಿತ್ರ ಸೋತರೂ ದ್ವಾರಕೀಶ್‌ಗೆ ಕೋಟಿಗಟ್ಟಲೆ ಸಾಲವೇನೂ ಆಗುವುದಿಲ್ಲ. ಯಾಕೆಂದರೆ ದ್ವಾರಕೀಶ್ ಮಗ ಯೋಗೀಶ್ ತಮ್ಮ ವ್ಯಾವಹಾರಿಕ ಚತುರತೆಯನ್ನು ತೋರಿಸಿ ಈ ಚಿತ್ರ ಬಿಡುಗಡೆಯಾಗುವ ಮೊದಲೇ ಅವರು ಹಾಕಿದ್ದ ಬಂಡವಾಳ ವಾಪಸ್ ಬರುವಂತೆ ನೋಡಿಕೊಂಡಿದ್ದರು. ಆದರೆ ನಿರೀಕ್ಷಿಸಿದಷ್ಟು ಈ ಚಿತ್ರ ಲಾಭ ಮಾಡಿಲ್ಲವೆಂಬ ಕೊರಗು ಮಾತ್ರ ಅವರನ್ನು ಕಾಡುತ್ತಿದೆ.

# ಕಲಾವಿದರಿಗೆ 5,000 ರೂ. ಮಾಸಾಶನ

'ಪ್ರೇಮ್ ಅಡ್ಡೆ' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭದಲ್ಲಿ ಬಿಎಸ್‌ಆರ್ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಶ್ರೀರಾಮುಲು ಭಾಗವಹಿಸಿದ್ದು ವಿಶೇಷವಾಗಿತ್ತು. ಅಂದು ನಗರದ ರಾಮಮಂದಿರ ಮೈದಾನದಲ್ಲಿ 'ಪ್ರೇಮ್ ಅಡ್ಡೆ' ಆಡಿಯೋ ಬಿಡುಗಡೆ ಮಾಡಿದ ಶ್ರೀರಾಮುಲು "ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕಲಾವಿದರಿಗೆ 5,000 ರೂ. ಮಾಸಾಶನವನ್ನು ನೀಡುತ್ತೇವೆ" ಎಂದು ಹೇಳಿದ್ದು ನಿಜಕ್ಕೂ ತಮಾಷೆಯಾಗಿತ್ತು. ಈ ರಾಜಕಾರಣಿಗಳು ಮುಂದಿನ ಚುನಾವಣೆತನಕ ಸಿನಿಮಾ ಸಮಾರಂಭಕ್ಕೆ ಬಂದು ಈ ತರಹದ ಇನ್ನೆಷ್ಟು ಆಶ್ವಾಸನೆಗಳನ್ನು ನೀಡುತ್ತಾರೋ ನೋಡಬೇಕು.

ಅದೇನೇ ಇರಲಿ, ಸಂಗೀತ ನಿರ್ದೇಶಕ ಹರಿಕೃಷ್ಣ ಅವರ ಸಂಗೀತ ಇತ್ತೀಚೆಗೆ ತನ್ನ ಮಾಧುರ್ಯವನ್ನು ಕಳೆದುಕೊಳ್ಳುತ್ತ ಏಕತಾನತೆಯಿಂದ ಕೂಡುತ್ತಿದೆ ಎಂಬ ಅಪವಾದ ಕೇಳಿಬರಲಾರಂಭಿಸಿತ್ತು. ಆದರೆ, ಅಂತಹ ಅಪವಾದವನ್ನು 'ಪ್ರೇಮ್ ಅಡ್ಡೆ' ಚಿತ್ರದಲ್ಲಿ ಹರಿಕೃಷ್ಣ ಸುಳ್ಳು ಮಾಡಿ ತನ್ನ ತಾಜಾತನವನ್ನು ಪ್ರದರ್ಶಿಸಿದ್ದಾರೆ. ಈ ಚಿತ್ರದ ಹಾಡುಗಳಲ್ಲಿ ಮೂರು ಹಾಡುಗಳು ಹೊಸತನದಿಂದ ತುಂಬಿದ್ದು ಈಗಾಗಲೇ ಕೇಳುಗರ ಮನಸ್ಸನ್ನು ಗೆದ್ದಿದೆ. ಈ ಹಾಡುಗಳು ಮಾರುಕಟ್ಟೆಯಲ್ಲಿ ಈಗಾಗಲೇ ಗಮನ ಸೆಳೆದಿದೆ ಎಂದರೆ ಚಿತ್ರದ ವ್ಯಾಪಾರಕ್ಕೆ ಲಾಭವಾಗುತ್ತದೆ. ಈ ಹಿನ್ನೆಲೆಯಲ್ಲಿ ಬಹುಶಃ 'ಪ್ರೇಮ್ ಅಡ್ಡೆ' ಚಿತ್ರ ನಾಯಕ ಕಂ ನಿರ್ದೇಶಕ ಎನಿಸಿಕೊಂಡಿರುವ ಪ್ರೇಮ್‌ಗೆ ಒಂದು ಹೊಸ ತಾರಾಮೌಲ್ಯ ತಂದುಕೊಡಬಹುದೋ ಎಂಬ ಗುಮಾನಿ ಹುಟ್ಟಿಸಿದೆ.



ಪೂಜೆ-ಮಂತ್ರದ ಹೆಸರಲ್ಲಿ ದೇವರಲ್ಲಿ ಅವಗುಣ ತುಂಬಿಸಿ, ಅವನ್ನು ಬಣ್ಣಿಸಿ ಅವಮಾನಿಸುವುದು ಭಾರತದಲ್ಲಿ ಮಾತ್ರ!

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

## ಜೀವವಿರೋಧಿಗಳ ಮತ್ತು ಜೀವಪರರ ನಡುವಣ ಸಂಘರ್ಷ ನಿತ್ಯ ನಿರಂತರ




'ವಾರ್ತಾಭಾರತಿ'ಗೆ ಹತ್ತು ವರ್ಷ ತುಂಬಿದ ಸಂದರ್ಭದಲ್ಲಿ ಶುಭಹಾರೈಸುತ್ತಾ ಲಂಕೇಶ್ ಬಳಗ ಪ್ರಸ್ತಾಪಿಸಿರುವ ವಿಚಾರಗಳೆಲ್ಲವೂ ಒಪ್ಪುವಂಥದ್ದೆ. ವಿಶೇಷವಾಗಿ, ಅದರಲ್ಲಿ ಪ್ರಕಟವಾಗುವ ಸಂಪಾದಕೀಯಗಳು ಎಷ್ಟೊಂದು ಮೌಲಿಕವಾಗಿರುತ್ತವೆಂದರೆ ಅವನ್ನು ಒಟ್ಟು ಸೇರಿಸಿ ಪ್ರತ್ಯೇಕ ಪುಸ್ತಕವಾಗಿ ಪ್ರಕಟಿಸಿದರೆ ನಿಜಕ್ಕೂ ಅದೊಂದು ಸಾರ್ವಕಾಲಿಕ ಮಹತ್ವದ ಸಂಗ್ರಹವಾಗುವುದರಲ್ಲಿ ಅನುಮಾನವಿಲ್ಲ.


ಇದೇ ಸಂದರ್ಭದಲ್ಲಿ ಇನ್ನೂ ಒಂದು ಮುಖ್ಯ ಅಂಶವನ್ನು ಗಮನಿಸಬೇಕು. ಕರಾವಳಿ ಕರ್ನಾಟಕದ ಈ ಭಾಗ ಒಂದರ್ಥದಲ್ಲಿ ವೈಶಿಷ್ಟ್ಯಗಳ, ವೈವಿಧ್ಯಗಳ ಹಾಗೆಯೇ ವೈರುಧ್ಯಗಳ ಪ್ರದೇಶ. 'ಉದಯ'ಕಾಲದಲ್ಲಿಯೇ ಕೋಮು ವಿಷದ 'ದಿಗಂತ'ವನ್ನು ವಿಸ್ತರಿಸುವ ಪತ್ರಿಕೆಗಳು ಇರುವ ಇಲ್ಲಿಯೇ ಜನದನಿಯ ಸಾರಥಿಯಾಗಿ ಮುಂಗಾರು, ಜನವಾಹಿನಿ ಮೊದಲಾದ ಪತ್ರಿಕೆಗಳು ಕಾಲಕಾಲಕ್ಕೆ ಇಲ್ಲಿ ಹೊಸಬೆಳಕು ಚೆಲ್ಲಿ ತೆಗೆದಿದ್ದವು; ಮತ್ತು ಈಗ ವಾರ್ತಾಭಾರತಿ ಆ ಕೆಲಸವನ್ನು ಮುಂದುವರಿಸಿದೆ. ದ್ವೇಷ, ಹಿಂಸೆ, ಅಸಹನೆಗಳನ್ನೇ ಉಸಿರಾಡುವ ಕಲ್ಲಡ್ಕ ಭಟ್ಟರಂಥವರು ಇರುವ ಈ ನೆಲದಲ್ಲಿಯೇ ಶಾಂತಿ, ಪ್ರೀತಿ, ಸಹಬಾಳ್ವೆ ಪ್ರತಿಪಾದಿಸುತ್ತಾ ಕೋಮುವಾದಿಗಳ ವಿರುದ್ಧ ಹೆಚ್ಚುಕಡಿಮೆ ಏಕಾಂಗಿ ಮತ್ತು ದಿಟ್ಟ ಹೋರಾಟ ನಡೆಸುತ್ತಿರುವ ಜಿ.ರಾಜಶೇಖರ, ಬಾಕ್ರಬೈಲು ಸುರೇಶ ಭಟ್ಟರಂಥವರೂ ಇದ್ದಾರೆ. ಒಟ್ಟಾರೆಯಾಗಿ ಜೀವವಿರೋಧಿಗಳ ಮತ್ತು ಜೀವಪರರ ನಡುವಣ ಸಂಘರ್ಷ ಇಲ್ಲಿ ನಿತ್ಯ ನಿರಂತರವಾಗಿ ನಡೆಯುತ್ತಲೇ ಇದೆ.

ಇನ್ನು, 'ನಮ್ಮ ಮಾಲ್ಗುಡಿ ವಿರುದ್ಧ ಚಮೂ ರಾಡಿ' ಲೇಖನದಲ್ಲಿ (ಪಾರ್ವತೀಶ) '...ಹೀಗೆ ಸಹಿ ಮಾಡಿರುವವರ ಪೈಕಿ ಒಂದಿಬ್ಬರು ಕೊಳಕು ಮನಸ್ಸಿನವರ ಜೊತೆಗೆ ಅನೇಕ ಸಜ್ಜನಿಕೆಯವರ ಹೆಸರೂ ಕಾಣಿಸಿಕೊಂಡಿ ರುವುದು ಆಶ್ಚರ್ಯ ತರಿಸುವಂತಿದೆ' ಎಂಬ ಮಾತು ಸರಿಯಲ್ಲವೇನೋ ಅನಿಸಿತು. ಯಾಕೆಂದರೆ ಆ ಪಟ್ಟಿಯಲ್ಲಿ ಡಾ.ಜಿಎಸ್.ಎಸ್ ಅವರನ್ನು ಹೊರತುಪಡಿಸಿದರೆ ಮಿಕ್ಕ ಹೆಚ್ಚಿನವರು ಯಾವ ಪಕ್ಷದ ಒಲವು ಹೊಂದಿರುವವರು ಎನ್ನುವುದು ಎಂದೋ ಜಾಹೀರಾಗಿ ಹೋಗಿರುವ ಸಂಗತಿ.

- ಶ್ರೀನಿವಾಸ ಕಾರ್ಕಳ, ಮಂಗಳೂರು

## ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸರ್ಕಾರಗಳು ಪಕ್ಷಪಾತಿ ಧೋರಣೆಗಳಿಂದ ದುರುಪಯೋಗ ಪಡಿಸಿಕೊಳ್ಳುವಲ್ಲಿ ನುರಿತವಾಗುವೆ. ಬಲಪಂಥೀಯ ಧೋರಣೆ ಹೊಂದಿರುವವರಿಗೆ ಪ್ರತ್ಯೇಕ ನ್ಯಾಯ, ಎಡಪಂಥೀಯ ಧೋರಣೆ ಹೊಂದಿರುವವರಿಗೆ ಪ್ರತ್ಯೇಕ ನ್ಯಾಯ. ಈ ಧೋರಣೆ ಕೇವಲ ಭಾರತದಲ್ಲಿ ಮಾತ್ರ ಚಾಲಿತವಲ್ಲಿಲ್ಲ, ಇದು ಅಂತರರಾಷ್ಟ್ರೀಯ ಮಟ್ಟದಲ್ಲೂ ನಡೆಯುತ್ತಿದೆ. ಉದಾಹರಣೆಗೆ ವಿಕೀಲೀಕ್ಸ್‌ನ ಸ್ಥಾಪಕ ಜೂಲಿಯನ್ ಅಸ್ಸಾಂಜೆ ಅವರನ್ನು ಸುಳ್ಳು ಆರೋಪದ ಮೇಲೆ ಜೈಲಿಗೆ ದೂಡುವಂತಹ ಪಿತೂರಿ.



ನಮ್ಮ ಹತ್ತಿರದ ಮಯನ್‌ಮಾರ್ ದೇಶದಲ್ಲಿ ಪತ್ರಿಕಾ ಸ್ವಾತಂತ್ರ್ಯವೇ ಇಲ್ಲ. ಕಳೆದ ತಿಂಗಳಷ್ಟೆ ಅಲ್ಲಿನ ಪತ್ರಿಕೆಗಳಿಗೆ ಸೆನ್ಸಾರ್‌ನಿಂದ ಕ್ರೀಡೆ ಮತ್ತು ಮನರಂಜನೆಗೆ ಮಾತ್ರ ಮುಕ್ತಿ ದೊರಕಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಎಲ್ಲಾ ಸರ್ಕಾರಗಳು ದಿನೇದಿನೇ ಹಿಡಿತ ಸಧಿಸಲು ಯತ್ನಿಸುತ್ತಿರುವುದು ಜಗಜ್ಜಾಹೀರಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದಿಂದ ಯಾವುದೇ ದೇಶದ ಜನರಿಗೆ ಒಳಿತಾಗುವುದಿಲ್ಲ.

-ಅಪೂರ್ವ, ಚಿತ್ರದುರ್ಗ

## ಲಂಕೇಶ್‌ರ ನಿಲುವನ್ನು ಚೆನ್ನಾಗಿ ಮುಂದುವರಿಸುತ್ತಿದ್ದೀರಿ

ಇಡೀ ಕರ್ನಾಟಕದಲ್ಲಿ ಪಟ್ಟಭದ್ರರ ಚಿಂತನೆಯಿಂದ ವಿಮುಖವಾಗಿ ಚಿಂತಿಸುವ ನಿಲುವನ್ನು ಹೊಂದಿರುವ ಪತ್ರಿಕೆ ನಿಮ್ಮದೆನ್ನಿಸಿದೆ. ಹಾಗಾಗಿ ನನಗೆ ನಿಮ್ಮ ಕಾಲಂ, ಲೇಖನ, ಚಿಂತನೆಗಳು ಇಷ್ಟ. ನಿಮ್ಮ ತಂದೆ ಲಂಕೇಶ್‌ರ ನಿಲುವನ್ನು ತುಂಬಾ ಚೆನ್ನಾಗಿ ಮುಂದುವರಿಸಿಕೊಂಡು ಬರುತ್ತಿದ್ದೀರಾ. ನಿಮ್ಮ ಪ್ರಯತ್ನ ನಿರಂತರವಾಗಿ ಸಾಗಲಿ. ನಮ್ಮ ಬೆಂಬಲ ನಿಮ್ಮೆಲ್ಲರಿಗಿದೆ.

ಒಂದು ಚಿಕ್ಕ ಸಲಹೆ ಕೊಡಲಾ? ಈಗ ಜಾಗತೀಕರಣದ ಹೆಸರಲ್ಲಿ ಎಲ್ಲ ಕಾರ್ಪೊರೇಟ್‌ಗಳು (ಸಾಹುಕಾರರು) ಭ್ರಷ್ಟ ರಾಜಕಾರಣಿಗಳು ತುಂಬಾ ಧೈರ್ಯದಿಂದ ದಿನದಿಂದ ದಿನಕ್ಕೆ ದರ ಏರಿಸುತ್ತ ಚಳವಳಿಗಳ ಬೆನ್ನಿಗೆ ಲಾಠಿಯಿಂದ ಬಡಿದು ಮುರಿಯುವ ಅನಿಷ್ಟ ಪದ್ಧತಿಯನ್ನು ಮುಂದುವರಿಸಿವೆ. ಇವರ ದುಷ್ಟತನವನ್ನು, ಭ್ರಷ್ಟಾಚಾರವನ್ನೂ ಈಗ ಹೊರಹಾಕುತ್ತಿರುವುದಕ್ಕಿಂತ ಹೆಚ್ಚಾಗಿ ಬರೆದು ಇದರ ಬಗ್ಗೆ ದಯವಿಟ್ಟು ಜನಗಳಿಗೆ ತಿಳಿಸಿ ಉಪಕರಿಸಿ. ಕಲಬೆರಕೆಯಂತೂ ಮಿತಿಮಿರಿ ಹೋಗುತ್ತಿದೆ. ಶ್ರೀಮಂತ, ಬಡವ ಭೇದವಿಲ್ಲದೇ ಆಹಾರ ಎಂಬ ವಿಷವನ್ನು ಸೇವಿಸಬೇಕಾಗಿದೆ. ಇದನ್ನೂ (ರ್‍ಯಾಕೆಟ್) ಸಾಧ್ಯವಾದರೆ ಜನರಿಗೆ ತಿಳಿಸಿ ಉಪಕರಿಸಿ.

ಈ ಮಹಾನ್ ಕೆಲಸಕ್ಕೆ ಎಷ್ಟೇ ಅಡೆತಡೆ ಬಂದರೂ ಎದುರಿಸುವ ಮನಃಶಕ್ತಿ ನಿಮ್ಮೆಲ್ಲರಿಗೂ ಬರಲಿ. ಪತ್ರಿಕೆ ನಮ್ಮಂಥ ಮೂಕ ಜನತೆಯ, ಶೋಷಿತರ ಧ್ವನಿಯಾಗಲಿ. ನಿಮ್ಮೆಲ್ಲರಿಗೂ ಶುಭವಾಗಲಿ.

-ರಾಜಶೇಖರ ಹೆಬ್ಬೂರ, ಶಿರಸಿ

ಆರ್.ಕೆ.ನಾರಾಯಣ್ ಅವರ ಸಜ್ಜನಿಕೆ, ಆಶಯಗಳನ್ನು ಗ್ರಹಿಸಲಾಗದವರ ಸಣ್ಣತನಕ್ಕೆ ಧಿಕ್ಕಾರವಿರಲಿ.

- ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 10-10-2012 RNI No. KARKAN2005/14…

# ನಿರ್ಮಾಣಕ್ಕೆ ವಿಜಯ್




ದುನಿಯಾ ವಿಜಿ ಕೊನೆಗೂ ನಿರ್ಮಾಪಕರಾಗಿದ್ದಾರೆ. ಕಳೆದ ಹಲವಾರು ವರ್ಷಗಳಿಂದ ಸಿನಿಮಾ ನಿರ್ಮಾಣದ ಬಗ್ಗೆ ಆಗಾಗ್ಗೆ ಮಾತನಾಡುತ್ತಿದ್ದ ದುನಿಯಾ ವಿಜಿ ತನ್ನ ಗೆಳೆಯ ಸುರೇಶ್ ಜೊತೆ ಸೇರಿ ನಿರ್ಮಿಸುತ್ತಿರುವ ಚಿತ್ರಕ್ಕೆ 'ಜಯಮ್ಮನ ಮಗ' ಎಂದು ಹೆಸರಿಟ್ಟಿದ್ದಾರೆ. "ಇದು ನಿಮ್ಮ ಆತ್ಮಚರಿತ್ರೆಯೇ?" ಎಂದು ವಿಜಯನ್ನು ಕೇಳಿದರೆ "ಶೇಕಡಾ 20 ರಿಂದ 30 ಭಾಗ ನನ್ನ ಜೀವನದ ಒಂದಿಷ್ಟು ಘಟನೆಗಳು ಇರುತ್ತವೆ. ಆದರೆ ಖಂಡಿತವಾಗಿಯೂ ಸಂಪೂರ್ಣವಾದ ಆತ್ಮಕಥೆಯಲ್ಲ" ಎಂದು ಸ್ಪಷ್ಟೀಕರಣ ನೀಡಿದರು.

'ಜಯಮ್ಮನ ಮಗ' ಚಿತ್ರದ ವಿಶೇಷತೆಯೆಂದರೆ ನಿರ್ದೇಶಕ ಸೂರಿಗೆ ತನ್ನನ್ನು ಪರಿಚಯಿಸಿ 'ದುನಿಯಾ' ಸಿನಿಮಾದಲ್ಲಿ ನಾಯಕ ನಟನಾಗಿ ಅವಕಾಶ ಕೊಡಿಸಿದ ಗೆಳೆಯ ವಿಕಾಸ್ ಅವರಿಗೆ ಈ ಚಿತ್ರದ ನಿರ್ದೇಶನದ ಜವಾಬ್ದಾರಿಯನ್ನು ನೀಡುವ ಮೂಲಕ ವಿಜಯ್ ತನ್ನ ಋಣವನ್ನು ತೀರಿಸಿಕೊಂಡಿದ್ದಾರೆ. ಈ ವಿಕಾಸ್ ರವಿಕಿರಣ್ ಎಂಬ ಹೆಸರಿನಲ್ಲಿ ಟಿ.ವಿ. ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದವರು. ಯೋಗರಾಜ್ ಭಟ್ ಮತ್ತು ಸೂರಿ ಬಳಗದಲ್ಲಿ ಬೆಳೆದ ವಿಕಾಸ್‌ಗೆ ಇದು ಬೆಳ್ಳಿ ತೆರೆಯಲ್ಲಿ ಮೊದಲ ನಿರ್ದೇಶನದ ಅನುಭವ.

ಈ ಚಿತ್ರದಲ್ಲಿ ದುನಿಯಾ ವಿಜಿಯವರ ಮಗ ಸಾಮ್ರಾಟ್ ವಿಜಯ್ ಒಂದು ಹಾಡಿನಲ್ಲಿ ಹೆಜ್ಜೆ ಹಾಕುವ ಮುಖಾಂತರ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಲಿದ್ದಾನೆ. ಅದೇರೀತಿ ದುನಿಯಾ ವಿಜಿ ತನ್ನ ಫೈಟಿಂಗ್ ಮಾಡುವ ಕಲಾವಿದ ಗೆಳೆಯರಲ್ಲಿ ಅನೇಕರನ್ನು ಈ ಚಿತ್ರದಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಆರಡಿ ಎತ್ತರದ ಉದಯ್ ಈ ಚಿತ್ರದ ಮುಖಾಂತರ ಖಳನಾಯಕನಾಗಿ ಪಾದಾರ್ಪಣೆ ಮಾಡಲಿದ್ದಾರೆ. ಮತ್ತೊಬ್ಬ ಕಲಾವಿದ ಈ ಚಿತ್ರದ ಮುಖಾಂತರ ಸ್ವತಂತ್ರವಾಗಿ ಫೈಟ್ ಮಾಸ್ಟರ್ ಆಗಲಿದ್ದಾರೆ.

ಹೀಗೆ ತನ್ನ ಗೆಳೆಯರೊಂದಿಗೆ ಸೇರಿ ತನ್ನದೇ ಆದ ಸ್ವಂತ ನಿರ್ಮಾಣದ ಚಿತ್ರಕ್ಕೆ ಕೈ ಹಾಕಿರುವ ದುನಿಯಾ ವಿಜಿ ಈ ಚಿತ್ರವನ್ನು ಕುಟುಂಬದ ಸದಸ್ಯರೆಲ್ಲರೂ ಜೊತೆಯಾಗಿ ನೋಡುವಂತೆ ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ. ವಿಜಯ್‌ರ ಈ ಹೊಸ ಪ್ರಯತ್ನಕ್ಕೆ ಯಶಸ್ಸು ಸಿಗಲಿ...

# ಉಪ್ಪಿಯ ಮತ್ತೊಂದು ಮುಖ ಅನಾವರಣ



ತನ್ನ ನಾಯಕ ನಟನ ಇಮೇಜಿನ ಹಂಗಿಲ್ಲದೆ ವಿಭಿನ್ನ ರೀತಿಯ ಪಾತ್ರಗಳನ್ನು ನಿರ್ವಹಿಸುತ್ತ ಬಂದಿರುವ ಕನ್ನಡ ಚಿತ್ರರಂಗದ ಏಕೈಕ ನಟ ಅಂದರೆ ರಿಯಲ್ ಸ್ಟಾರ್ ಉಪೇಂದ್ರ. ಆರಂಭದ ದಿನಗಳಿಂದಲೂ ತನ್ನನ್ನು ತಾನೇ ಗೇಲಿ ಮಾಡುತ್ತ ನಾಯಕನ ಪಟ್ಟಕ್ಕೇರಿದ ಉಪೇಂದ್ರ ಸ್ಫುರದ್ರೂಪಿ ಅಲ್ಲ, ಹಾಗೆ ನೋಡಿದರೆ ಹೀರೋ ಆಗಲು ಬಯಸುವವನು ಸುಂದರನಾಗಿರಬೇಕು ಎಂಬ ಮಿಥ್‌ಅನ್ನು ಮೊದಲು ಸುಳ್ಳು ಮಾಡಿದ್ದು ಉಪೇಂದ್ರ ಅವರ ಗುರು ಕಾಶಿನಾಥ್. ಅದಾದ ನಂತರ ಸ್ವತಃ ಉಪೇಂದ್ರ.

ಈಗಾಗಲೇ ಹಲವಾರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡು ಜನರ ಮೆಚ್ಚುಗೆಯನ್ನು ಪಡೆದಿರುವ ಉಪೇಂದ್ರ ಇತ್ತೀಚೆಗೆ 'ಗಾಡ್‌ಫಾದರ್' ಚಿತ್ರದಲ್ಲಿ ಹೆಣ್ಣಿನ ಪಾತ್ರದಲ್ಲಿ ಕಾಣಿಸಿಕೊಂಡು, ಭರತನಾಟ್ಯ ಮಾಡಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಇದೀಗ 'ಕಲ್ಪನಾ' ಎಂಬ ಚಿತ್ರದ ಮುಖಾಂತರ ಉಪೇಂದ್ರ ಮತ್ತೊಮ್ಮೆ ತನ್ನ ಪ್ರತಿಭೆಯ ಮತ್ತೊಂದು ಮುಖವನ್ನು ಅನಾವರಣಗೊಳಿಸಲಿದ್ದಾರೆ.

ತೆಲುಗಿನ ಖ್ಯಾತ ನಿರ್ದೇಶಕ ರಾಮ್‌ನಾರಾಯಣ್ ಅವರ ನೂರ ಇಪ್ಪತ್ತೈದನೇ ಚಿತ್ರವಾದ 'ಕಲ್ಪನಾ' ಅವರದೇ ನಿರ್ದೇಶನದ ತೆಲುಗು ಚಿತ್ರ 'ಕಾಂಚನ'ದ ರೀಮೇ… ಇದು ಆಂಧ್ರದಲ್ಲಿ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಗಳಿಸಿದ್ದು ಮಾತ್ರವಲ್ಲ, ಪ್ರೇಕ್ಷಕರ ಮೆಚ್ಚುಗೆ… ಪಾತ್ರವಾಗಿತ್ತು. ಅಲ್ಲಿ ನಾಯಕಿಯಾಗಿ ನಟಿಸಿದ ಲಕ್ಷ್ಮಿ ರೈ ಇಲ್ಲಿ ಕನ್ನಡದಲ್ಲಿ ಕೂಡ ನಾಯಕಿಯ… ನಟಿಸುತ್ತಿರುವುದು ವಿಶೇಷ. ಅಂದಹಾಗೆ ಈ ಲಕ್ಷ್ಮಿ ರೈ ಬೇರೆ ಯಾರೂ ಅಲ್ಲ. ಅಪ್ಪಟ ಕನ್ನ… ಹುಡುಗಿ. ಆರಂಭದ ದಿನದಲ್ಲಿ ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಬೆಳಗಾಂ… ಕಾಲೇಜು ವಿದ್ಯಾಭ್ಯಾಸ ಮಾಡಿದವಳು. ಕನ್ನಡದಲ್ಲಿ ಇದು ಈಕೆಯ ಪಾಲಿಗೆ ಮೂರನೆಯ … ಅಂದಹಾಗೆ, ಈಕೆ ನಟಿಯಾಗಿ ಸುದ್ದಿ ಮಾಡಿದ್ದಕ್ಕಿಂತಲೂ ಹೆಚ್ಚಾಗಿ ಭಾರತ ಕ್ರಿಕೆಟ್ ತಂ… ನಾಯಕ ಮಹೇಂದ್ರಸಿಂಗ್ ಧೋನಿಯವರ ಪ್ರೇಯಸಿ ಎಂದು ಗಾಸಿಪ್ ಕಾಲಂಗ… ಕಾಣಿಸಿಕೊಂಡಿದ್ದೇ ಹೆಚ್ಚು.

ಅದೇನೇ ಇರಲಿ, ಉಪ್ಪಿ ಈ ಚಿತ್ರದ ಮುಖಾಂತರವಾದರೂ ಮತ್ತೊಮ್ಮೆ ಕಳೆದುಹೋ… ತನ್ನ ತಾರಾಮೌಲ್ಯವನ್ನು ಮತ್ತೆ ಪಡೆಯುತ್ತಾರೆಯೇ? ಎಂದು ಗಾಂಧಿನಗರದವರು ಕುತೂಹಲದಿ… ನೋಡುತ್ತಿದ್ದಾರೆ. ಈ ಚಿತ್ರ ಗೆದ್ದರೆ ಉಪ್ಪಿಗೆ ಮತ್ತೊಮ್ಮೆ ಸಖತ್ ಡಿಮಾಂಡ್ ಬರಬಹು… ಇಲ್ಲದಿದ್ದರೆ, ಹೇಗೂ ಅವರೇ ಸ್ವಂತ ನಿರ್ಮಾಣ ಸಂಸ್ಥೆಯಲ್ಲಿ ಚಿತ್ರ ಮಾಡಲು ಹೊರಟಿದ್ದಾರಲ್ಲ… ಆದರೂ, 'ಕಲ್ಪನಾ' ಬಗ್ಗೆ ಗೊತ್ತಿರುವವರೆಲ್ಲ ಈತನಕ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ…



'ಕಲ್ಪನಾ' ನಾಯಕಿ ಲಕ್ಷ್ಮಿ ರೈ

# 'ಅಟ್ಟಹಾಸ'ಕ್ಕೆ ಕಂಠದಾನ

ಎಂ.ಆರ್.ರಮೇಶ್ ನಿರ್ದೇಶನದ 'ಅಟ್ಟಹಾಸ' ಚಿತ್ರವನ್ನು ಇತ್ತೀಚೆಗೆ ಸೆನ್ಸಾರ್ ಮಂಡಳಿ ಸದಸ್ಯರು ನೋಡಿ ಸರ್ಟಿಫಿಕೇಟ್‌ನ್ನು ನೀಡಿದ್ದಾರೆ. ಡಾ.ರಾಜ್‌ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದನ್ನೆ ಕತೆಯಾಗಿಸಿರುವ ಈ ಚಿತ್ರದ ಬಗ್ಗೆ ರಾಜ್ ಅಭಿಮಾನಿಗಳಿಗೆ ಮಾತ್ರವಲ್ಲ, ಉದ್ಯಮದ ಜನರಲ್ಲೂ ಭಾರೀ ಕುತೂಹಲವಿದೆ. ಅಂದಹಾಗೆ, ಈ ಚಿತ್ರದಲ್ಲಿ ಬರುವ ರಾಜ್‌ಕುಮಾರ್ ಅವರ ಪಾತ್ರವನ್ನು ಹಿಂದಿಯ ಖ್ಯಾತ ನಟ ಸುರೇಶ್ ಒಬೆರಾಯ್ ನಿರ್ವಹಿಸಿರುವುದು ನಿಮಗೆಲ್ಲ ಗೊತ್ತಿರಬಹುದು.



ಈ ಪಾತ್ರಕ್ಕೆ ನಿರ್ದೇಶಕ ರಮೇಶ್‌ರವರು ಯಾರಿಂದ ಕಂಠದಾನ ಮಾಡಿಸುತ್ತಾರೆ ಎಂಬ ಬಗ್ಗೆಯೂ ಉದ್ಯಮದಲ್ಲಿ ದೊಡ್ಡ ಚರ್ಚೆಯಾಗಿತ್ತು. ಆರಂಭದಲ್ಲಿ ರಾಜ್‌ಕುಮಾರ್ ಪಾತ್ರಕ್ಕೆ ಕಂಠದಾನ ಮಾಡಲು ಕಾರ್ಮಿಕ ನಾಯಕ, ನಟ ಅಶೋಕ್ ಒಪ್ಪಿಕೊಂಡಿದ್ದರೂ ಕೊನೆಗೆ ಅದನ್ನು ನಿರಾಕರಿಸಿದ್ದರು. ಆನಂತರ ನಟ ಶ್ರೀನಿವಾಸ ಮೂರ್ತಿಯನ್ನು ಕಂಠದಾನ ಮಾಡುವಂತೆ ನಿರ್ದೇಶಕ ರಮೇಶ್ ಕೇಳಿಕೊಂಡಿ ದ್ದರು. "ನಿಮಗೆ ಅಶೋಕ್‌ರವರನ್ನೇ ಯಾಕೆ ಈ ಪಾತ್ರಕ್ಕೆ ಆಯ್ಕೆ ಮಾಡಲು ಸಾಧ್ಯವಾಗಲಿಲ್ಲ, ಕನ್ನಡದವರು ಯಾರೂ ಸಿಗಲಿಲ್ಲವೇ?" ಎಂದು ಶ್ರೀನಿವಾಸಮೂರ್ತಿ ನಯವಾಗಿ ರೋಪ್ ಹೊಡೆದು ನಿರ್ದೇಶಕ ರಮೇಶ್‌ರವರನ್ನು ಹಿಂದೆ ಕಳಿಸಿದ್ದರು. ಆನಂತರ ನಟ ರಮೇಶ್ ಭಟ್ ಅವರನ್ನೂ ನಿರ್ದೇಶಕರು ಸಂಪರ್ಕಿಸಿದಾಗ ಅವರು ಕೂಡ ನೋ ಎಂದಿದ್ದರು. ಕೊನೆಗೆ ರಾಜ್‌ಕುಮಾರ್ ಅವರ ಪುತ್ರ ರಾಘವೇಂದ್ರ ರಾಜ್‌ಕುಮಾರ್ ಅವರಿಂದ ಕಂಠದಾನ ಮಾಡಿಸಿ ಎಂದು ಕೆಲವರು ರಮೇಶ್‌ಗೆ ಉಪಾಯ ಸೂಚಿಸಿದ್ದರೂ ರಮೇಶ್ ಅದನ್ನು ಮಾಡುವ ಸಾಹಸಕ್ಕೆ ಹೋಗಲಿಲ್ಲ.

ಈ ಎಲ್ಲ ಕಾರಣಗಳಿಂದಾಗಿ ರಾಜ್‌ಕುಮಾರ್‌ರವರ ಪಾತ್ರಕ್ಕೆ ಯಾರು ಕಂಠದಾನ ಮಾಡುತ್ತಾರೆಂಬ ಯಕ್ಷಪ್ರಶ್ನೆ ಕಳೆದ ಕೆಲವು ತಿಂಗಳುಗಳಿಂದ ರಾಜ್ ಅಭಿಮಾನಿಗಳಲ್ಲಿತ್ತು. ಇದೀಗ ಸೆನ್ಸಾರ್ ಮಂಡಳಿ ಕಡೆಯಿಂದ ಬಂದ ಸುದ್ದಿಯ ಪ್ರಕಾರ ಈ ಪಾತ್ರಕ್ಕೆ ಕಂಠದಾನ ಮಾಡಿರುವುದು ಬೇರೆ ಯಾರೂ ಅಲ್ಲ, ಕಂಠದಾನ ಕಲಾವಿದ ಸುದರ್ಶನ್. ಸದ್ಯಕ್ಕೆ 'ಅಟ್ಟಹಾಸ'ಕ್ಕೆ ಸಂಬಂಧಪಟ್ಟಂತೆ ಇಷ್ಟು ಮಾತ್ರ ಸುದ್ದಿ ಬಂದಿದೆ.

# ಪ್ರಚಾರ ಸಿಕ್ಕಿದ್ದಷ್ಟೇ ಲಾಭ





ಈ ವಾರ ಎರಡು ಚಿತ್ರಗಳು ಶತದಿನೋ ತ್ಸವದ ಸಂಭ್ರಮವನ್ನು ಕಾಣುತ್ತಿವೆ. ಒಂದು ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಭಾಗೀರತಿ' ಮತ್ತೊಂದು ಅರ್ಜುನ್ ನಿರ್ದೇಶನದ ಯುವ ನಾಯಕ ನಟ ಧ್ರುವಸರ್ಜ-ರಾಧಿಕಾ ಪಂಡಿತ್ ನಟಿಸಿರುವ 'ಅದ್ದೂರಿ'.

ಈ ವರ್ಷದ ಮೊದಲ ಶತ ದಿನೋತ್ಸವ ಚಿತ್ರವೆಂದು 'ಭಾಗೀರತಿ' ನಿರ್ಮಾಪಕ ಶ್ರೀನಿವಾಸ್ ಪತ್ರಿಕಾಗೋಷ್ಠಿ ಕರೆದರಲ್ಲದೆ ಪತ್ರಿಕಾ ಜಾಹೀರಾತು ನೀಡಿ ತಮ್ಮ ಸಾಧನೆಯನ್ನು ತಾವೇ ಸಿಕ್ಕಾಪಟ್ಟೆ ಹೇಳಿಕೊಂಡಿ ದ್ದರು. ಮಾಗಡಿಯಲ್ಲಿರುವ ಅವರ ಕಲ್ಯಾಣ ಮಂಟಪದಲ್ಲಿ ಈ ಚಿತ್ರದ ಶತದಿನೋತ್ಸವವನ್ನು ಜಾತ್ರೆಯ ಮಾದರಿಯಲ್ಲಿ ಆಚರಿಸಿಯೂ ಆಯಿತು. ಇಷ್ಟಾಗಿಯೂ ಬೆಂಗಳೂರಿನ ಕೈಲಾಶ್ ಚಿತ್ರಮಂದಿರದಲ್ಲಿ ಈ ಚಿತ್ರ ನೂರು ದಿನ ಕಂಡಿದ್ದು ಸ್ವಾಗತಾರ್ಹ

ಇದೇ ಹೊತ್ತಿಗೆ ಯಾವುದೇ ಸದ್ದುಗದ್ದಲ ವಿಲ್ಲದೆ ನೂರು ದಿನ ಪೂರೈಸಿರುವ 'ಅದ್ದೂರಿ' ಚಿತ್ರತಂಡ ಎಲ್ಲೂ ಏನನ್ನೂ ಮಾತನಾಡುತ್ತಿಲ್ಲ. ಪತ್ರಿಕಾ ಗೋಷ್ಠಿಯನ್ನೂ ಕರೆದಿಲ್ಲ. ಶತದಿನೋತ್ಸವದ ಸಂತಸವನ್ನು ಯಾರೊಂದಿಗೂ ಹಂಚಿಕೊಂ… ಅಷ್ಟೇ ಯಾಕೆ? ಶತದಿನೋತ್ಸವ ಮಾಡುವ ಬಗ್ಗೆ ಅವರಿನ್ನೂ ಆಲೋಚಿಸಿಯೂ ಇಲ್…

'ಅದ್ದೂರಿ' ಚಿತ್ರ ಶತದಿನೋತ್ಸವ ಆಚರಿಸಿ ನಿರ್ಮಾಪಕನಿಗೆ ಲಾಭ ತಂದುಕೊ… 'ಬಾಗೀರತಿ' ಚಿತ್ರದಿಂದ ನಿರ್ಮಾಪಕ ಶ್ರೀನಿವಾಸ್‌ಗೆ ಪ್ರಚಾರ ಸಿಕ್ಕಿದ್ದಷ್ಟೇ ಲಾಭ … ಆರ್ಥಿಕವಾಗಿ ಸ್ವಲ್ಪ ನಷ್ಟವೇ ಆಗಿದೆ. ಇದು ಎರಡು ಶತದಿನೋತ್ಸವ ಚಿತ್ರಗ… ಸಂಬಂಧಪಟ್ಟ ಒಂದು ಸಣ್ಣ ಟಿಪ್ಪಣಿ.

● ಶೇಣ…



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com